ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಸಂದರ್ಶನ ಮೂಡ್ನಾಕೂಡು

ರಂಗತಂಡ ಪ್ರೊಫಿಲಿಯೊ

ಜುಲೈ 31, 2013 ಪುಟ 20 ರೂ. 14/-

ಸೂರು-ದಾವಣಗೆರೆ-ರಾಯಚೂರು-ಬೀದರ್



ಗ್ರೀನ್‌ಬಡ್ಸ್ ರವೀಂದ್ರ 300 ಕೋಟಿ ವಂಚಿಸಿದ



ಶ್ರುತಿ ಬದುಕಲ್ಲಿ ಇನ್ನಷ್ಟು ಕಷ್ಟಗಳು



ಮಂಗಳೂರು ಪತ್ನಿ ಕೊಂದ ಪತ್ರಕರ್ತ

ಮಂಡ್ಯ ಬಿಟ್ಟ ಹೆಂಡತಿ ಮನೆಗೆ ಹಿಟ್ಟಿಗೆ ಹೋದ ಆತ್ಮಾನಂದ



ಹುಬ್ಬಳ್ಳಿ 'ಶಿರ್ಸಿ' ಮಲ್ಲಿಗೆ ರಾದ್ಧಾಂತ



ಬಾರ್ ಕೃಷ್ಣಪ್ಪನ ಕಾರ್ ನರಮೇಧ

ಸಿಂ ಮಹಿಳೆ: ಮಸೀದಿ-ಶಾಲೆ ಪ್ರವೇಶದ ಸವಾಲುಗಳು



ಸಂಪಾದಕ

• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಇವು ಚೆದುರಿದ ಚಿತ್ರಗಳಂತಿರುವ ನೆನಪುಗಳು.

ಕೆಲವರಿರುತ್ತಾರೆ. ಅಂತವರ ಮಾತು, ಖಡಕ್ ವ್ಯಕ್ತಿತ್ವ, ಬದುಕುಗಳೆಲ್ಲಾ ಗಟ್ಟಿಯಾದ ಸೀಲು ಹೊಡೆದಂತೆ ಮನಸ್ಸಿನಲ್ಲಿ ನಿಂತು ಬಿಟ್ಟಿರುತ್ತವೆ.

ಬೀದರ್‌ನ 'ದಮನ್' ಪಾಟೀಲ ಯಾನೆ ವಿಶ್ವನಾಥ ಪಾಟೀಲ ಅಂತವರಲ್ಲಿ ಒಬ್ಬರು.


ದೆಕ್ಕನ್‌ನ ಪಾಳೇಗಾರಿಕೆಯ ನೆಲದಲ್ಲಿ ನಿಂತು ದಶಕಗಳ ಕಾಲ ಅದರ ವಿರುದ್ಧ ಹೋರಾಡಿದ ಪಾಟೀಲರು ಓರ್ವ ಪತ್ರಕರ್ತ.

'ದಮನ್' ಅವರ ಪತ್ರಿಕೆಯ ಹೆಸರು!

ಮುಂದಿನ ಶುಕ್ರವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪಾಟೀಲರಿಗೊಂದು ಪುಟ್ಟ ಅಭಿನಂದನಾ ಕಾರ್ಯಕ್ರಮ ನಡೆಯುತ್ತಿದೆ. ದಿಟ್ಟತನದಿಂದ ಪತ್ರಿಕೋದ್ಯಮದಲ್ಲಿ ತೊಡಗಿರುವವರಿಗೆ ಮಲೆನಾಡಿನ ಕಿಟ್ಟಪ್ಪಗೌಡ-ರುಕ್ಮಿಣಮ್ಮ ಹೆಸರಿನಲ್ಲಿ ಪ್ರತಿ ವರ್ಷ ಒಂದು ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಈ ಬಾರಿಯ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿ ನಾನು ಹಾಗೂ ಪತ್ರಕರ್ತ ಮಿತ್ರ ರಾಜಶೇಖರ ಹತಗುಂದಿ ಇದ್ದೆವು. ಮೊದಲೇ ಏನನ್ನೂ ಚರ್ಚಿಸಿಕೊಂಡಿರದಿದ್ದರು ನಾವಿಬ್ಬರೂ ದಮನ್ ಪಾಟೀಲರ ಹೆಸರನ್ನೇ ಪ್ರಶಸ್ತಿಗೆ ಸೂಚಿಸಿದ್ದೆವು.

ಅದು ವಿಶ್ವನಾಥ್ ಪಾಟೀಲರನ್ನು ಬಲ್ಲವರು ತೋರಬೇಕಾದ ಗೌರವವಾಗಿತ್ತಷ್ಟೆ. ಔರಾದ್ ತಾಲ್ಲೂಕಿನ ಹತ್ಯಾಳ್ ಗ್ರಾಮದ ಲಿಂಗಾಯತ ರೈತ ಕುಟುಂಬದ ಪಾಟೀಲ್ ಬೀದರ್ ವಾರ್ತಾ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದರು. ಅಲ್ಲಿ ನಿರಾಳವಾಗಿರಲು ಮನಸ್ಸುಗೊಪ್ಪದೆ ರಾಜೀನಾಮೆ ಕೊಟ್ಟು ಬೀದರ್ ಶಹರದಲ್ಲಿ 1970ರಲ್ಲಿ 'ದಮನ್' ಪ್ರಾರಂಭಿಸಿದಾಗ ಅಲ್ಲಿ ಪ್ರಜಾಪ್ರಭುತ್ವವೇ ಇರಲಿಲ್ಲ.



ಬಂಜಗೆರೆ ಕೈಕಾಲಿಗೆ ಬೇಡಿ ತೊಡಿಸಿದ್ದ ಪೊಲೀಸರು

ಐದು ವರ್ಷಕ್ಕೊಮ್ಮೆ ಎಲೆಕ್ಷನ್ ಆದ ಮೇಲೆ ಜನ ಫ್ಯೂಡಲ್ ಧಣಿಗಳಿಗೆ ಸಲಾಂ ಹೊಡೆಯುತ್ತ ಬದುಕುತ್ತಿದ್ದರು. ಅಲ್ಲಿನ ಪೊಲೀಸು, ಅಧಿಕಾರಿಗಳೆಲ್ಲ ನೈಜಾಂಶಾಹಿಯ ಮುಂದುವರೆದ ಭಾಗದಂತೆ ಫ್ಯೂಡಲ್ ಧಣಿಗಳ ಆಸ್ಥಾನದಲ್ಲಿ ಪಾತ್ರಾಭಿನಯ ಮಾಡಿಕೊಂಡಿರುತ್ತಿದ್ದರು.

ಆದರೆ ವಿಶ್ವನಾಥ್ ಪಾಟೀಲರ 'ದಮನ್' ಇದನ್ನು ಅಲ್ಲಾಡಿಸತೊಡಗಿತು. ದಮನ್ ಒಂದು ಹಿಂದಿ ದಿನಪತ್ರಿಕೆ. ಬೀದರಿನ ವೈಶಿಷ್ಟ್ಯ ಏನೆಂದರೆ ಅಲ್ಲಿ ಕನ್ನಡಕ್ಕೆ ಕಡಿಮೆ ಕಿಮ್ಮತ್ತು ಈಗಲೂ ಅಲ್ಲಿ ಉರ್ದು, ಇಂಗ್ಲೀಷ್ ಪತ್ರಿಕೆಗಳದ್ದೇ ಮೇಲುಗೈ. 'ಬೀದರ್ ಕಿ ಅವಾಜ್' ಇವತ್ತಿಗೂ ಅಲ್ಲಿನ ಪಾಪ್ಯುಲರ್ ಪತ್ರಿಕೆ. ವಿಶ್ವನಾಥ್ ಪಾಟೀಲರು ತಮ್ಮ ದಮನ್‌ನೊಂದಿಗೆ 'ದಿ ಹಿಂದೂ' ಇಂಗ್ಲೀಷ್ ದಿನಪತ್ರಿಕೆಯ ಜಿಲ್ಲಾ ವರದಿಗಾರರಾಗಿಯೂ ಕೆಲಸ ಮಾಡಿದವರು. ಎಡಪಂಥೀಯ ರಾಜಕೀಯ ಸಿದ್ಧಾಂತಗಳ ಒಲವಿದ್ದ ಪಾಟೀಲರು 'ಸಮುದಾಯ' ರಂಗ ತಂಡಕ್ಕೂ ಬೀದರಿನಲ್ಲಿ ಪೋಷಣೆ ನೀಡಿದವರು.

ದಮನ್ ಪತ್ರಿಕೆ ಆಗ ಬೀದರಿನಲ್ಲಿ ಅದೆಂತಾ ಸೆನ್ಸೇಷನ್ ಸೃಷ್ಟಿಸಿತ್ತೆಂದರೆ ಎಲ್ಲಿ ಏನು ಬದ್ಮಾಶಿ ಆಗುತ್ತೆ ಅಂತವರ ವಿರುದ್ಧ ದಮನ್ ನಿರ್ದಾಕ್ಷಿಣ್ಯವಾಗಿ ಬರೆದು ಖಂಡಿಸುತ್ತಿತ್ತು, ಮಂತ್ರಿ, ಶಾಸಕ, ಅಧಿಕಾರಿಗಳೆಲ್ಲಾ ತಾವು ತಪ್ಪು ಮಾಡಿದರೆ ಎಲ್ಲಿ ದಮನ್‌ನಲ್ಲಿ ಬರ‍್ತದೊಂತ ಭೀತಿ ಪಡುತ್ತಿದ್ದರು. ದಮನ್‌ನ ಪ್ರತಿರೋಧ ಹೆಚ್ಚಾಗುತ್ತಿದ್ದಂತೆ ಪಾಟೀಲರ ಮೇಲೆ ಹಮ್ಲಾ ಕೂಡಾ ಆದವು. ಹುಮ್ನಾಬಾದಿನ ಹಾಲಿ ಶಾಸಕ ಭೂಗಳ್ಳ ಅಶೋಕ್ ಖೇಣಿಯ ತಂದೆ ಶಂಕರ್ ಖೇಣಿಯೇ ಖುದ್ದು ಒಮ್ಮೆ ಜನ ಬಿಟ್ಟು ಪಾಟೀಲರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿಸಿದ್ದ. ಸಾವಿರಾರು ಎಕರೆ ಜಮೀನಿದ್ದ ಧಣಿ ಶಂಕರ ಖೇಣಿಗೆ ಜುಜುಬಿ ಪತ್ರಕರ್ತನೊಬ್ಬ ತನ್ನ ದಬ್ಬಾಳಿಕೆಯನ್ನು ಎತ್ತಿ ತೋರಿಸಿದನಲ್ಲ ಎಂಬ ರೊಚ್ಚು. ಔರಾದ್ ಮುಂತಾದೆಡೆಯ ಭೂಮಾಲೀಕರ ಖದರ್ ಈಗಲೂ ಹೇಗಿದೆಯೆಂದರೆ ಜನರು ತಮ್ಮ ಧಣಿಯ ಹೆಸರು ಸೇರಿಸಿಯೇ ತಮ್ಮ ಊರಿನ ಹೆಸರು ಹೇಳಿಕೊಳ್ಳುತ್ತಾರೆ. 'ಖೇಣಿ ರಾಂಚೋಳ್' ಅಂದರೆ ತಾವು ಖೇಣಿಯ ಅಥವಾ ಖೇಣಿಗೆ ಸೇರಿದ ಗ್ರಾಮದವರು ಎಂದರ್ಥ. ಇಂತಾ ನೂರಾರು ರಾಂಚೋಳ್‌ಗಳು ಈಗಲೂ ಬೀದರ್‌ನ ಆಸುಪಾಸಿನಲ್ಲಿವೆ. ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿ ಕೂಡ ಇಂತದ್ದೇ ಒಂದು ಪಾಳೇಗಾರಿಕೆಯ ತುಂಡು. ಎಂ.ಎಸ್. ಸುಂದರರಾಜ್ ನೇತೃತ್ವದ ಕರ್ನಾಟಕ ರೈತ-ಕೂಲಿ ಸಂಘವು ನಾಗಮಾರಪಲ್ಲಿ ವಿರುದ್ಧ ಅನೇಕ ವರ್ಷ ಹೋರಾಡಿತ್ತು, ತೀರಾ ದಮನಕಾರಿಯಾಗಿ ಮೆರೆಯುತ್ತಿದ್ದ ನಾಗಮಾರಪಲ್ಲಿ ಕುಟುಂಬಕ್ಕೆ ಅಲ್ಲಿದ್ದ ನಕ್ಸಲೀಯರೇ ಒಮ್ಮೆ ಕೆಡವಿ ಬಡಿದಿದ್ದರು. ಗುರುಪಾದಪ್ಪನ ಪುಂಡ ಪುತ್ರ ಉಮಾಕಾಂತನ ಮೇಲೆ ಒಂದು ದಿನ ಬೀದರ್ ಟೌನಿನಲ್ಲಿಯೇ ನಕ್ಸಲರು ಗುಂಡು ಹಾರಿಸಿದ್ದರು.

ವಿಶ್ವನಾಥ್ ಪಾಟೀಲರು ಈ ಪಾಳೇಗಾರರನ್ನು ಎಂದೂ ಸಹಿಸಿದವರಲ್ಲ, ಅವರ ನಿಷ್ಠೂರ ಪತ್ರಿಕೋದ್ಯಮ ಹೇಗಿತ್ತೆಂದರೆ ಒಮ್ಮೆ ಜಿಲ್ಲಾ ಪೊಲೀಸ್ ಎಸ್‌ಪಿ ಹಾಗೂ ಡಿವೈಎಸ್‌ಪಿಗಳೇ ಖುದ್ದು ಮುಂದೆ ನಿಂತು ದಮನ್ ಪಾಟೀಲರ ಮೇಲೆ ದಾಳಿ ಮಾಡಿಸಿದ್ದರು. ಗುಲ್ಬರ್ಗಾದ 'ಕ್ರಾಂತಿ' ದಿನಪತ್ರಿಕೆಯ ಸಂಪಾದಕರಾಗಿದ್ದ ಸಿದ್ದರಾಮೇಶ್ ಇಂತಹ ದುಷ್ಟತನಗಳ ವಿರುದ್ಧ ಹೋರಾಡುತ್ತಲೇ ಕೊಲೆಯೂ ಆದರು. ದಮನ್ ಪಾಟೀಲರು ಇಂತದ್ದೇ ಕಠಿಣ ಪರಿಸ್ಥಿತಿಗಳಲ್ಲಿ ಪತ್ರಕರ್ತರಾಗಿ ಅನೇಕ ಸಾರಿ ಸಾವನ್ನೂ ಸ್ಪರ್ಶಿಸಿ ಸವಾಲಿನ ರೀತಿ ಬದುಕಿದವರು.

ಬೀದರಿನಲ್ಲಿ ಸಿಖ್ ವಿರೋಧಿ ಗಲಭೆಗಳಾದಾಗ ದೊಂಬಿಕೋರರ ವಿವರಗಳನ್ನು ತನಿಖೆ ಮಾಡಿ ಬರೆದದ್ದೇ ಅಲ್ಲದೆ ನ್ಯಾಯಾಂಗ ಆಯೋಗದೆದಿರೂ ನಿರ್ಭೀತಿಯಿಂದ ಸಾಕ್ಷ್ಯ ಹೇಳಿದರು. ದಮನ್ ಪಾಟೀಲರಿಂದಾಗಿಯೇ ಅವತ್ತು ಗಲಭೆಯಲ್ಲಿ ತೊಂದರೆಗೀಡಾಗಿದ್ದ ಅನೇಕರಿಗೆ ಪರಿಹಾರ ಸಿಗುವಂತಾಗಿತ್ತು.

ದಮನ್ ಪಾಟೀಲರೊಂದಿಗಿನ ವೈಯಕ್ತಿಕ ಒಡನಾಟ ನನಗೆ ಸಿಕ್ಕಿದ್ದು ಬೀದರ್‌ನ ಕೋಳಾರ ಕೈಗಾರಿಕಾ ಮಾಲಿನ್ಯ ವಿರೋಧಿ ಹೋರಾಟದಲ್ಲಿ.

ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪಿಸಿದರೆ ಸರ್ಕಾರದಿಂದ ಆಗ ವಿಪರೀತ ಅನಿಸುವಷ್ಟು ತೆರಿಗೆ ರಿಯಾಯಿತಿ, ವಿದ್ಯುತ್, ನೀರಿಗೆ ಕಡಿಮೆ ಹಣ, ಸಬ್ಸಿಡಿ ಇತ್ಯಾದಿ ಸವಲತ್ತುಗಳಿತ್ತು, ಆಗ ಆಂಧ್ರದ ಶ್ರೀಮಂತ ರೆಡ್ಡಿಗಳು ಬೀದರ್ ಹೊರವಲಯದ ಕೋಳಾರಕ್ಕೆ ಕಾಲಿಟ್ಟರು.

ನಿಷೇಧಿತ, ವಿಷಕಾರಿ ರಾಸಾಯನಿಕಗಳ ಉತ್ಪಾದನೆ ಶುರು ಮಾಡಿದರು. ಕೆಲವೇ ತಿಂಗಳಲ್ಲಿ ಅಲ್ಲಿನ ಇಡಿ ಪರಿಸರಕ್ಕೆ ಬೆಂಕಿ ಬಿದ್ದಂತಾಗಿಹೋಯಿತು. ಕುಡಿವ ನೀರು, ಗಾಳಿ ಎಲ್ಲಾ ವಿಷಮಯವಾಗಿ ಅನೇಕ ಜಾನುವಾರುಗಳು ಸತ್ತವು. ಸಾವಿರಾರು ಜನರಿಗೆ ಉಸಿರಾಟದ ಸಮಸ್ಯೆ ಬಂತು. ಕೃಷಿ ಭೂಮಿಯೂ ವಿಷಮಯವಾಗಿ ಬಂಜರಾಗಿ ಹೋಯಿತು. ಹಲವರು ಈ ಅಪಾಯಕಾರಿ ಮಾಲಿನ್ಯದ ವಿರುದ್ಧ ದನಿ ಎತ್ತಿದರಾದರೂ ಮಂತ್ರಿ, ಶಾಸಕರು, ಅಧಿಕಾರಿಗಳು, ಕೊನೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯವರೂ ಲಂಚ ತಿಂದು ತಲೆ ಮರೆಸಿಕೊಂಡು ಬಿಟ್ಟರು.


ಆಗ ನಾವೆಲ್ಲಾ ಕರ್ನಾಟಕ ವಿಮೋಚನಾ ರಂಗದಲ್ಲಿದ್ದೆವು. ಈ ಹೋರಾಟ ಮುನ್ನಡೆಸಲು ನಿರ್ಧರಿಸಿ ನಮ್ಮೊಂದಿಗಿದ್ದ ಸಿರಿಮನೆ ನಾಗರಾಜ್‌ರನ್ನು ಬೀದರ್‌ಗೆ ಕಳುಹಿಸಲಾಯಿತು. ಸಿರಿಮನೆ ಅಲ್ಲಿಗೆ ಹೋದ ಕೆಲವೇ ತಿಂಗಳಲ್ಲಿ ಕೋಳಾರ ಪ್ರದೇಶದಲ್ಲಿ ಜನರ ಹೋರಾಟ ಸ್ಫೋಟಗೊಂಡಿತು. ಆದರೆ ರಾಸಾಯನಿಕ ಕಾರ್ಖಾನೆ ಮಾಲೀಕರು, ಪೊಲೀಸರು ಶಾಮೀಲಾಗಿ ಜನರನ್ನು ಬೆದರಿಸಲು ನೋಡಿದರು.

ಅವತ್ತು ನಮಗೆ ನೆರವಾದವರೇ ದಮನ್ ಪಾಟೀಲ್. ಹಿಂದೂ ಪತ್ರಿಕೆ ಸೇರಿದಂತೆ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಕೋಳಾರ ಕೈಗಾರಿಕಾ ಪ್ರದೇಶದ ವಿಷಕಾರಿ ಕಾರ್ಖಾನೆಗಳ ಬಗ್ಗೆ ಸುದ್ದಿಯಾಗುವಂತೆ ದಮನ್ ನೋಡಿಕೊಂಡರು. ಆದರೆ ಹೋರಾಟದ ಬಿಸಿ ಹೆಚ್ಚಾದಾಗ ಒಮ್ಮೆ ಕಾರ್ಖಾನೆ ಮಾಲೀಕರು ಆಂಧ್ರದ ಕರ್ನೂಲ್‌ನಿಂದ ಗೂಂಡಾಗಳನ್ನು ಕರೆಸಿ ಸಿರಿಮನೆಯನ್ನೇ ಕೊಲ್ಲಿಸಲು ಯತ್ನಿಸಿ ವಿಫಲರಾದರು. ಕವಿರಂ ಕಾರ್ಯಕರ್ತರು ಆ ಗೂಂಡಾಗಳನ್ನೇ ಹಿಡಿದು, ಬಡಿದು ವಾರ್ನಿಂಗ್ ಕೊಟ್ಟು ಆಚೆಗಟ್ಟಿದರು.

ಆಗೊಮ್ಮೆ ಕವಿರಂ ಬೀದರ್‌ನಲ್ಲಿ ಒಂದು ಭಾರಿ ಪ್ರತಿಭಟನಾ ರ‍್ಯಾಲಿ ನಡೆಸಿತು. ಜೇಬಿನಲ್ಲಿ ಹಣವಿರದಿದ್ದ ನಾವು ನೂರಾರು ಜನ ನಾಂದೇಡ್ ಲಿಂಕ್ ಎಕ್ಸ್‌ಪ್ರೆಸ್ ಟ್ರೈನಿನ ಬೋಗಿಯ ಮೇಲೆ ಕೂತು ಬೀದರಕ್ಕೆ ಪ್ರಯಾಣಿಸಿದ್ದ ನೆನಪು ಈಗಲೂ ಹಸಿರಾಗಿದೆ. ದೆಕ್ಕನ್ ಪ್ರಸ್ಥಭೂಮಿಯನ್ನು ಸೀಳಿಕೊಂಡು ಕೊನೆ ಕಾಣದ ಬಯಲು ಪ್ರದೇಶದಲ್ಲಿ ಬಿರುಗಾಳಿಯಂತೆ ಓಡುತ್ತಿದ್ದ ಟ್ರೈನಿನ ಆ ಅಪಾಯಕಾರಿ ಪ್ರಯಾಣವನ್ನು ನೆನೆದರೆ ಈಗ ಹುಚ್ಚಾಟ ಎನಿಸುತ್ತದೆ.

ಆಗಲೂ ನಮಗೆಲ್ಲಾ ಅನ್ನ-ಆಶ್ರಯ ಕೊಟ್ಟವರಲ್ಲಿ ದಮನ್ ಕೂಡಾ ಒಬ್ಬರು.

ಈಗ್ಗೆ ಒಂದೂವರೆ ದಶಕದ ಹಿಂದೆ ನಡೆದ ಆ ರ‍್ಯಾಲಿಯದ್ದೇ ಒಂದು ಕತೆ.



ರೈತನಾಯಕ ಸುಂದರ್ ರಾಜ್


ಗೆಳೆಯ ಬಂಜಗೆರೆ ಜಯಪ್ರಕಾಶ್‌ರದ್ದು ಅವತ್ತು ಬೆಂಕಿಯಂತಾ ಭಾಷಣ. ಜೆಪಿಯ ಮಾತು ಕೇಳಿ ಬೀದರಿನ ಪೊಲೀಸರೆಷ್ಟು ಕೆರಳಿದ್ದರೆಂದರೆ ನಮ್ಮಲ್ಲಿ ಕೆಲವರನ್ನು ಹಿಡಿದು ಬಡಿಯಲು ಹುಡುಕಾಡುತ್ತಿದ್ದರು.

ಬೀದರಿನ ಕೋಟೆ ನೋಡಲು ಹೋಗಿದ್ದ ನಮ್ಮ ತಂಡ ಪೊಲೀಸರೊಂದಿಗೆ ಹೊಡೆದಾಟ ನಡೆಸಬೇಕಾದ ಸನ್ನಿವೇಶವೂ ಉಂಟಾಗಿತ್ತು. ನಾವವತ್ತು ದಮನ್‌ರ ಮನೆಯೊಳಗೆ ಸುರಕ್ಷಿತವಾಗಿ ಅಡಗಿದ್ದೆವು. ಆದರೂ ಮುಂದೊಂದು ದಿನ ಹುಷಾರಿರದಿದ್ದ ಜೆಪಿಯನ್ನು ಅರೆಸ್ಟ್ ಮಾಡಿ ಕೈಕಾಲಿಗೆ ಬೇಡಿ ತೋರಿಸಿಯೇ ಪೊಲೀಸರು ಸೇಡು ತೀರಿಸಿಕೊಂಡರು.

ಆದರೆ ಕೋಳಾರದ ಸಮಸ್ಯೆ ಮಾತ್ರ ಬಗೆ ಹರಿಯ… ಕವಿರಂನ ಹೋರಾಟದಿಂದ ರೇಗಿ ಹೋದ ದುಷ್ಟ ಕಾ… ಮಾಲೀಕರು ಒಮ್ಮೆ ಸಿರಿಮನೆ ಮೇಲೆ ಹಲ್ಲೆ ಮಾಡಿಸಿಬಿ… ಪೊಲೀಸರಿಗೆ ಹೇಳಿ ಜೈಲಿಗೂ ಹಾಕಿಸಿದರು.

ಆದಕ್ಕೆ ಬೆಂಗಳೂರಿನಲ್ಲಿ ಪ್ರತೀಕಾರದ ಪ್ರತಿಕ್ರಿಯೆ ಬ… ಬೀದರಿನಲ್ಲಿದ್ದ ಸೋಲ್ ಫಾರ್ಮಸುಟಿಕಲ್ಸ್ ಕಂಪೆ… ಬೆಂಗಳೂರು ಕಚೇರಿಗೆ ಹಗಲಲ್ಲೇ ನುಗ್ಗಿದ ಕೆಲ… ಇಡೀ ಆಫೀಸು-ಗೋಡೌನಿಗೆ ಬೆಂಕಿ ಹಚ್ಚಿ… ಕಾರ್ಖಾನೆಯ ಖದೀಮರಿಗೆ ಪಂಥಾಹ್ವಾನ ನೀಡಿ… ನಂತರ ಇದೊಂದು ದೊಡ್ಡ ರಾದ್ಧಾಂತವಾಯಿ… ಪೊಲೀಸರಿಗೆ 'ಯಶವಂತ'ನೆಂಬ ಹೆಸರು ಹೊರತು … ದಾಳಿಕೋರರ ಬೇರೆ ಸುಳಿವು ಸಿಗಲಿಲ್ಲ…

ಬೆಂಗಳೂರು ಪೊಲೀಸರು ಆಗ ಕವಿರಂನಲ್ಲಿದ್ದ ನ… ಅರೆಸ್ಟ್ ಮಾಡಿದರು. ನನ್ನ ಜೊತೆಗೆ ಜೆಪಿಯ ಬಂಧ… ಆಯಿತು. ನಾವಿಬ್ಬರೂ ಕೆಲದಿನ ಕರ್ನಾಟಕ ಸಮಾ… ಇನ್ನೊಂದು ಬಡಾವಣೆಯಂತಿರುವ ಸೆಂಟ್ರಲ್ ಜೈಲಿನಲ್ಲಿ…



ನಂತರ ಹೊರಬಂದಾಗ ಕೋಳಾರ ಕೈಗಾರಿಕ ಮಾಲಿ… ತನಿಖೆಗೆ ಸದನ ಸಮಿತಿಯೂ ರಚನೆಯಾಗಿ ಕೊನೆಗ… ಸಮಸ್ಯೆ ತಕ್ಕಮಟ್ಟಿಗೆ ಬಗೆ ಹರಿಯಿತು.

ದಮನ್ ಪಾಟೀಲರು ಈ ಹೋರಾಟದ … ಹಂತದಲ್ಲೂ ಬೀದರಿನ ಜನತೆಯೊಂದಿಗಿದ್ದರು.

ಉರ್ದು ಮಿಶ್ರಿತ ಸೊಗಸಾದ ಕನ್ನಡ ಆಡುವ ದ… ಪಾಟೀಲರನ್ನು ಹೊಗಳಿದರೆ ಬಹುಶಃ ಅ… ಮೆಚ್ಚಲಾರರೇನೊ…

ಆದರೆ ನೀವವರನ್ನು ಮೆಚ್ಚಿಕೊಂಡರೆ ನಮ್ಮಂತ… ಖುಷಿಯಾಗುತ್ತದೆ.


ಬೆಂಕಿಯಂತೆ ಉರಿ ಉರಿಯ… ಬದುಕಿದ ದಮನ್ … ಪತ್ರಿಕೋದ್ಯಮದಿಂದ ನಿವೃತ್ತರಾಗಿ… ಆದರೂ ಆ ಬೆಂಕಿಯೀಗ ಕೆಂಡ… ತನ್ನ ಕಾವು ಉಳಿಸಿಕೊಂಡೇ … ದಮನ್ ಪತ್ರಿಕೆ ಈಗಲೂ ಹಿಂದಿ-… ಎರಡರಲ್ಲೂ ಬರುತ್ತಿದೆ.

ಯೋಧನೊಬ್ಬನ ಧೀರೋದ… ಎಷ್ಟೆಂದು ನೋಡಲು ಅವನ … ಮೇಲಿನ ಗಾಯಗಳನ್ನು ನೋಡಬೇಕ… ದಮನ್ ಪಾಟೀಲರು ಅಸ… ಗಾಯಗಳೊಂದಿಗೆ ಪತ್ರಕರ್ತ ಯೋಧನಂತೆ ಬದುಕಿದವ…

ಜುಲೈ 26ರ ಶುಕ್ರವಾರ ಸಂಜೆ ಬೆಂಗಳೂರಿನ … ಸಾಹಿತ್ಯ ಪರಿಷತ್‌ನ ಸಮಾರಂಭದಲ್ಲಿ ದಮನ್ ಇರು…

ಸಾರ್ಥಕ ರೀತಿಯಲ್ಲಿ ಬದುಕಿದ ಈ … ಚೆಂಡನ್ನೊಮ್ಮೆ ಕಂಡು ಕೈಕುಲುಕಿ ಹೋಗುವಿರಂತೆ, ಬಿ… ಮಾಡಿಕೊಂಡು ದಯವಿಟ್ಟು ಬನ್ನಿ.

ಬೀದರ್‌ನ ಫಿರಂಗಿ 'ದಮನ್' ಪಾಟೀಲರನು ನೋಡುವ ಖುಷಿಯಲ್ಲಿ...



'ಸಂವಾದ' ವಿಶೇಷಾಂಕ ಮೂಡಿಸುವ ಬೆರಗು

'ಸಂವಾದ' ಮಾಸಿಕ ಈಗ ಕರ್ನಾಟಕದ ಜನಪರ ಕಾಳಜಿಗಳ ವಲಯದ ಒಂದು ಬೌದ್ಧಿಕ ಸಂಗಾತಿಯಂತಿದೆ.

ಸಂಪಾದಕ ಮಿತ್ರ ಇಂದೂಧರ ಹೊನ್ನಾಪುರ 'ಸಂವಾದ'ವನ್ನು ಅದೆಷ್ಟು ವಿಚಾರಪೂರ್ಣ, ಲವಲವಿಕೆಯ ಪತ್ರಿಕೆಯನ್ನಾಗಿಸಿದ್ದಾರೆಂದರೆ ಪ್ರತಿ ತಿಂಗಳೂ 'ಸಂವಾದ' ಸಿಕ್ಕ ನಂತರ ನಮ್ಮ ಕಚೇರಿಯಲ್ಲಿ ಅದರಲ್ಲಿನ ಲೇಖನಗಳ ಕುರಿತಂತೆ ಚರ್ಚೆ, ಮಾತುಕತೆಗಳು ನಡೆಯುತ್ತಿರುತ್ತವೆ.

ಇದೀಗ 'ಸಂವಾದ'ದ 2013ರ ವಿಶೇಷಾಂಕ ಹೊರಬಂದಿದೆ. ವೈಚಾರಿಕ ಲೇಖನಗಳು, ಕತೆ-ಪದ್ಯಗಳು, ಈ ನಾಡಿನ ಕ್ಷೋಭೆಗಳನ್ನ… ಬಿಂಬಿಸುವ ಈ ವಿಶೇಷಾಂಕವು ಕಲಾ… ಮುರುಳೀಧರ ರಾಥೋಡರ ಚೇತೋಹ… ಪುಟವಿನ್ಯಾಸದೊಂದಿಗೆ ಒಂದು ಅಮೂ… ಸಂಗ್ರಹಯೋಗ್ಯ ಸಂಚಿಕೆಯಾಗಿ ಹೊರಬಂದಿ…

'ಸಂವಾದ' ವಿಶೇಷಾಂಕವು ನಿಮ್ಮ ಬಳಿಯ… ಒಂದಿರಲಿ.

ಪ್ರತಿ ಬೇಕಾದವರು
ಇಂದೂಧರ ಹೊನ್ನಾಪುರರವರನ್ನು
ಮೊಬೈಲ್: 9902224195
ಮೂಲಕ ಸಂಪರ್ಕಿಸಬಹುದು.

ಮೋದಿ ಬೊಗಳುವ ಸುಳ್ಳುಗಳು

ಕಂಡಹಾಗೆ


ಹಿಟ್ಲರ್


ಗೋಡ್ಸೆ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

2002ರ ನರಮೇಧದ ಬಗ್ಗೆ ಮೋದಿಯ ಬಾಯಿಯಿಂದ ಉದುರಿರುವ "ಕುತ್ತೆ ಕಾ ಬಚ್ಚಾ" ಎಂಬ ಪದಗಳನ್ನು ಹಲವರು ವಿವಿಧ ರೀತಿಯಲ್ಲಿ ತರ್ಕಿಸುತ್ತಿದ್ದಾರೆ. ಕೆಲವರು "ಮುಸಲ್ಮಾನರನ್ನು ಮೋದಿ ನಾಯಿಗಳಿಗೆ ಹೋಲಿಸಿದ್ದಾನೆ" ಎಂದು ಅಬ್ಬರಿಸಿದ್ದಾರೆ. ಆದರೆ ವಾಸ್ತವವಾಗಿ ಮೋದಿ ಅಲ್ಪಸಂಖ್ಯಾತರನ್ನು ನಾಯಿಗಳಿಗಿಂತಲೂ ಕಡೆಯಾಗಿ ಕಾಣುತ್ತಾನೆ ಎಂಬುದು ಆತನ ಮಾತುಗಳಲ್ಲೇ ಸ್ಪಷ್ಟವಾಗಿದೆ. ಯಾಕೆಂದರೆ 'ಅಮಾಯಕರು ಸತ್ತ ಬಗ್ಗೆ ನಿಮಗೆ ನೋವಿದೆಯಾ?' ಎಂಬ ಪ್ರಶ್ನೆಗೆ ಆತ ಮನುಷ್ಯರ ಬದಲಾಗಿ ನಾಯಿಗಳ ಉದಾಹರಣೆಯನ್ನು ಕೊಡುವ ಮೂಲಕ ತನ್ನ ವಕ್ರ ಬುದ್ಧಿಯನ್ನು ಮತ್ತೊಮ್ಮೆ ಬಹಿರಂಗಪಡಿಸಿದ್ದಾನೆ.

ನರಹಂತಕ ಹಿಟ್ಲರ್‌ಗೆ ಪ್ರಾಣಿಗಳ ಬಗ್ಗೆ ತುಂಬಾ ಪ್ರೀತಿ ಇತ್ತು. ಎಷ್ಟರ ಮಟ್ಟಿಗೆಂದರೆ 1940ರ ದಶಕದಲ್ಲೇ ಪ್ರಾಣಿಗಳಿಗೆ ಹಿಂಸೆ ಕೊಡಕೂಡದೆಂದು ಬ್ರಿಟನ್ನಿನ ಕಾನೂನುಗಳನ್ನು ಜರ್ಮನಿಯಲ್ಲಿ ಜಾರಿಗೊಳಿಸಿದ್ದ. ಸ್ವತಃ ಸಸ್ಯಾಹಾರಿಯಾಗಿದ್ದ ಹಿಟ್ಲರ್ ಬ್ಲಾಂಡಿ ಎಂಬ ಅಲ್ಸೇಶಿಯನ್ ನಾಯಿಯನ್ನು ಸಾಕಿದ್ದ. ಎರಡನೆ ವಿಶ್ವಯುದ್ಧ ಅಂತ್ಯಗೊಳ್ಳುತ್ತಿದ್ದಾಗ ಇನ್ನೇನು ಸೋವಿಯತ್ ಸೇನೆ ಜರ್ಮನಿಯನ್ನು ವಶಪಡಿಸಿಕೊಂಡು ತನನ್ನು ಬಂಧಿಸುತ್ತದೆ ಎಂದು ಹಿಟ್ಲರ್‌ಗೆ ಗೊತ್ತಾಯಿತು. ಆಗ ಆತ ಮತ್ತು ಆತನ ಸಂಗಾತಿ ಇವಾ ಬ್ರೌನ್ ಆತ್ಮಹತ್ಯೆ ಮಾಡಿಕೊಂಡರು. ಅದಕ್ಕೂ ಮುನ್ನ ತನ್ನ ಪ್ರೀತಿಯ ನಾಯಿ ಬ್ಲಾಂಡಿ ಕೂಡ ವೈರಿಗಳ ಕೈಗೆ ಸಿಗಬಾರದೆಂಬ ಕಾರಣಕ್ಕೆ ಹಿಟ್ಲರ್ ತಾನು ಸಾಯುವ ಮುನ್ನ ನಾಯಿಗೂ ಸೈನೈಡ್ ತಿನ್ನಿಸಿ ಅದನ್ನು ಸಾಯಿಸಿದ್ದ. ಪ್ರಾಣಿಗಳ ಪಾಲಿಗೆ ದಯಾಮಯಿಯಾಗಿದ್ದ ಹಿಟ್ಲರ್ ತನ್ನ ಅಧಿಕಾರಾವಧಿಯಲ್ಲಿ 60 ಲಕ್ಷಕ್ಕೂ ಹೆಚ್ಚು ಯಹೂದಿಯರನ್ನು ಕೊಂದು ಹಾಕುವಷ್ಟು ಕ್ರೂರ ವ್ಯಕ್ತಿಯೂ ಆಗಿದ್ದು ಎಲ್ಲರಿಗೂ ಗೊತ್ತು.

ಇಲ್ಲಿ ಯಾಕೆ ಹಿಟ್ಲರ್ ಮತ್ತು ಆತನ ಶ್ವಾನ ಪ್ರೀತಿಯ ಬಗ್ಗೆ ಹೇಳುತ್ತಿದ್ದೇನೆ ಎಂಬುದು ಈಗಾಗಲೇ ನಿಮಗೆ ಅರ್ಥವಾಗಿರುತ್ತದೆ. ಹಿಟ್ಲರ್‌ನಂತೆಯೇ ನರಹಂತಕನಾದ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಇತ್ತೀಚೆಗೆ "ಕಾರಿನ ಅಡಿ ನಾಯಿ ಮರಿ ಸಿಕ್ಕಿಹಾಕಿಕೊಂಡರೆ ಯಾರಿಗೇ ಆದರೂ ಬೇಜಾರಾಗುತ್ತೆ" ಎಂದು ಸಂದರ್ಶನವೊಂದರಲ್ಲಿ ಹೇಳಿದ್ದು ಎಲ್ಲೆಡೆ ಚರ್ಚೆಯಾಗುತ್ತಿದೆ.

ಸುಮಾರು ಮೂರು ಸಾವಿರ ಅಮಾಯಕ ಅಲ್ಪಸಂಖ್ಯಾತರು ಭೀಬತ್ಸವಾಗಿ ಕೊಲೆಯಾದ



ಆದೇ ಸಂದರ್ಶನದಲ್ಲಿ ಮಹಾತ್ಮಾ ಗಾಂಧಿಯವರನ್ನು ಕೊಂದ ನಾಥೂರಾಮ್ ಗೋಡ್ಸೆ ಎಂಬ ಹಿಂದೂತ್ವವಾಗಿಯಂತೆಯೇ ಮೋದಿಯೂ ಮಾತನಾಡಿದ್ದಾನೆ. ಅಂದು ಗೋಡ್ಸೆ ತಾನು ಹಿಂದೂ ರಾಷ್ಟ್ರೀಯವಾದಿ ಮತ್ತು ದೇಶಪ್ರೇಮಿ ಆಗಿರುವುದರಿಂದ ಮಹಾತ್ಮಾ ಗಾಂಧಿಯನ್ನು ಕೊಂದೆ ಎಂದು ತನ್ನ ಕೃತ್ಯವನ್ನು ಸಮರ್ಥಿಸಿಕೊಂಡಿದ್ದ. ಇಂದು ಮೋದಿಯೂ ತಾನು ಹಿಂದೂ ಧರ್ಮದಲ್ಲಿ ಹುಟ್ಟಿರುವುದರಿಂದ ತಾನು ಹಿಂದೂ ರಾಷ್ಟ್ರೀಯವಾದಿ ಎಂದೂ, ತಾನೂ ದೇಶಪ್ರೇಮಿ ಎಂದೂ ಬಣ್ಣಿಸಿಕೊಂಡಿದ್ದಾನೆ. ವಾಸ್ತವವಾಗಿ ಭಾರತದಂತಹ ಜಾತ್ಯತೀತ ದೇಶದಲ್ಲಿ ಒಂದು ಸೋಕಾಲ್ಡ್ ಧರ್ಮದ ಪರವಾಗಿ ರಾಷ್ಟ್ರೀಯತೆಯನ್ನು ಘೋಷಿಸಿಕೊಳ್ಳುವುದು ದೇಶದ್ರೋಹ ಎಸಗುವುದಕ್ಕೆ ಸಮವಾಗುತ್ತದೆ.

ಹೀಗೆ ಮೋದಿ ಅತ್ತ ನರಹಂತಕ ಹಿಟ್ಲರ್ ಮತ್ತು ಇತ್ತ ಕೊಲೆಗಡುಕ ಗೋಡ್ಸೆ ಇಬ್ಬರಂತೆಯೇ ತಾನೂ ಇದ್ದೇನೆ ಎಂಬುದನ್ನು ಯಾವ ಹಿಂಜರಿಕೆಯೂ ಇಲ್ಲದೆ ಒಪ್ಪಿಕೊಂಡಿದ್ದಾನೆ.

ಈ ಮೋದಿ ಮಹಾನ್ ಸುಳ್ಳುಗಾರ.

ಉದಾಹರಣೆಗೆ ಈತನ ಆಡಳಿತದಲ್ಲಿ ನಡೆದಿರುವ ಹಲವಾರು ನಕಲಿ ಎನ್‌ಕೌಂಟರ್‌ಗಳನ್ನು ಸಿಬಿಐ ತನಿಖೆ ಮಡುತ್ತಿದೆಯಲ್ಲವೆ? ಅದನ್ನು ವಿರೋಧಿಸಿರುವ ಮೋದಿ 'ಬೇಕಂತಲೇ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಸಿಬಿಐ ಅನ್ನು ತನ್ನ ವಿರುದ್ಧ ಛೂ ಬಿಟ್ಟಿದೆ ಎಂದು ಆರೋಪಿಸುತ್ತ 'ಅದು ಸಿಬಿಐ ಅಲ್ಲ, ಬದಲಾಗಿ ಕಾಂಗ್ರೆಸ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್' ಎಂದು ಹೋಗಿಬಂದಲ್ಲೆಲ್ಲ ಅರಚುತ್ತಿದ್ದಾನೆ. ನಿಜ ಏನೆಂದರೆ ಆ ನಕಲಿ ಎನ್‌ಕೌಂಟರ್‌ಗಳನ್ನು ತನಿಖೆ ಮಾಡಿ ವರದಿ ಒಪ್ಪಿಸಬೇಕೆಂದು ಆದೇಶಿಸಿರುವುದು ಕೇಂದ್ರ ಸರ್ಕಾರ ಅಲ್ಲವೇ ಅಲ್ಲ, ಬದಲಾಗಿ ಸುಪ್ರೀಂ ಕೋರ್ಟ್! ಅಷ್ಟೇ ಅಲ್ಲ, ಮೋದಿ ಮುಖ್ಯಮಂತ್ರಿ ಆಗಿರುವಾಗ 2002ರ ನರಮೇದಕ್ಕೆ ಸಂಬಂಧಪಟ್ಟ ನ್ಯಾಯಾಂಗ ವಿಚಾರಣೆಗಳು ಗುಜರಾತಿನಲ್ಲಿ ಸರಿಯಾಗಿ ನಡೆಯಲು ಸಾಧ್ಯವಿಲ್ಲ ಎಂಬ ಗುಮಾನಿಯಿಂದಲೇ ಹಲವು ವಿಚಾರಣೆಗಳನ್ನು ಅದೇ ಸುಪ್ರೀಂ ಕೋರ್ಟ್ ಬೇರೆ ರಾಜ್ಯಗಳಿಗೆ ಸ್ಥಳಾಂತರಿಸಿದೆ.

ಇತ್ತೀಚಿನ ಸಂದರ್ಶನದಲ್ಲಿ ಮೋದಿ ಹೇಳಿರುವ ಇನ್ನೊಂದು ಸುಳ್ಳು ಎಸ್‌ಐಟಿ ತನಿಖೆ ತನಗೆ 'ಕ್ಲೀನ್ ಚಿಟ್' ನೀಡಿದೆ ಎಂಬುದು. ಇದರಲ್ಲಿ ಎರಡು ಅಂಶಗಳು ಅಡಗಿವೆ. ಮೊದಲನೆಯದಾಗಿ ಯಾವ ಪೊಲೀಸ್ ಅಧಿಕಾರಿಗಳು ಕೋಮು ಗಲಭೆಗೆ ಅನುವು ಮಾಡಿಕೊಟ್ಟಿದ್ದರೋ ಅಂತಹ ಕೆಲವರನ್ನೇ ಈ ಎಸ್‌ಐಟಿಯಲ್ಲಿ ನೇಮಿಸಲಾಗಿತ್ತಾದ್ದರಿಂದ ಅದರ ತನಿಖೆಯಿಂದ ಸತ್ಯ ಹೊರಬಾರದು ಎಂದು ಹೋರಾಟಗಾರ್ತಿ ತೀಸ್ತಾ ಸೆಟಲ್ವಾದ್ ತರಹದವರು ಆರಂಭದಲ್ಲೇ ಎಚ್ಚರಿಸಿದ್ದರು. ಕೊನೆಗೆ ತೀಸ್ತಾ ಹೇಳಿದ್ದು ನಿಜವೂ ಆಯಿತು. ಎರಡನೆಯ ವಿಷಯ, ಅದೇ ಸುಪ್ರೀಂ ಕೋರ್ಟ್ ಎಮಿಕಸ್ ಕ್ಯೂರಿಯಾಗಿ ನೇಮಿಸಿರುವ ರಾಜು ರಾಮಚಂದ್ರನ್ ಅವರು ಎಸ್‌ಐಟಿ ಕೊಟ್ಟಿರುವ ತನಿಖಾ ವರದಿಯನ್ನು ವಿರೋಧಿಸಿದ್ದಾರಲ್ಲದೆ ಮೋದಿಯ ವಿರುದ್ಧ ನ್ಯಾಯಾಂಗ ವಿಚಾರಣೆ ನಡೆಸಲು ಸಾಕಷ್ಟು ಪುರಾವೆಗಳಿವೆ ಎಂದು ಹೇಳಿದ್ದಾರೆ. ಜೊತೆಗೆ ಈ ತನಿಖಾವರದಿಯನ್ನು ಪ್ರಶ್ನಿಸಿ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಲು ತೀಸ್ತಾ ಅವರಿಗೆ ಮತ್ತೆ ಅದೇ ಸುಪ್ರೀಂ ಕೋರ್ಟ್ ಅನುವು ಮಾಡಿಕೊಟ್ಟಿದೆ. ಇದೆಲ್ಲದರ ಅರ್ಥ ಎಸ್‌ಐಟಿ ತನಿಖೆಗೆ ನಯಾ ಪೈಸೆಯ ಬೆಲೆ ಇಲ್ಲ ಎಂಬುದು. ಆದರೂ ಮೋದಿ ತನಗೆ 'ಕ್ಲೀನ್ ಚಿಟ್' ಸಿಕ್ಕಿದೆ ಎಂದು ಸುಳ್ಳು ಬೊಗಳುತ್ತಾನೆ.

ಮೋದಿಯದ್ದು ಎಂತಹ ಹೊಲಸು ಬುದ್ಧಿ ಎಂದರೆ ಅತ ಸದಾ ಅಲ್ಪಸಂಖ್ಯಾತರನ್ನು ತುಚ್ಛವಾಗಿ ಕಾಣುತ್ತಾನೆ. "ಕುತ್ತಾ ಕ ಬಚ್ಚೆ" ವಿವಾದ ಜೋರಾಗುತ್ತಿದ್ದಂತೆ ಆತ "ಕಾಂಗ್ರೆಸ್ ತನ್ನ ಭ್ರಷ್ಟಾಚಾರಗಳನ್ನು ಮುಚ್ಚಿಹಾಕಿಕೊಳ್ಳಲು ಜಾತ್ಯತೀತತೆಯ ಬುರ್ಖಾ ತೊಡುತ್ತದೆ" ಎಂದಿದ್ದಾನೆ. ಹಲವಾರು ಹಗರಣಗಳ ಕೇಂದ್ರವಾಗಿರುವ ಕಾಂಗ್ರೆಸ್ ಬಗ್ಗೆ ಮೋದಿ ಟೀಕೆ ಮಾಡಲಿ. ಆದರೆ ಅದರೊಳಗ್ಯಾಕೆ ಮುಸಲ್ಮಾನ ಮಹಿಳೆಯರು ಧರಿಸುವ ಬುರ್ಖಾವನ್ನು ಎಳೆದು ತರಬೇಕು? ಈತನ ಪ್ರತಿ ಕಣದಲ್ಲೂ ಕೋಮು ದ್ವೇಷ ಹರಡಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಿಲ್ಲ.

ಇವತ್ತು ಮೋದಿಯ ಇಂತಹ ಪೂರ್ವಾಗ್ರಹ ಪೀಡಿತ ಹೇಳಿಕೆಗಳನ್ನು ಬಿಜೆಪಿಯ ನಾಯಕರಲ್ಲದೆ ಆರೆಸ್ಸೆಸ್ಸಿನ ಚೆಡ್ಡಿಗಳೂ ಸಮರ್ಥಿಸುತ್ತಿದ್ದಾರೆ. ಅಂದರೆ ಇದು ಮೋದಿ ಎಂಬ ಒರ್ವ ವ್ಯಕ್ತಿಯ ವಕ್ರ ದೃಷ್ಟಿ ಮಾತ್ರವಲ್ಲ, ಇಡೀ ಸಂಘಪರಿವಾರಕ್ಕೆ ಅಂಟಿರುವ ಮನೋರೋಗ.

ಈ ಮೋದಿ ಭಾರತದ ಪ್ರಧಾನಿ ಆಗುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದಾನೆ. ಈತನ ಕನಸು ಈಡೇರಿದರೆ ಭಾರತಕ್ಕೆ ಪಿಶಾಚಿ ವಕ್ಕರಿಸಿದಂತೆಯೇ ಎಂಬುದರ ಬಗ್ಗೆ ಯಾರಿಗೂ ಅನುಮಾನವಿರಕೂಡದು... ●

ಮೋದಿಯನ್ನು ಕೇಳಬೇಕಿರುವ ಪ್ರಶ್ನೆಗಳು ಮತ್ತು ಆತ ಕೊಡಲಾಗದ ಉತ್ತರಗಳು

ಸಾಮಾನ್ಯವಾಗಿ ನರಹಂತಕ ನರೇಂದ್ರ ಮೋದಿ ಯಾರಿಗೂ ಸಂದರ್ಶನವನ್ನು ಕೊಡುವುದಿಲ್ಲ, ಯಾಕೆಂದರೆ ಆತ ಉತ್ತರಿಸಲೇ ಬೇಕಾದ ಹಲವಾರು ಪ್ರಶ್ನೆಗಳಿವೆ. ಹಿಂದೆ ಕರಣ್ ಥಾಪರ್ ಎಂಬವವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಮೋದಿ ಕೇವಲ ಮೂರು ನಿಮಿಷದಲ್ಲಿ ಸಂದರ್ಶನವನ್ನು ಬಿಟ್ಟು ಎದ್ದು ಹೋಗಿದ್ದ. ಆ ಕಾರಣಕ್ಕೋ ಏನೋ ರಾಯಟರ್ಸ್ ಸುದ್ದಿಸಂಸ್ಥೆಯ ಸಂದರ್ಶಕರು ಮೋದಿಗೆ ಕಠಿಣ ಪ್ರಶ್ನೆಗಳನ್ನು ಕೇಳಲಿಲ್ಲ. ಆದರೆ ಮುಂದಿನ ಬಾರಿ ಮೋದಿಯನ್ನು ಸಂದರ್ಶಕರು ಕೇಳಲೇ ಬೇಕಿರುವ ಪ್ರಶ್ನೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಜೊತೆಗೆ ಆತ ಕೊಡಲಾಗದಂತಹ ಉತ್ತರಗಳನ್ನೂ ನೀಡಲಾಗಿದೆ.

1. 2002ರ ಕೋಮು ಗಲಭೆಗೆ ಸಂಬಂಧಿಸಿದ ವಿಚಾರಣೆಗಳು ಗುಜರಾತ್‌ನಲ್ಲಿ ಸರಿಯಾಗಿ ನಡೆಯಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿರುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
2. ನಿಮ್ಮ ಸಂಪುಟದಲ್ಲಿ ಸಚಿವರಾಗಿದ್ದ ಹಿರೇನ್ ಪಾಂಡ್ಯ ಅವರು ನಿಗೂಢವಾಗಿ ಕೊಲೆಯಾದದ್ದು ಯಾಕೆ?
3. ಗುಜರಾತ್ ಪೊಲೀಸರು ಸೊಹ್ರಾಬುದ್ದೀನ್ ಶೈಕ್‌ನನ್ನು ಎನ್‌ಕೌಂಟರ್‌ನಲ್ಲಿ ಕೊಂದಿದ್ದು ಯಾಕೆ?
4. ನಿಮ್ಮ ಸರ್ಕಾರ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಲ್ಲಭಭಾಯಿ ಪಟೇಲರ ಪ್ರತಿಮೆಯನ್ನು ನಿರ್ಮಿಸುತ್ತಿದೆ. ಆದರೆ ನೀವು ಆರಾಧಿಸುವ ಆರೆಸ್ಸೆಸ್ ಬಗ್ಗೆ ಅದೇ ಪಟೇಲರು ಯಾವ ಅಭಿಪ್ರಾಯವನ್ನು ಹೊಂದಿದ್ದರು ಎಂಬುದು ನಿಮಗೆ ಗೊತ್ತೆ?
5. 2002ರ ಫೆಬ್ರವರಿ 28ರಿಂದ ಮಾರ್ಚ್ 4ರ ತನಕ ತಮ್ಮ ಫೋನ್ ಕಾಲ್ ರೆಕಾರ್ಡ್‌ಅನ್ನು ಬಹಿರಂಗಪಡಿಸುತ್ತೀರಾ?
6. ಅಮೆರಿಕಾ ನಿಮಗೆ ವೀಸಾ ನಿರಾಕರಿಸಿರುವುದು ಯಾಕೆ?
7. ತಾವು ಬ್ರಹ್ಮಚಾರಿ ಎಂದು ತುಂಬಾ ಜನ ನಂಬಿದ್ದಾರೆ. ಹಾಗಾದರೆ ಜಶೋಬೇನ್ ಎಂಬಾಕೆ ನಿಮಗೇನು ಆಗಬೇಕು?


****


ಮೋದಿ ಪತ್ನಿ

ಉತ್ತರಗಳು:

1. ಮೋದಿ ಅಧಿಕಾರದಲ್ಲಿರುವವರೆಗೂ ಸತ್ಯ ಹೊರಬರುವುದಿಲ್ಲ ಎಂದು ಸುಪ್ರೀಂ ಕೋರ್ಟಿಗೆ ಗೊತ್ತಿದೆ.
2. ಮೋದಿ ವಿರುದ್ಧ ಹಿರೇನ್ ಪಾಂಡ್ಯ ಅವರು ಸತ್ಯ ಶೋಧನಾ ಸಮಿತಿಗೆ ಮಾಹಿತಿ ಕೊಟ್ಟಿದ್ದರು. ಅದಕ್ಕೆ ಅವರು ನಿಗೂಢವಾಗಿ ಕೊಲೆಯಾದರು.
3. ಮೋದಿಯನ್ನು ಕೊಂದು ಹಾಕಲು ಮುಸಲ್ಮಾನರು ಸಂಚು ರೂಪಿಸುತ್ತಿದ್ದಾರೆ ಎಂದು ಬಿಂಬಿಸಲು ಗುಜರಾತ್ ಪೊಲೀಸರು ಸೊಹ್ರಾಬುದ್ದೀನ್ ಶೇಕ್‌ನನ್ನು ಕೊಂದು ಹಾಕಿದ್ದರು.
4. 'ಹಿಟ್ಲರ್‌ನ ನಾಜಿಗಳು ಮತ್ತು ಮುಸ್ಸೊಲಿನಿಯ ಫ್ಯಾಸಿಸ್ಟರು ಆರೆಸ್ಸೆಸ್‌ನಂತೆಯೇ ಸರ್ವಾಧಿಕಾರಿ ಧೋರಣೆಯನ್ನು ಹೊಂದಿದ್ದರು. ಆರೆಸ್ಸೆಸ್ ನಾಯಕರ ಹಿಂದೂ ರಾಷ್ಟ್ರ ಕಲ್ಪನೆಯೇ ಹುಚ್ಚುತನದಿಂದ ಕೂಡಿದೆ. ಆರೆಸ್ಸೆಸ್ ನಾಯಕರ ಭಾಷಣಗಳು ಕೋಮು ವಿಷದಿಂದ ತುಂಬಿರುತ್ತವೆ. ಅಂತಹ ವಿಷವೇ ಮಹಾತ್ಮಾ ಗಾಂಧಿಯವರನ್ನು ಬಲಿ ತೆಗೆದುಕೊಂಡಿದ್ದು' ಎಂದಿದ್ದರು ಪಟೇಲರು.
5. ಮೋದಿಯ ಫೋನ್ ಕಾಲ್ ರೆಕಾರ್ಡ್ ಅಮಾಯಕರ ಮಾರಣ ಹೋಮದಲ್ಲಿ ಆತನ ಪಾತ್ರವನ್ನು ತೋರಿಸುತ್ತದೆ.
6. ಮೋದಿ ಓರ್ವ ನರಹಂತಕ ಎಂಬ ಕಾರಣಕ್ಕೇ ಆತನಿಗೆ ಅಮೆರಿಕ ಇಲ್ಲಿಯ ತನಕ ವೀಸಾ ನಿರಾಕರಿಸಿದೆ.
7. ಜಶೋಬೇನ್ ಮತ್ತು ಮೋದಿ ನಡುವೆ ಮೂರು ದಶಕಗಳ ಹಿಂದೆ ಮದುವೆಯಾಗಿತ್ತು, ಆದರೆ ಓದಿರದಿದ್ದ ಆಕೆ ತನ್ನ ಸ್ಥಾನಮಾನಕ್ಕೆ ನಾಲಾಯಕ್ ಎಂದು ಮೋದಿ ಆಕೆಯನ್ನು ತನ್ನ ತಂದೆಯ ಮನೆಗೆ ವಾಪಸ್ ಕಳುಹಿಸಿದ್ದ. ಗಂಡನನ್ನು ಮೆಚ್ಚಿಸಲು ಆನಂತರ ಜಶೋಬೇನ್ ಎಸ್‌ಎಸ್‌ಸಿ ತನಕ ಓದಿ ಶಾಲೆಯಲ್ಲಿ ಟೀಚರ್ ಆದರು. ಆದರೆ ಮೋದಿ ಎಂದೂ ಆಕೆಯನ್ನು ತಾನಿದ್ದಲ್ಲಿಗೆ ಕರೆಯಲಿಲ್ಲ, ಮೋದಿ ಮುಖ್ಯಮಂತ್ರಿ ಆದ ಆನಂತರ ಆಕೆಯ ಇರುವನ್ನು ಪತ್ತೆ ಹಚ್ಚಿದ ಪತ್ರಕರ್ತರಿಗೆ ಸ್ವತಃ ಮೋದಿ ಧಮಕಿ ಹಾಕಿದ್ದೂ ಉಂಟು. ಒಮ್ಮೆ 'ಓಪನ್' ಪತ್ರಿಕೆಯ ವರದಿಗಾರ್ತಿ ಮುಂದೆ ಜಶೋಬೇನ್ "ನನ್ನ ಗಂಡ ತುಂಬಾ ಪ್ರಭಾವಿ. ನನ್ನ ಜೀವನೋಪಾಯಕ್ಕೆ ಇರುವುದು ಈ ಸರ್ಕಾರಿ ಕೆಲಸ ಮಾತ್ರ. ಆದ್ದರಿಂದ ನಾನು ಆತನ ವಿರುದ್ಧ ಏನನ್ನೂ ಹೇಳಲಾರೆ" ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರು.

ನಾಯಿ ಸೇವೆ



ನಾಯಿ ಮರಿ ನಾಯಿ ಮರಿ
ತಿಂಡಿ ಬೇಕೇ?
ತಿಂಡಿ ಬೇಕು ಓಟು ಬೇಕು
ಎಲ್ಲ ಬೇಕು.


ನಾಯಿ ಮರಿ ನಿನಗೆ ವೋಟ್
ಯಾಕೆ ಬೇಕು?
ವೋಟು ಪಡೆದು
ಪ್ರಧಾನ ಮಂತ್ರಿಯಾಗಬೇಕು.

ನಾಯಿ ಮರಿ ಪ್ರಧಾನಿಯಾದರೆ
ಏನು ಮಾಡುವೆ?
ಅಂಬಾನಿ, ಮಿತ್ತಲ್ ಮನೆಗಳನ್ನು
ನಾನು ಕಾಯುವೆ.

ನಾಯಿ ಮರಿ ಬಡವರು ಬಂದರೆ
ಏನು ಮಾಡುವೆ?
ಕಾರಿನ ಅಡಿಗೆ ಹಾಕಿ
ಮುಂದೆ ಹೋಗುವೆ.

ನಾಯಿ ಮರಿ ವೋಟು ಸಿಗದೇ
ಇದ್ರೆ ನೀನು ಏನು ಮಾಡುವೆ?
ಇನ್ನೊಂದು ಹತ್ಯಾಕಾಂಡ ಮಾಡಿ
ಹೀರೋ ಆಗುವೆ.

● ಬಿ.ಎಂ.ಬಷೀರ್



ಶಾಂತಿ ಕದಡಿದ ಪ್ರಶಾಂತ ನಿಲಯ


ಗಂಗಾಧರ-ಮಮತಾ ಮದುವೆಯಾದಾಗ


ಪೊಲೀಸರ ವಶದಲ್ಲಿ ಗಂಗಾಧರ

ಪತ್ನಿಯನ್ನೇ ಕೊಂದ ಪತ್ರಕರ್ತ

ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳಿಗೆ ಕಾನೂನಿನ ಪಾಠ ಬೋಧಿಸುವ ಅಧ್ಯಾಪಕಿ ಮಂಗಳೂರಿನ ಮಮತಾ ಶೆಟ್ಟಿ ಪುರುಷಾಹಂಕಾರದ ಅಂಥಾ ಕಾನೂನಿಗೆ ಬಲಿಯಾಗಿದ್ದಾರೆ. ಕೊಂದವನು ಬೇರ್‍ಯಾರೂ ಅಲ್ಲ. ಜನಸಮೂಹಕ್ಕೆ ಸುದ್ದಿ ತಲುಪಿಸುವ ಜವಾಬ್ದಾರಿ ಹೊತ್ತ ದೂರದರ್ಶನ ಸುದ್ದಿವಾಹಿನಿಯ ಸ್ಟ್ರಿಂಜರ್, ಕಂಚಿನ ಕಂಠದ ಹಾಡುಗಾರ, ಸ್ವತಃ ಮಮತಾಳ ಕತ್ತಲ ಬದುಕಿನ ಹಾದಿಯಲ್ಲಿ ಪ್ರೇಮ ಪ್ರಕಾಶ ಬೀರಿ ಕೈಹಿಡಿದು ಮುನ್ನಡೆಸಿದ ಆಕೆಯ ಪತಿ ಗಂಗಾಧರ್ ಪಡುಬಿದ್ರಿ.

"ಆತ ಸದಾ ನಗುನಗುತ್ತಾ ಮಾತನಾಡುತ್ತಾನೆ. ಒಂದಿಲ್ಲೊಂದು ಕ್ರಿಯೇಟಿವ್ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾನೆ. ಸದಾ ಜಾಲಿಯಾಗಿರುವ ನೇಚರ್ ಆತನದು. ತುಂಬಾ ಚೆನ್ನಾಗಿ ಹಾಡುತ್ತಾನೆ. ಆದರೆ... ಆತ ಪರಮ ಹೆಣ್ಣು ಬಾಕ. ಅದು ಆತನ ವೀಕ್‌ನೆಸ್. ಅದನ್ನು ಕಟ್ಟಿಕೊಂಡು ನಮಗೇನಾಗಬೇಕಿದೆ..? ಆದರೆ ಪ್ರೇಮಿಸಿ ಕಟ್ಟಿಕೊಂಡ ಪತ್ನಿಯನ್ನು ಈ ರೀತಿ ಬರ್ಬರವಾಗಿ ಕೊಲ್ಲುವಷ್ಟು ನೀಚ, ಸ್ಯಾಡಿಸ್ಟ್ ಎಂದರೆ ನಮಗೆ ನಂಬಲಾಗುತ್ತಿಲ್ಲ." -ಮೊನ್ನೆ ಸೋಮವಾರ ಮಂಗಳೂರು ಕೋಡಿಕಲ್-ಜೆ.ಬಿ. ಲೋಬೋ ರಸ್ತೆಯ ಮನೆಯಲ್ಲಿ ಹೆಂಡತಿಯ ಕತ್ತು ಬಿಗಿದು ಕೊಂದ ಹಂತಕ ದೂರದರ್ಶನ ವಾಹಿನಿಯ ಅರೆಕಾಲಿಕ ವರದಿಗಾರ ಗಂಗಾಧರ ಪಡುಬಿದ್ರಿಯ ಬಗ್ಗೆ ಮಂಗಳೂರಿನ ಬಹುತೇಕ ಪತ್ರಕರ್ತರು ನೀಡುವ ಅಭಿಪ್ರಾಯವಿದು.

ಪಡುಬಿದ್ರಿ ಮೂಲದ ದಲಿತ ಯುವಕ ಗಂಗಾಧರ್ ಕೆಲವು ವರ್ಷಗಳ ಹಿಂದೆ ಮಂಗಳೂರಿನ ಪ್ರಜ್ಞಾ ಕೌನ್ಸೆಲಿಂಗ್ ಸೆಂಟರ್ ಎಂಬ ನಿರಾಶ್ರಿತರ, ನೊಂದು-ಬೆಂದವರ ಪುನರ್ವಸತಿ ಕೇಂದ್ರಕ್ಕೆ ಯಾವುದೋ ಕಾರ್ಯಕ್ರಮದ ವರದಿಗೆ ಹೋಗಿದ್ದ. ಗಂಗಾಧರ್‌ಗೆ ಅಲ್ಲಿ ಮುಗ್ಧ ಮುಖದ, ಸ್ನಿಗ್ಧ ನಗುವಿನ ಸರಳ ಸುಂದರಿ ಮಮತಾ ಶೆಟ್ಟಿಯ ಪರಿಚಯವಾಗಿತ್ತು. ಉಡುಪಿ ಮೂಲದ ಭಾಗ್ಯ, ಮಮತಾ, ಸೌಮ್ಯ ಎಂಬ ಬಡ ಅನಾಥ ಸಹೋದರಿಯರನ್ನು ಅವರ ಅಜ್ಜಿ ಪ್ರಜ್ಞಾಕ್ಕೆ ಸೇರಿಸಿಹೋಗಿದ್ದರು. ಅಲ್ಲಿದ್ದೇ ಮಂಗಳೂರಿನ ಎಸ್‌ಡಿಎಂ ಕಾಲೇಜಿನಲ್ಲಿ ಕಾನೂನು ವ್ಯಾಸಂಗ ಮಾಡುತ್ತಿದ್ದ ಪ್ರತಿಭಾವಂತ ಹುಡುಗಿ ಗಂಗಾಧರನ ಪ್ರೇಮಪಾಶಕ್ಕೆ ಬಿದ್ದಳು. ನಿಜಕ್ಕೂ ಆತ ಆಕೆಯನ್ನು ಬಹುವಾಗಿ ಪ್ರೀತಿಸುತ್ತಿದ್ದ. ಪ್ರೇಮದ ಬಂಧ ಬಿಗಿಯಾಗುತ್ತಲೇ ಅವಳನ್ನು ಪ್ರಜ್ಞಾದಿಂದ ಬಿಡಿಸಿ ಆಕೆ ವ್ಯಾಸಂಗ ಮಾಡುತ್ತಿದ್ದ ಎಸ್‌ಡಿಎಂ ಕಾಲೇಜಿನ ಪಕ್ಕದಲ್ಲೇ ಇದ್ದ ಮನೆಯೊಂದರಲ್ಲಿ ಪೇಯಿಂಗ್ ಗೆಸ್ಟ್ ಆಗಿ ಇರಿಸಿ ಆಕೆಯ ಖರ್ಚು, ವೆಚ್ಚ ಫೀಸು ಇತ್ಯಾದಿಗಳನ್ನು ಗಂಗಾಧರನೇ ಭರಿಸುತ್ತಿದ್ದ. ಆ ಬಳಿಕ ಸ್ನಾತಕೋತ್ತರ ಕಾನೂನು ಪದವಿ ಪಡೆಯಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಗಂಗಾಧರನೇ ಮಾಡಿದ್ದ. ಒಟ್ಟಿನಲ್ಲಿ ಮಮತಾಳ ಮೇಲೆ ಅಪಾರ ಕನಸುಗಳನ್ನು ಕಟ್ಟಿದ್ದ. ಸ್ವಲ್ಪ ಕಾಲ ಬೆಂಗಳೂರಿನಲ್ಲಿ ವಕೀಲಿ ವೃತ್ತಿ ನಿರ್ವಹಿಸುತ್ತಿದ್ದ ಮಮತಾಳಿಗೆ ಆಕೆ ಕಲಿತ ಅದೇ ಎಸ್‌ಡಿಎಂ ಕಾಲೇಜಿನಲ್ಲಿ ತನ್ನ ಪ್ರಭಾವ ಬಳಸಿ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆ ಕೊಡಿಸುವಲ್ಲಿಯೂ ಯಶಸ್ವಿಯಾಗಿದ್ದ.

ಏತನ್ಮಧ್ಯೆ ಅಂದರೆ ನಾಲ್ಕು ವರ್ಷಗಳ ಹಿಂದೆ ಬಂಟರ ಜಾತಿಯ ಮಮತಾಳನ್ನು ದಲಿತರ ಗಂಗಾಧರ್ ಬೆಂಗಳೂರಿನ ದೇವಸ್ಥಾನವೊಂದರಲ್ಲಿ ವರಿಸಿದ. ಆ ಬಳಿಕ ಮಂಗಳೂರಿನ ಕೋಡಿಕಲ್ ಎಂಬಲ್ಲಿ ಖಾಲಿ ಇದ್ದ ತನ್ನ ಸಹೋದರನ ಮನೆ 'ಪ್ರಶಾಂತ'ದಲ್ಲಿ ಪ್ರಶಾಂತವಾಗಿಯೇ ಜೀವನ ಸಾಗಿಸುತ್ತಿದ್ದರು. ಅಷ್ಟರವರೆಗೆ ಗಂಗಾಧರನ ಪ್ರೀತಿಯ, ಮಿಡಿಯುವ ಒಂದು ಮುಖವನ್ನು ಮಾತ್ರ ಕಂಡಿದ್ದ ಮಮತಾಳಿಗೆ ಆನಂತರ ಗಂಗಾಧರನ ಪರಮ ಹೆಣ್ಣು ಬಾಕ ಚಾಳಿಯ ಪರಿಚಯವೂ ಆಯಿತು. ಗಂಗಾಧರ್ ಮದುವೆಯಾದ ಬಳಿಕ ತಾನಿನ್ನು ಮರ್ಯಾದಸ್ಥ ಬಾಳುವೆ ಮಾಡಬೇಕು ಎಂಬ ಬದುಕಿನ ವಾಸ್ತವತೆಯನ್ನು ಬೇಕಂತಲೇ ಕಡೆಗಣಿಸಿ ತನ್ನ ಹುಟ್ಟಾ ಕೊಳಕು ಬುದ್ಧಿಯನ್ನು ಮುಂದುವರಿಸಿದ್ದ. ಏನೇನೂ ಅಲ್ಲದ ಈ ಹುಡುಗಿಗೊಂದು ಬಾಳುವೆ ಕೊಟ್ಟ ತಾನು ಏನು ಮಾಡಿದರೂ ಈಕೆ ಸಹಿಸಲೇಬೇಕೆಂಬ ಆತನ ಹಠಮಾರಿ ಧೋರಣೆ ಅವರ ಮನೆಯನ್ನು ನಿತ್ಯ ರಣರಂಗವಾಗಿಸಿತ್ತು. ಯಾವ ಹೆಣ್ಣೂ ತನ್ನ ಗಂಡ ಪರಸ್ತ್ರೀ ಸಂಗ ಮಾಡುವುದನ್ನು ತಿಳಿದೂ ತಿಳಿದೂ ಸಹಿಸಲಾರಳು. ಅದು ಹೆಣ್ಣೊಬ್ಬಳ ಆತ್ಮಗೌರವಕ್ಕೆ ನೀಡುವ ಮಾರಕ ಹೊಡೆತ. ಹೆಣ್ಣಿನ ಪಾಲಿಗೆ ಗಂಡನ ಈ ವರ್ತನೆ ಯಾವ ಕೌರ್ಯಕ್ಕಿಂತಲೂ ಕಡಿಮೆಯಿಲ್ಲ. ಇದನ್ನೆಲ್ಲಾ ಸಹಿಸುತ್ತಾ ಗಂಡನನ್ನು ತಿದ್ದಲು ಮಮತಾ ಶತಪ್ರಯತ್ನ ಮಾಡಿದಳು. ಪ್ರಯತ್ನಗಳು ಫಲಿಸದಿದ್ದಾಗ ಆತನ ಸಹೋದರರಲ್ಲಿ ತನ್ನ ನೋವು ತೋಡಿಕೊಂಡಳು. ಹತ್ತು ಹಲವು ರಾಜಿ ಪಂಚಾಯತಿಕೆಗಳ ಮೂಲಕ ಬಿರುಕು ಬಿಟ್ಟ ಸಂಬಂಧದ ಎಳೆಗಳಿಗೆ ಮತ್ತೆ ಮತ್ತೆ ತೇಪೆ ಹಚ್ಚುವ ಕೆಲಸವನ್ನು ಆತನ ಸಹೋದರರು ಮಾಡುತ್ತಿದ್ದರು. ಆದರೇನು ಮಾಡುವುದು ಹೆಣ್ಣು ಬಾಕ ಗಂಗಾಧರನ ಹುಟ್ಟು ಗುಣ ಸುಟ್ಟರೂ ಹೋಗಲೇ ಇಲ್ಲ. 'ಪ್ರಶಾಂತ' ಮನೆ ಪ್ರತಿನಿತ್ಯ ಅಶಾಂತಿಗೊಳಗಾಗುತ್ತಿತ್ತು. ಮೊನ್ನೆ ಪಾಪದ ಹುಡುಗಿ ಮಮತಾ ಕೊಲೆಯಾಗುವ ಎರಡು ದಿನಗಳ ಹಿಂದೆ ಗಂಡ-ಹೆಂಡತಿಯ ಕಲಹ ತಾರಕಕ್ಕೇರಿ ಪ್ರಕರಣ ಉರ್ವ ಪೊಲೀಸ್ ಠಾಣೆಯ ಮೆಟ್ಟಲೇರಿತ್ತು. ಮತ್ತೊಮ್ಮೆ ಪೊಲೀಸರ ಸಮ್ಮುಖ ರಾಜಿ ಪಂಚಾಯಿತಿಕೆಯೂ ನಡೆದಿತ್ತು. ಆದರೇನು ಬಾಲ ನೆಟ್ಟಗಾಗುವುದುಂಟೇ?

ಸೋಮವಾರ ಮಧ್ಯಾಹ್ನ ಮತ್ತೆ ಮನೆಯ 'ಪ್ರಶಾಂತಿ' ಕದಡಿದೆ. ಅದು ಮಮತಾ ಎಂಬ ಪಾಪದ ಹುಡುಗಿಯ ಕೊಲೆಯಲ್ಲಿ ಪರ್ಯವಸಾನಗೊಂಡಿದೆ. ಮಾತಿಗೆ ಮಾತು ಬೆಳೆದು ಜಗಳ ತಾರಕಕ್ಕೇರಿದಾಗ ಗಂಗಾಧರ್ ಸಿಟ್ಟಿನ ಭರದಲ್ಲಿ ಡೈನಿಂಗ್ ಟೇಬಲ್ ಕುರ್ಚಿಯಲ್ಲಿ ಕುಳಿತಿದ್ದ ಮಮತಾಳ ಕುತ್ತಿಗೆಗೆ ಆಕೆಯದ್ದೇ ಶಾಲನ್ನು ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ. ತನ್ನ ವಿಕೃತ ಮೋಹದ ದಾರಿಗೆ ಸದಾ ಅಡ್ಡಲಾಗಿದ್ದ ಪತ್ನಿಯನ್ನು ಇಲ್ಲವಾಗಿಸುವ ಮೂಲಕ ಒಂದರ್ಥದಲ್ಲಿ ಮಿತಿ ಮೀರಿದ ಕಾಮವಾಂಛೆಗೂ ಗಂಗಾಧರ್ ಇತಿಶ್ರೀ ಹಾಡಿದ...! ಸಿಟ್ಟಿನ ಭರದ[illegible] ಪತ್ನಿಯನ್ನು ಕೊಂದವನಿಗೆ ವಾಸ್ತವದ ಪ್ರಜ್ಞೆ ಮರಳಿ[illegible] ಆಕೆ ಹೆಣವಾದ ಬಳಿಕವೇ... ತಕ್ಷಣ ಮನೆ[illegible] ಮುಂಬಾಗಿಲನ್ನು ತೆರೆದಿಟ್ಟು ಗಂಗಾಧರ್ ಹೊರಬಂ[illegible] ಸ್ವಲ್ಪ ಹೊತ್ತು ಕಳೆದು ಮನೆಗೆ ಮರಳಿದವನೇ [illegible] ಹೆಂಡತಿಯನ್ನು ಯಾರೋ ಕೊಂದು ಹಾಕಿದ್ದಾರೆ ಎಂ[illegible] ಪ್ರಕಾರಬ್ಬಿಸುವ ವ್ಯರ್ಥ ಪ್ರಯತ್ನ ಮಾಡಿದ. ತನ್ನ ಸಹೋ[illegible] ಮೋಹನಾಂಗಯ್ಯ ಸ್ವಾಮಿಗೆ ಕರೆಮಾಡಿ ಮಮತಾ ಸತ್ತಿದ್[illegible] ಎಂದು ಗೋಗರೆದ. ಆದರೆ ತನ್ನ ಯೋಜನೆ ಖಂಡಿ[illegible] ಫಲಿಸದು ಎಂಬ ವಾಸ್ತವ ಮನವರಿಕೆಯಾದಾಗ ತಾ[illegible] ಕೊಲೆ ಮಾಡಿರುವುದಾಗಿ ಒಪ್ಪಿಕೊಂಡು ಕಂಬಿಗಳ ಹಿಂ[illegible] ಸೇರಿಬಿಟ್ಟ.

ಅಮಾಯಕ ತರುಣಿ ಮಮತಾಳ ಅಸಹಾಯ[illegible] ಬದುಕಿಗೆ ಬೆಳಕಾದವನೇ ಆಕೆಯ ದುರಂತ ಅಂತ್ಯಕ[illegible] ಕಾರಣನಾಗಿದ್ದಾನೆ. ಮಂಗಳೂರಿನ ಮೀಡಿಯಾ ವಲಯ[illegible] ಬರ್ಬರತೆಯ ಕೆಂಪು ಗೆರೆ ಎಳೆದ ಗಂಗಾಧರನಿಗೆ ಗರಿ[illegible] ಶಿಕ್ಷೆಯಾಗಲೇಬೇಕಿದೆ. ಈ ಕೇಸು ಹಳ್ಳ ಹಿಡಿಯದಿರ[illegible] ಎಂದು ಆಶಿಸುವ ಮಾಧ್ಯಮ ಮಿತ್ರರು 'ಹಳ್ಳ ಹಿಡಿಯ[illegible]ವುದು' ಅಷ್ಟು ಸುಲಭವಲ್ಲ ಎಂಬ ಅಭಿಪ್ರಾಯವನ[illegible] ವ್ಯಕ್ತಪಡಿಸುತ್ತಾರೆ. ಕೊಲೆಯಾಗುವ ಎರಡು ದಿನ ಹಿಂದ[illegible] ಉರ್ವ ಪೊಲೀಸ್ ಠಾಣೆಯಲ್ಲಿ ಗಂಗಾಧರನ ಕಚ್ಚೆ ಹರು[illegible] ಬುದ್ಧಿ ಅಧಿಕೃತವಾಗಿ ದಾಖಲಾಗಿದ್ದು ಕಾನೂನಿ[illegible] ಕಣ್ಣುಮುಚ್ಚಿಸುವ ಕೈಗಳಿಗೆ ತಡೆಯಾಗಿದೆ.

ಮಮತಾಳ ಬದುಕಿನ ದುರ್ಬಲ ಬಂಡಿಗೆ ಆಸ[illegible] ವೇಗವೊದಗಿಸಿದ ಗಂಗಾಧರ್ ಮಮತಾಳನ್ನು ಇನ್ನಿಲ್ಲವಾ[illegible]ಸುವ ಮೂಲಕ ಪುರುಷಾಹಂಕಾರಕ್ಕೆ, ಸ್ತ್ರೀ ಶೋಷಣೆ[illegible] ತಾನೂ ಒಂದು ಉದಾಹರಣೆಯಾಗಿ ಹೋಗಿದ್ದಾನೆ.

● ಇಸ್ಮತ್ ಫಜೀರ[illegible]

ವಿಶಿಷ್ಟ ಸ್ತ್ರೀವಾದಿ ಚಿಂತಕಿ-ಶರ್ಮಿಳಾ ರೇಗೆ




ಪೊಲಿಟಿಕಲ್ ಆಕ್ಟಿವಿಸ್ಟ್, ಸಮಾಜಶಾಸ್ತ್ರಜ್ಞೆ, ಸ್ತ್ರೀವಾದಿ, ಫುಲೆ ಮತ್ತು ಅಂಬೇಡ್ಕರ್‌ವಾದಿ ಶರ್ಮಿಳಾ ರೇಗೆ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಿದ್ದಾರೆ. ಅವರ ನಿರ್ಗಮನ ಭಾರತೀಯ ಸ್ತ್ರೀವಾದ ಮತ್ತು ಸಮಾಜಶಾಸ್ತ್ರದ ಕ್ರಿಯಾಶೀಲತೆಗೆ ಧಕ್ಕೆಯನ್ನುಂಟು ಮಾಡಿದೆ.

ಕೇವಲ 48 ವರ್ಷದವರಾಗಿದ್ದ ಶರ್ಮಿಳಾ ಗಳಿಸಿದ ಜನಪ್ರಿಯತೆ ಅಪಾರ. ಮಹಾರಾಷ್ಟ್ರದಾದ್ಯಂತ ಅವರಿಗೆ ಅಪಾರ ಅಭಿಮಾನಿಗಳು ಹಾಗೂ ಅನುಯಾಯಿಗಳಿದ್ದರು. ಚುರುಕಾಗಿ ಪಾದರಸಂತೆ ಓದು-ಬರಹ ಸಂಘಟನೆಗಳಲ್ಲಿ ತೊಡಗಿದ್ದ ಶರ್ಮಿಳಾ ಮಹರಾಷ್ಟ್ರದ ಚಿಂತಕರ ನಡುವೆ ಹೊಳೆಯುತ್ತಿದ್ದ ಪ್ರಖರ ಪ್ರತಿಭೆ.

ಯುರೋಪು ಮತ್ತು ಅಮೆರಿಕನ್ ಸ್ತ್ರೀವಾದ ಕೇವಲ ಬಿಳಿ ಮಹಿಳೆಯರ ಪಟ್ಟಭದ್ರ ಹಿತಾಸಕ್ತಿಯಾಗಿದ್ದ ಕಾಲದಲ್ಲಿ ಕೇಳಿ ಬಂದ ಕಪ್ಪು ಮಹಿಳಾವಾದ ಅವರೆಗಿನ ಸ್ತ್ರೀವಾದದಲ್ಲಿದ್ದ ಭ್ರಮೆಗಳನ್ನು ಕಳಚಿ ಹಾಕಿತು.

ಶರ್ಮಿಳಾ ರೇಗೆ ತಮ್ಮ ಅಧ್ಯಯನ ಆರಂಭಿಸಿದಾಗ ಭಾರತೀಯ ಮಹಿಳಾವಾದವು ಬಿಳಿ ಮಹಿಳಾವಾದದ ದುರ್ಬಲ ಪಡಿಯಚ್ಚಿನಂತಿತ್ತು, ಅಲ್ಲಿಯ ಪರಿಭಾಷೆಯನ್ನು ಅಕ್ಷರಶಃ ಉರುಹೊಡೆದು ಜಡಗೊಂಡಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಮೇಲ್ಜಾತಿ ಮಹಿಳೆಯರ ಸಮಸ್ಯೆಗಳನ್ನು ಸಾರ್ವತ್ರೀಕರಣಗೊಳಿಸಿ ಭೂತ ಕನ್ನಡಿ ಹಾಕಿ ತೋರಿಸುತ್ತಿತ್ತು. ಇಂತಹ ಕಾಲದಲ್ಲಿ ಶರ್ಮಿಳಾ ಪೂನಾದಲ್ಲಿ ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಫುಲೆ ಮಹಿಳಾ ಅಧ್ಯಯನ ಕೇಂದ್ರದ ನಾಯಕತ್ವ ವಹಿಸಿಕೊಂಡರು. ತಮ್ಮ ಕಠಿಣಶ್ರಮ ಮತ್ತು ಸಂಶೋಧನೆಯಿಂದ ಭಾರತೀಯ ಮಹಿಳಾವಾದ, ಜಾತಿ ಮತ್ತು ತಾವು ಮುಂದೆ ತುಳಿಯಬೇಕಾದ ಸೈದ್ಧಾಂತಿಕ ಹಾದಿಯನ್ನು ಕುರಿತು ಖಚಿತ ನಿಲುವನ್ನು ತಳೆದರು. ಸಂಶೋಧನೆಗಾಗಿ ಜಾತಿ ಮತ್ತು ಲಿಂಗ ಸಂಬಂಧಗಳನ್ನು ಕುರಿತ ಯೋಜನೆಯೊಂದನ್ನು ಕೈಗೆತ್ತಿಕೊಂಡರು.

ದೇಶದ ಸಾವಿರಾರು ವಿಶ್ವವಿದ್ಯಾಲಯಗಳಲ್ಲಿ ಯುಜಿಸಿ ಪ್ರಾಯೋಜಿತ ಸಂಶೋಧನೆಗಳು ನಡೆಯುತ್ತಲೇ ಇರುತ್ತವೆ. ಅವು ಕೇವಲ ವ್ಯಕ್ತಿಗತ ಸಾಧನೆಯನ್ನು ಹಿಗ್ಗಿಸಿಕೊಳ್ಳುವ, ಪ್ರಮೋಷನ್ ಪಡೆಯುವ ಮೆಟ್ಟಲುಗಳಾಗಿ ಕೊನೆಗೊಳ್ಳುತ್ತವೆ. ಒಂದು ಸಮುದಾಯವನ್ನು ಸಕಾರತ್ಮಕವಾಗಿ ಕ್ರಿಯಾಶೀಲಗೊಳಿಸುವ ಸಾಧ್ಯತೆಗಳೇ ಕಡಿಮೆಯಾಗಿರುತ್ತವೆ. ಆದರೆ ಶರ್ಮಿಳಾ ತಮ್ಮ ಸಂಶೋಧನೆಯ ಮೂಲಕ ಭಾರತೀಯ ಸ್ತ್ರೀವಾದದ ಮಿತಿಗಳನ್ನು ಸಮರ್ಥವಾಗಿ ತೋರಿಸಿದರು. ಅದು ಹೇಗೆ ಮೇಲ್ಜಾತಿ ಮಹಿಳೆಯರ ಹಿತಾಸಕ್ತಿಯನ್ನು ರಕ್ಷಿಸುವ ರಕ್ಷಾಕವಚವಾಗಿ ಅರಾಜಕತೆಯನ್ನು ಮುಚ್ಚಿಡುವ 'ವಲ್ಗರ್ ಫೆಮಿನಿಸಂ' ಆಗಿದೆ ಎಂಬುದನ್ನು ``Writing Caste Writing Gender'' ಪುಸ್ತಕದ ಮೂಲಕ ತಿಳಿಸಿಕೊಟ್ಟರು. 1920 ರಿಂದ ಇತ್ತೀಚಿನವರೆಗಿನ ಎಂಟು ದಲಿತ, ಆಲೆಮಾರಿ ಮತ್ತು ಬುಡಕಟ್ಟು ಮಹಿಳೆಯರ ವೈಯಕ್ತಿಕ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟರು. ಅಂಬೇಡ್ಕರ್‌ಗೂ ಮುನ್ನಿನ ಮತ್ತು ನಂತರದ ಕಾಲದಲ್ಲಿಯೂ ದಲಿತ ಮಹಿಳೆಯರ ಮೇಲೆ ಪರಂಪರಾನುಗತ ಪುರುಷ ಹಿಂಸೆಯ ಜೊತೆಗೆ ಜಾತಿ ಹಿಂಸೆಯೂ ಸೇರಿದೆ ಎಂಬುದನ್ನು ಸೈದ್ಧಾಂತಿಕವಾಗಿ ಜೀವಂತ ಪುರಾವೆಗಳ ಮೂಲಕ ತೋರಿಸಿಕೊಟ್ಟರು.




ಅಲ್ಲಿಯವರೆವಿಗೂ ದಲಿತ ಸ್ತ್ರೀವಾದ ಎಂಬುದು ಎಲ್ಲೋ ಕ್ಷೀಣವಾಗಿ ಕೇಳಿಬರುತ್ತಿದ್ದ ದನಿಯಾಗಿತ್ತು. ಆದರೆ ಶರ್ಮಿಳಾರವರ ಸಂಶೋಧನೆಯಿಂದ ಅದೊಂದು ಗಟ್ಟಿಯಾದ ಸಿದ್ಧಾಂತವಾಗಿ ರೂಪುಗೊಂಡಿತು. ಸ್ತ್ರೀವಾದದಲ್ಲಿ ಜಾತಿಯ ವಿಚಾರ ಎತ್ತಲು ಹಿಂಜರಿಯುತ್ತಿದ್ದವರು ಈಗ ಖಚಿತವಾಗಿ ಮಾತನಾಡಲು ಸಾಧ್ಯವಾಗಿದೆ.

ಭಾರತೀಯ ಸ್ತ್ರೀವಾದದ ಬೇರನ್ನು ಬ್ರಾಹ್ಮಣ ಹಿನ್ನೆಲೆಯ ವ್ಯಕ್ತಿಗಳ ಮೂಲದೊಂದಿಗೆ ಗುರುತಿಸಲಾಗುತ್ತಿತ್ತು. ಭಾರತೀಯ ಸ್ತ್ರೀವಾದ ಮತ್ತು ಸಮಾಜಶಾಸ್ತ್ರದಲ್ಲಿ ಮೊಟ್ಟಮೊದಲ ಬಾರಿಗೆ ಗರ್ಭ ಧರಿಸುವ ಅಥವಾ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕನ್ನು ಮಹಿಳೆಯರಿ[illegible] ನೀಡಬೇಕೆಂದು ಪ್ರತಿಪಾದಿಸಿದ ಪೆರಿಯಾರ್ ಬ[illegible] ಅಪ್ಪಿತಪ್ಪಿಯೂ ಪ್ರಸ್ತಾಪಿಸುತ್ತಿರಲಿಲ್ಲ. ಅದೇ ರೀ[illegible] ತಳಸಮುದಾಯದ ಮಹಿಳೆಯರ ಏಳಿಗಾಗಿ ಜೀವನವನ್ನ[illegible] ಮುಡಿಪಿಟ್ಟು ಜ್ಯೋತಿಬಾಫುಲೆ, ಸಾವಿತ್ರಿ ಬಾಫುಲ[illegible] ಮಹಿಳೆಯರಿಗೆ ಆಸ್ತಿ ಹಕ್ಕನ್ನು ನೀಡಬೇಕೆಂದು ಆಗ್ರಹಿಸಿ[illegible] ಅಂಬೇಡ್ಕರರ ಹೆಸರನ್ನು ಪ್ರಸ್ತಾಪಿಸುತ್ತಿರಲಿಲ್ಲ, ಶೈಕ್ಷಣಿ[illegible] ಪಠ್ಯ ಮತ್ತು ಮಾಧ್ಯಮದಲ್ಲಿ `Conspiracy o[illegible] silence' ಅನ್ನು ಮಾಡಲಾಗಿತ್ತು. ಶರ್ಮಿಳಾ ರೇ[illegible] ಭಾರತೀಯ ಸ್ತ್ರೀಯರ ಉನ್ನತಿಗೆ ತಳಿಸಮುದಾಯಗಳ[illegible] ನೀಡಿರುವ ಕಾಣಿಕೆಗಳನ್ನು ತಮ[illegible] ಸಂಶೋಧನೆಗಳ ಮೂಲ[illegible] ತೋರಿಸಿಕೊಟ್ಟರು.

ಶರ್ಮಿಳಾ ಆರಾಮ ಕುರ್ಚಿಯ[illegible] ಜಡಗೊಂಡ ಚಿಂತಕಿಯಾಗಿರಲಿಲ್[illegible] ಕ್ರಿಯಾಶೀಲ ಸಂಶೋಧನೆಯ ಹಾದಿಯನ್[illegible] ಹಾಕಿಕೊಟ್ಟರು. ಬ್ರಾಹ್ಮಣ್ಯದಿಂದ ನರಳುತ್ತಿ[illegible] ಭಾರತೀಯ ಸ್ತ್ರೀವಾದಕ್ಕೆ ಜೀವಕಳೆ ಮತ್[illegible] ಚೈತನ್ಯವನ್ನು ನೀಡಿದರು. ಅವರ ನಿರ್ಗಮಿಸುವ ಮುಂಚೆ 'ಮನುವಿ[illegible] ಹುಚ್ಚುತನ' ಎಂಬ ಪುಸ್ತಕವನ[illegible] ಸಂಪಾದಿಸಿದರು. ಇಂಗ್ಲಿಷ್‌ನಲ್ಲಿರು[illegible] ಮಹತ್ವದ ಕೃತಿಗಳನ್ನು ಮರಾಠಿಗೆ ಮತ್ತು ಪ್ರಾದೇಶಿ[illegible] ಭಾಷೆಗಳಿಗೆ ಅನುವಾದಿಸಲೇಬೇಕೆಂಬ ತಿಳುವಳಿಕೆ ಹೊಂದಿ[illegible] ಶರ್ಮಿಳಾ ನಿಜಕ್ಕೂ ಜನಪರ ಚಿಂತಕಿ ಮತ್[illegible] ಸಮಾಜಶಾಸ್ತ್ರಜ್ಞರಾಗಿದ್ದರು. ತೀವ್ರ ಅನಾರೋಗ್ಯ ಅವ[illegible] ಬದ್ಧತೆ ಮತ್ತು ಜನಪರತೆಯನ್ನು ಕಡಿಮೆ ಮಾಡಲಿ[illegible] ಅವರ ಕ್ರಿಯಾಶೀಲತೆ ನಮ್ಮಂತಹ ಲಕ್ಷಾಂತರ ಮಂದಿ[illegible] ಸ್ಫೂರ್ತಿಯಾಗಿದೆ.

● ಡಾ. ಲಕ್ಷ್ಮೀಪತಿ ಸಿ.ಜಿ[illegible]



ನಾಮ ತೀಡಿದ ರವೀಂದ್ರನಾಥ

ಮೈಸೂರು-ದಾವಣಗೆರೆ-ರಾಯಚೂರು-ಬೀದರ್

ಗ್ರೀನ್ ಬಡ್ಸ್ ರವೀಂದ್ರನಾಥ ಹಾಕಿದ 300 ಕೋಟಿ ನಾಮ!


ಅನಾಮತ್ತು ಲಕ್ಷ ಮಂದಿಗೆ ನಾಮ ಬಿದ್ದಿದೆ! ಅದೂ, ಒಂದಲ್ಲ-ಎರಡಲ್ಲ ಬರೋಬ್ಬರಿ 300 ಕೋಟಿ ಪಂಗನಾಮ!!

ಮೈಸೂರಿನಲ್ಲಿ ಬಿ.ಎನ್.ರವೀಂದ್ರನಾಥ ಎಂಬ ಐನಾತಿ ...ಸಾಮಿ ಹುಟ್ಟು ಹಾಕಿದ ಗ್ರೀನ್ ಬಡ್ಸ್ ಆಗ್ರೋ ಫಾರಂ ಸಂಸ್ಥೆಯ ಸಾಧನೆ ಇದು. ಇದಿಷ್ಟೂ ಪ್ರಾಥಮಿಕ ಅಂಕಿ-ಅಂಶ ಮಾತ್ರ. ಸರಿಯಾದ್ದೊಂದು ಸರ್ವೆ ಮಾಡಿ ನಾಮ ...ಡಿಸಿಕೊಂಡವರ ಪರಿಪಕ್ವ ಪಟ್ಟಿ ತಯಾರಿಸಿದರೆ ...ತ್ತೊಂದು 'ವಿನಿವಿಂಕ್' ಆಗುವ ಎಲ್ಲಾ ಲಕ್ಷಣಗಳೂ ... ಪ್ರಕರಣಕ್ಕಿದೆ. ಕಂಡವರ ಕಾಸಲ್ಲಿ ಕಜ್ಜಾಯ ಖರೀದಿಸೊ ...ಯಮಾನದ ರವೀಂದ್ರನಾಥನನ್ನು ಜುಲೈ 13ರಂದು ...ಜರಬಾದ್ ಪೊಲೀಸರು ಬಂಧಿಸಿ ...ೈಲಿಗಟ್ಟಿದ ನಂತರವಷ್ಟೆ ಗ್ರೀನ್ ಬಡ್ಸ್ ...ಂಚನೆಯ ಆಳ ಅಗಲಗಳು ...ದೊಂದಾಗಿ ಬೆಳಕಿಗೆ ಬರುತ್ತಿವೆ. ಕೇವಲ ...ೈಸೂರಲ್ಲದೆ ದೂರದ ರಾಯಚೂರು, ...ವಣಗೆರೆ, ಬೀದರ್‌ನಿಂದಲೂ ಸಂಸ್ಥೆಯ ...ೀಲೆ ಫೋರ್-ಟ್ವೆಂಟಿ ದೂರುಗಳ ...ಯೇ ಎದ್ದಿದೆ. ಮಗನ ಓದಿಗೆಂದೊ, ...ಗಳ ಮದುವೆಗೆಂದೊ, ಸ್ವಂತದ್ದೊಂದು ...ರು ಕಟ್ಟಿಕೊಳ್ಳಲೆಂದೊ ಗ್ರೀನ್ ಬಡ್ಸ್ ...ಕೌಂಟಿಗೆ ದುಡ್ಡು ಹಾಕಿದ್ದವರೆಲ್ಲ ಈಗ ...ಕ್ಕೆಟ್ಟು ಕೂತಿದ್ದಾರೆ. ಅದೆಲ್ಲಕ್ಕಿಂತಲೂ ...ಚ್ಚಾಗಿ ಭರಪೂರ ಕಮೀಷನ್ ಆಸೆಗೆ ಜನರಿಂದ ದುಡ್ಡು ...ಕಿಸಿದ್ದ ಏಜೆಂಟರುಗಳಿಗಂತೂ ನಡುಕ ಶುರುವಾಗಿದೆ. ...ಕೆಂದರೆ, ಹಣ ಕಳೆದುಕೊಂಡವರು ಏಜೆಂಟರುಗಳನ್ನು ...ಗ್ಗಾ-ಮುಗ್ಗಾ ಥಳಿಸಿದ ಘಟನೆಗಳೂ ಅಲ್ಲಲ್ಲಿ ನಡೆದಿವೆ. ...ಟ್ಟಿನಲ್ಲಿ ಹಣ ಡಬಲ್ ಮಾಡಿ ಕೊಡ್ತೀನಿ, ಕೊಟ್ಟ ...ಸಲಿಗೆ ಕಂಡು ಕೇಳರಿಯದಷ್ಟು ಬಡ್ಡಿ ನೀಡ್ತೀವಿ, ದಿಢೀರ್ ...ಕರನ್ನಾಗಿಸ್ತೀವಿ ಎಂಬಿತ್ಯಾದಿ ರಸವತ್ತು ಮಾತುಗಳಿಗೆ ...ರುಳಾಗಿ ಜೇಬು ಖಾಲಿ ಮಾಡಿಕೊಳ್ಳುವ ಜನರಿರುವವರೆಗೆ ...ಂತಹ 'ಬ್ಲೇಡ್' ಕಂಪನಿಗಳ ಹಾವಳಿ ನಿಲ್ಲುವುದಿಲ್ಲ ...ನ್ನುವುದು ಮತ್ತೊಮ್ಮೆ ಸಾಬೀತಾದಂತಾಗಿದೆ.

ಕಳೆದ 14 ವರ್ಷಗಳಿಂದ ಮೈಸೂರಿನ ಮಾದೇಶ್ವರ ...ಬ್ಬರಸ್ತೆಯ ಮದ್ದೇಶ ಕಾಂಪ್ಲೆಕ್ಸ್‌ನಲ್ಲಿ ತೆರೆದುಕೊಂಡಿದ್ದ ...ೀನ್ ಬಡ್ಸ್ ಸಂಸ್ಥೆಗೆ ರವೀಂದ್ರನಾಥನೇ ಹುಟ್ಟು ರೂವಾರಿ. ...ಸಿ ಫಾರ್ಮ್‌ಗಳ ಅಭಿವೃದ್ಧಿ ಮತ್ತು ಸಾವಯವ ಕೃಷಿಗೆ ...ತ್ತು ನೀಡುವ ಪ್ರೊಜೆಕ್ಟ್ ಮಾಡ್ತೀನಿ ಅಂತ ಬೋರ್ಡ್ ...ಷು ಹಾಕಿಕೊಂಡಿದ್ದನಾದರೂ ಹಣ ದುಪ್ಪಟ್ಟು ...ಡಿಕೊಡುವುದಾಗಿ ಜನರಿಂದ ಸುಲಿಗೆ ಮಾಡುವುದೇ ...ನ ಕಸುಬು. ಈ ವಿಚಾರದಲ್ಲಿ ರವೀಂದ್ರನಾಥನ ವ್ಯವಹಾರ ...ಸಾದಾ. ಲಕ್ಷಾಂತರ ಹಣವೆಂದರೆ ಜನ ಬಾಗ್ರತರಾಗಿ ...ದುತ್ತಾರೆ. ಹಾಗಾಗಿ 10 ರೂಪಾಯಿ, 100 ...ಪಾಯಿಗಳ ಸಣ್ಣ ಮೊತ್ತದ ಮೂರು ಸ್ಕೀಮುಗಳಿಗೆ ...ತ ಜಸ್ಮಕೊಟ್ಟಿದ್ದ. "ಪ್ಲಾನ್-1ರಂತೆ ಪ್ರತಿ ತಿಂಗಳು ...00 ರೂಪಾಯಿ, ಇಲ್ಲವೇ ಪ್ಲಾನ್-2ರಂತೆ ಪ್ರತಿ ತಿಂಗಳು ...000 ರೂಪಾಯಿ ಅದೂ ಬೇಡವೆಂದರೆ ಸಿಂಪಲ್ಲಾಗಿ ...ನ್-3ರ ಪ್ರಕಾರ ಪ್ರತಿ ದಿನ 10 ರೂಪಾಯಿಯನ್ನು ...ದು ವರ್ಷ ಕಟ್ಟಿದರೆ ನೀವು ಕಟ್ಟಿದ ಮೊತ್ತಕ್ಕೆ ಡಬಲ್ ಹಣ ವಾಪಸ್ ಕೊಡ್ತೀನಿ. ಅಲ್ಲದೆ ಆಕ್ಸಿಡೆಂಟ್ ಬೆನೆಫಿಟ್ ಕೂಡಾ ಸಿಗುತ್ತೆ" ಅಂತೆಲ್ಲಾ ಪುಸಲಾಯಿಸಿ ಹಣ ಹೂಡಿಸಿಕೊಳ್ಳುತ್ತಿದ್ದ ಈತ ಅದೆಲ್ಲವನ್ನೂ ಬಳಸಿಕೊಳ್ಳುತ್ತಿದ್ದದ್ದು ತನ್ನ ಪರ್ಸನಲ್ ತೆವಲುಗಳಿಗೆ.

ಹೀಗೆ ಜನರಿಂದ ಎತ್ತಿದ ದುಡ್ಡಿನಿಂದಲೇ ತನ್ನ ಸ್ವಂತ ಹೆಸರಲ್ಲಲ್ಲದೆ ಹೆಂಡತಿ ಯು.ಎಲ್.ದ್ರಾಕ್ಷಾಯಿಣಿ, ಭಾಮೈದ ಮಧು, ಇತರೆ ಸಬಂಧಿಕರ ಹೆಸರಲ್ಲಿ ಏನಿಲ್ಲವೆಂದರೂ 400 ಎಕರೆಗೂ ಹೆಚ್ಚು ಜಮೀನು ಖರೀದಿಸಿ ರಿಯಲ್ ಎಸ್ಟೇಟ್ ದಂಧೆಗೆ ಬಿಟ್ಟಿದ್ದಾನೆ. ಒಂದೆರಡು ಕಡೆ ಸಣ್ಣಪುಟ್ಟ ಜಮೀನನ್ನು ಸಂಸ್ಥೆ ಹೆಸರಲ್ಲಿ ಖರೀದಿಸಿ ಅಲ್ಲಿ ಆಗ್ರೋ ಫಾರ್ಮ್ ಮಾಡಿರುವುದು ಬಿಟ್ಟರೆ ಉಳಿದೆಲ್ಲವೂ ಇವನ ಖಾಸಗಿ ಆಸ್ತಿಗಳು. ನಂಜನಗೂಡು ಚೈಪುರ ಹೋಬಳಿಯ ಬಡವನಪುರ, ದೊಡ್ಡಕವಲಂದೆ, ಮಾದಾಪುರ, ನರಸೀಪುರದ ಹೊಸ ಕುಕ್ಕೂರು, ಗುಂಡ್ಲುಪೇಟೆಯ ತೆರಕಣಾಂಬಿ, ಸಿದ್ದರಾಮನಹುಂಡಿ ಹೀಗೆ ಕಂಡಕಂಡ ಕಡೆಯಲ್ಲೆಲ್ಲ ಎಕರೆಗಟ್ಟಲೆ ಜಮೀನು ಖರೀದಿಸಿ ಜನರ ದುಡ್ಡು ಉಡಾಯಿಸಿದ್ದಾನೆ. ತಲಕಾಡು ಬಳಿಯ ವಿಜಯಪುರ ಹಾಗೂ ಚಾಮರಾಜನಗರ ಜಿಲ್ಲೆಯ ದಾಸನೂರುಗಳಲ್ಲಿ ತಲಾ ನೂರು ಎಕರೆಯ ಎರಡು ಸಾಲಿಡ್ ಪ್ಲಾಟ್‌ಗಳಿಗೆ ರವೀಂದ್ರನಾಥನೇ ಒಡೆಯ. ಮೈಸೂರು ನಗರದ ಟಿ.ಎನ್.ಪುರ ರಸ್ತೆಯಲ್ಲಿರುವ ಸರ್ದಾರ್ ವಲ್ಲಬ್‌ಭಾಯ್ ಪಟೇಲ್ ನಗರದ ತನ್ನ ಮನೆಯ ಆಸುಪಾಸಿನಲ್ಲೇ 20 ಸೈಟುಗಳನ್ನು ಖರೀದಿಸಿ ಅವುಗಳನ್ನೆಲ್ಲ ಲಾಭದ ಬೆಲೆಗೆ ಮಾರಿಕೊಂಡಿದ್ದಾನೆ.

ಇದರ ಜೊತೆಗೆ ಈ 'ಪರಾ'ಪಕಾರಿ ರವೀಂದ್ರನಾಥನಿಗೆ ಕಾರುಗಳ ವಿಪರೀತ ಕ್ರೇಜೂ ಇದೆ. ಮಾರುಕಟ್ಟೆಗೆ ಬರುವ ಹೊಸ ಹೊಸ ಮಾಡೆಲ್ ಕಾರುಗಳನ್ನೆಲ್ಲ ತಂದು ಮನೆ ಮುಂದೆ ನಿಲ್ಲಿಸಿಕೊಳ್ಳೋದು, ಸ್ವಲ್ಪ ದಿನ ಓಡಾಡಿಸಿದ ನಂತರ ಅವನ್ನು ಬೇಕಾಬಿಟ್ಟಿ ರೇಟಿಗೆ ಮಾರಿ ಹೊಸ ಕಾರುಗಳನ್ನು ತರೋದು ಅವನ ಖಯಾಲಿ. ಆತ ಮನೆಯಲ್ಲಿ ಇರದಿದ್ದಾಗಲು ಮನೆ ಮುಂದೆ ಆರರಿಂದ ಏಳು ಕಾರುಗಳು ಕ್ಯೂ ನಿಂತಿರುತ್ತವೆ. ಅವಾದರೂ ಸ್ಕೋಡಾ ಆಕ್ಟೇವಿಯಾ, ಟೊಯೋಟಾ ಫಾರ್ಚುನರ್, ಇನ್ನೋವಾ ಮೊದಲಾದ ದುಬಾರಿ ಕಾರುಗಳು. ತೀರಾ ಇತ್ತೀಚೆಗೆ ತನ್ನ ಕಾರುಗಳನ್ನು ನಿಲ್ಲಿಸುವ ಸಲುವಾಗಿಯೇ ಮನೆ ಪಕ್ಕದಲ್ಲಿ ಖಾಲಿ ಇದ್ದ ಎರಡು ಸೈಟುಗಳನ್ನು ಖರೀದಿಸಿ ದೊಡ್ಡದಾದ ಗೋಡೌನ್ ಕಟ್ಟಿಸಿಕೊಂಡಿದ್ದ. ಇವನ ಕಾರಿನ ವ್ಯಾಮೋಹ ಎಂತದ್ದೆಂದರೆ ತನ್ನ ವಂಚನೆಗಳು ಒಂದೊಂದಾಗಿ ಹೊರಬೀಳಲು ಆರಂಭಿಸಿದ ನಂತರವೂ ಒಂದು ತಿಂಗಳ ಹಿಂದಷ್ಟೇ ಬರೋಬ್ಬರಿ ಒಂದು ಕೋಟಿ ನಲವತ್ತು ಲಕ್ಷದ ದುಬಾರಿ ಕಾರೊಂದನ್ನು ಖರೀದಿಸಿದ್ದ! ಯಾರ್ದೋ ದುಡ್ಡು ಯಲ್ಲಮ್ಮನ ಜಾತ್ರೆ ಅಂದ್ರೆ ಇದೇ ಅಲ್ವಾ...



ಕಮೀಷನರ್ ಸುಧೀರ್

ತನ್ನ ಸಂಸ್ಥೆಗೆ ಎಂಟು ಜನ ಡೈರೆಕ್ಟರ್‌ಗಳಿದ್ದಾರೆ, ವ್ಯವಸ್ಥಿತವಾಗಿ ಆಡಿಟ್ ನಡೆಸ್ತೀನಿ, ಸಂಸ್ಥೆಯ ಹೆಸರಲ್ಲಿ ಈಗಾಗಲೇ ನೂರಾರು ಎಕರೆ ಆಗ್ರೋ ಪ್ರಾಜೆಕ್ಟ್‌ಗಳಿವೆ ಅಂತೆಲ್ಲ ಹೇಳಿಕೊಳ್ಳುತ್ತಿದ್ದದ್ದು ಪಕ್ಕಾ ಬೋಗಸ್ ಎನ್ನುವುದು ಈಗ ಒಂದೊಂದಾಗಿ ಬಯಲಾಗುತ್ತಿವೆ. ಆತ ಹೇಳಿದ ಎಂಟು ಮಂದಿ ಡೈರೆಕ್ಟರ್‌ಗಳಲ್ಲಿ ಆರು ಹೆಸರು ಬೋಗಸ್. ಇನ್ನುಳಿದ ಇಬ್ಬರಲ್ಲಿ ಈತ ಒಬ್ಬ ಇವನ ಭಾಮೈದನೇ ಇನ್ನೊಬ್ಬ. ಆರಂಭದಲ್ಲಿ ಸಕ್ಕರೆ ಕಾರ್ಖಾನೆಯ ಸೂಪರ್‌ವೈಸರ್ ಒಬ್ಬ ಇದಕ್ಕೆ ಡೈರೆಕ್ಟರ್ ಆಗಿದ್ದನಾದರು ಇವನ ಹೊಲಸು ವ್ಯವಹಾರ ತಿಳಿದ ಕೂಡಲೇ ಗ್ರೀನ್ ಬಡ್ಸ್‌ಗೆ ಗುಡ್‌ಬೈ ಹೇಳಿ ಹೊರನಡೆದಿದ್ದರು. 1999ರಲ್ಲಿ ಕಂಪನಿ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಒಮ್ಮೆಯೂ ಕಂಪನಿಯ ವಹಿವಾಟು ಆಡಿಟಂಗೇ ಆಗಿಲ್ಲವೆನ್ನುವುದು ಮತ್ತೊಂದು ಶಾಕಿಂಗ್ ನ್ಯೂಸ್! ಅಂದರೆ, ಈ ರವೀಂದ್ರನಾಥ ಸರ್ಕಾರಿ ಯಂತ್ರದಿಂದ ಹಿಡಿದು ಬ್ಯಾಂಕಿಂಗ್ ವ್ಯವಸ್ಥೆಗಳವರೆಗೆ ಎಲ್ಲವನ್ನೂ ಅಡ್ಜಸ್ಟ್ ಮಾಡಿಕೊಂಡ ನಂತರವಷ್ಟೇ ಅಖಾಡಕ್ಕಿಳಿದ ಪ್ಲಾನುಗಾರ ಎನ್ನುವುದು ಖಾತ್ರಿಯಾಗುತ್ತದೆ.

ಗ್ರೀನ್ ಬಡ್ಸ್ ಆಡಳಿತ ವೈಖರಿ ಎಂತದ್ದೆಂದರೆ ಕಚೇರಿಗೆ 'ಖಾಸಾ' ಟೈಪಿಸ್ಟ್ ಆಗಿ ಸೇರಿಕೊಂಡ ಗಾಯತ್ರಿ ಎಂಬಾಕೆಯೇ ಇವತ್ತು ಜನರಲ್ ಮ್ಯಾನೇಜರ್! ಅದಕ್ಕಿಂತಲೂ ಅಚ್ಚರಿಯ ವಿಷಯವೆಂದರೆ ಈಕೆಯ ಹೆಸರಲ್ಲೂ 65 ಎಕರೆ ಜಮೀನು ಖರೀದಿಸಿದ್ದಾನೆ. ಇನ್ನು ಆತನ ಭಾಮೈದ ಮಧು, ಬಂಡೀಪಾಳ್ಯದ ಎಪಿಎಂಸಿ ಯಾರ್ಡ್‌ನಲ್ಲಿ ಗ್ರೀನ್ ಬಡ್ಸ್ ಬ್ರಾಂಡೆಡ್ ಪ್ರೊಡಕ್ಟ್‌ಗಳನ್ನು ಮಾರಾಟ ಮಾಡ್ತೀನಿ ಅಂತ ಸಂಸ್ಥೆಯ ದುಡ್ಡಲ್ಲಿ ತೆರೆದ ಅಂಗಡಿ ಲಕ್ಷಾಂತರ ರೂಪಾಯಿ ಲಾಸು ಮಾಡಿ ಶೆಟರ್ ಎಳೆದುಕೊಂಡಿದೆ. ಅಂದಹಾಗೆ ಈ ಮಧು, ಗ್ರಾಹಕರ ಮತ್ತು ಏಜೆಂಟರ ಕೃಪಾಶಿರ್ವಾದದಿಂದ ಸರ್ದಾರ್ ವಲ್ಲಬ್‌ಭಾಯ್ ಪಟೇಲ್ ನಗರದಲ್ಲಿ ಇತ್ತೀಚೆಗಷ್ಟೆ ಭವ್ಯ ಬಂಗಲೆಯೊಂದನ್ನು ಕಟ್ಟಿಸಿದ್ದಾನೆ, ಗೃಹಪ್ರವೇಶವೊಂದೇ ಬಾಕಿ. ಆದರೆ, ಅಷ್ಟರಲ್ಲೇ ಭಾವನ ಜೈಲು ಪ್ರವೇಶವಾಗಿದೆ.



ಟೈಪಿಸ್ಟ್ ಕಂ ಜನರಲ್ ಮ್ಯಾನೇಜರ್ ಗಾಯತ್ರಿ

ಅಸಲಿಗೆ ರವೀಂದ್ರನಾಥ ಮೂಲತಃ ಭರ್ಜರಿ ಸಿರಿವಂತ ಪರಂಪರೆಯ ಕುಳವೇನಲ್ಲ. ಅಕ್ಷರಶಃ ಮಿಡ್ಲ್‌ಕ್ಲಾಸ್ ಮಾದರಿಯ ಆಮ್ ಆದ್ಮಿ! ಪಾಂಡವಪುರದ ಚಿಟ್ಟಳ್ಳಿಯವನಾದ ಇವನ ವಿದ್ಯಾಭ್ಯಾಸವೂ ಅಷ್ಟಕ್ಕಷ್ಟೇ ಇದೆ. ಫೈನಾನ್ಸ್ ಕಂಪನಿಯೊಂದರಲ್ಲಿ ಕಲೆಕ್ಷನ್ ಏಜೆಂಟಾಗಿ ದುಡಿಮೆಗಿಳಿದ ರವೀಂದ್ರನಾಥ ಕಂತೆಗಟ್ಟಲೆ ನೋಟುಗಳನ್ನು ನೋಡಿದ್ದೇ ಆಗ. ಫೈನಾನ್ಸ್ ವ್ಯವಹಾರದಿಂದಾಗಿ ಕಂಡುಕೊಂಡ ಹಣವೆತ್ತುವ ಸುಲಭದ ಐಡಿಯಾವೇ ಗ್ರೀನ್ ಬಡ್ಸ್ ಸಂಸ್ಥೆಯನ್ನು ಹುಟ್ಟುಹಾಕಲು ಸ್ಫೂರ್ತಿಯಾಗಿದ್ದಿರಲೂಬಹುದು. ಈ ಬ್ಲೇಡ್ ಕಂಪನಿಯನ್ನು ಆರಂಭಿಸುವುದಕ್ಕೂ ಮುನ್ನ ರವೀಂದ್ರನಾಥನ ಸ್ವಂತದ್ದು ಅಂತ ಹೇಳಿಕೊಳ್ಳಲು ಇದ್ದದ್ದು ಅವನ ತಾಯಿಯ ತವರುಮನೆ ಕೆಸರೆ ಎಂಬಲ್ಲಿಯ ಅರ್ಧ ಎಕರೆ ಜಮೀನು ಮಾತ್ರ. ಆದರೆ ಈಗವನು 500 ಕೋಟಿಗೂ ಮೀರಿದ ಆಸ್ತಿಯ ಒಡೆಯ!

ಸಂಸ್ಥೆ 1999ರಲ್ಲಿ ಆರಂಭವಾದಾಗ ಜನ ಅಷ್ಟೇನು ಹಣ ಹಾಕಿರಲಿಲ್ಲ. ಹಾಗಾಗಿ ಅಲ್ಲಿಂದ ಐದು ವರ್ಷದ ಮೆಚ್ಯೂರಿಟಿ ಅವಧಿಗೆ, ಅಂದರೆ 2004-05ರ ವೇಳೆಗೆ ತುಂಬಾ ಕಡಿಮೆ ಸಂಖ್ಯೆಯಲ್ಲಿದ್ದ ಗ್ರಾಹಕರಿಗೆ ಮಾತು ಕೊಟ್ಟಂತೆ ಅವರವರ ಠೇವಣಿಗಳನ್ನು ಲಾಭದ ಸಮೇತ ವಾಪಸ್ ಮಾಡಿದ್ದ. ಇದು ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿತ್ತು, ಅದರ ಎಫೆಕ್ಟಾಗಿ 2006ರಿಂದೀಚೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಹಣ ಹೂಡಿದ್ದರು. ಅದರಲ್ಲೂ ಒಬ್ಬ ಗ್ರಾಹಕನನ್ನು ಕರೆತಂದರೆ ಪ್ರತಿ ಏಜೆಂಟ್‌ರಿಗೆ 20-30% ಕಮೀಷನ್ ನೀಡುವುದಾಗಿ ಈತ ಆಸೆ ಹುಟ್ಟಿಸಿದ ನಂತರವಂತೂ ಏಜೆಂಟರು ಮತ್ತಷ್ಟೂ ಕ್ರಿಯಾಶೀಲರಾಗಿ ರವೀಂದ್ರನಾಥನ ಜೋಳಿಗೆ ತುಂಬಿಸಿದ್ದರು. ಇವತ್ತು ಆ ಏಜೆಂಟರೇ ಊರು ಬಿಡುವಂತಾಗಿದೆ. ಹಣ ಹಾಕಿದ ಜನ ಏಜೆಂಟರಿಗೆ ಅವಾರಿಕೊಳ್ಳುತ್ತಿದ್ದಾರೆ. ಪಿರಿಯಾಪಟ್ಟಣದಲ್ಲಿ ಏಜೆಂಟರೊಬ್ಬರ ಬೈಕನ್ನೇ ಜನ ಜಪ್ತಿ ಮಾಡಿದ್ದರೆ, ಮತ್ತೊಂದೆರಡು ಕಡೆ ಸಮಾ ಒದೆ ನೀಡಿ ತಮ್ಮ ಆಕ್ರೋಶ ಹೊರಹಾಕಿದ್ದಾರೆ.



ಕಸಬಾ ಹೋಬಳಿಯ ಇದೇ ಜಮೀನನ್ನು ರಹಸ್ಯವಾಗಿ ಮಾರಲು ಮುಂದಾಗಿದ್ದ.

ಆರು ತಿಂಗಳಿನಿಂದ ಈಚೆಗೆ ರವೀಂದ್ರನಾಥನ ಬಣ್ಣ ಬಯಲಾಗಲು ಆರಂಭಿಸಿತ್ತು, ಮೆಚ್ಯೂರಿಟಿ ಅದವರಿಗೆ ಅಸಲು, ಬಡ್ಡಿ, ಲಾಭ ಯಾವುದನ್ನೂ ನೀಡದ ಸಂಸ್ಥೆಯ ಪ್ರತಿನಿಧಿಗಳು ವೃಥಾ ಸಬೂಬು ಹೇಳಿಕಳುಹಿಸುತ್ತಿದ್ದರು. ಕಳೆದ ತಿಂಗಳು ಇದೇ ವಿಚಾರವಾಗಿ ಕೆ.ಆರ್.ನಗರ ತಾಲ್ಲೂಕು ಶಾಖೆಗೆ ಗ್ರಾಹಕರು ಮುತ್ತಿಗೆ ಹಾಕಿ, ಬೀಗ ಜಡಿದು ಪ್ರತಿಭಟಿಸಿದ್ದರು. ಆಗ ಜೂನ್ 20ರಂದು ಠೇವಣಿ ಹಣ ಹಿಂದಿರುಗಿಸುವುದಾಗಿ ಭರವಸೆ ನೀಡಿದ್ದ ಸಂಸ್ಥೆಯ ಪ್ರತಿನಿಧಿಗಳು ಆ ದಿನಕ್ಕೆ ಮುನ್ನವೇ ಹೇಳಹೆಸರಿಲ್ಲದಂತೆ ಮಾಯವಾಗಿದ್ದರು! ನಂಜನಗೂಡಿನ ಜಿ.ಮಾಣಿಕ್ಯ ಎಂಬವವರಿಗೆ ಠೇವಣಿ ವಾಪಸಾತಿ ಸಲುವಾಗಿ ಗ್ರೀನ್ ಬಡ್ಸ್ ಸಂಸ್ಥೆ ನೀಡಿದ್ದ 1,21,880 ರೂ. ಮೌಲ್ಯದ ಚೆಕ್ ಬೌನ್ಸ್ ಆಗಿ ವಾಪಸ್ ಬಂದಿತ್ತು. ಈ ಕುರಿತು ಕೇಸೂ ದಾಖಲಾಗಿತ್ತು. ಆಗ ಪಟ್ಟಣ ಪೊಲೀಸ್ ಠಾಣೆಗೆ ಸ್ವತಃ ರವೀಂದ್ರನಾಥನೆ ಹಾಜರಾಗಿ 15 ದಿನಗಳೊಳಗೆ ಠೇವಣಿ ಹಣ ಹಿಂದಿರುಗಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದ.


ಆದರೂ ಹಣ ಹಿಂದಿರುಗಿಸಿಲ್ಲ. ಈ ನಡುವೆ ಸಂಸ್ಥೆಯ ಹೆಸರಲ್ಲಿದ್ದ ಕೆಲವು ಪ್ರೊಜೆಕ್ಟ್‌ನ ಜಮೀನುಗಳನ್ನು ರವೀಂದ್ರನಾಥ ತರಾತುರಿಯಲ್ಲಿ ಮಾರಾಟ ಮಾಡಲು ಮುಂದಾದಾಗಲೇ ಜನರಿಗೆ ಅನುಮಾನ ಬಂದದ್ದು. ಪಿರಿಯಾ ಪಟ್ಟಣದ ಬಿ.ಎಂ. ರಸ್ತೆಯಲ್ಲಿರುವ 'ಚೈತ್ರವನ' ಪ್ರಾಜೆಕ್ಟ್ ಅನ್ನು ಗ್ರಾಹಕರಿಗೆ ಗೊತ್ತಿಲ್ಲದಂತೆಯೇ ಮಾರಾಟ ಮಾಡಿದ್ದ. ವಿಷಯ ಗೊತ್ತಾಗಿ ಹಣ ಹಾಕಿದವರೆಲ್ಲ ಅವನ ಬಳಿ ತಗಾದೆ ತೆಗೆದಿದ್ದರು. ಆಗ ಹೂಡಿಕೆ ಹಣವನ್ನೆಲ್ಲ ವಾಪಾಸ್ಸು ಕೊಡುವುದಾಗಿ ಒಪ್ಪಿಕೊಂಡಿದ್ದ. ಈ ನಡುವೆ ಪಿರಿಯಾಪಟ್ಟಣ ಕಸಬಾ ಹೋಬಳಿಯ ಮುತ್ತೂರು ಬಳಿಯಲ್ಲಿ ಅವನ ಸ್ವಂತ ಹೆಸರಿನಲ್ಲಿದ್ದ ಸರ್ವೇ ನಂಬರ್ 64/1, 65/4 ಗಳಲ್ಲಿರುವ 9 ಎಕರೆ 4 ಗುಂಟೆಯ ಜಮೀನನ್ನು ಮಾರಾಟ ಮಾಡಲು ರಾತ್ರೋರಾತ್ರಿ ಖರೀದಿದಾರರನ್ನು ಸ್ಥಳಕ್ಕೆ ಕರೆತಂದಿದ್ದಾಗ ಸಾರ್ವಜನಿಕರ ಕೈಗೆ ತಗುಲಿಕೊಂಡು ಗಲಾಟೆಯೇ ಆಗಿತ್ತು. ಆಗಲೂ ಠೇವಣಿಯನ್ನೆಲ್ಲ ವಾಪಸ್ ಮಾಡಿದ ನಂತರ ಜಮೀನು ಮಾರಾಟ ಮಾಡಿಕೊಳ್ಳಬಹುದೆನ್ನುವ ಒಪ್ಪಂದವಾಗಿತ್ತು, ಆದರೆ ಗ್ರಾಹಕರ ಕಣ್ಣು ತಪ್ಪಿಸಿ ತಸ್ಲೀಮ್ ಎನ್ನುವ ಸ್ಥಳೀಯ ರಿಯಲ್ ಎಸ್ಟೇಟ್ ವ್ಯಾಪಾರಿಯ ಮೂಲಕ ಇಡೀ ಜಮೀನು ಮಾರಿ ಪೇರಿಕಿತ್ತಿದ್ದ. ಈ ವಿಷಯವಾಗಿ ಮುಖ್ಯಮಂತ್ರಿ, ರಾಜ್ಯಪಾಲರು, ಕಂದಾಯ ಸಚಿವ, ಜಿಲ್ಲಾ ಪೊಲೀಸ್ ಅಧೀಕ್ಷಕ, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿ, ತಹಸಿಲ್ದಾರ್‌ವರೆಗೂ ದೂರು ನೀಡಲಾಗಿದೆ.

ಗ್ರೀನ್ ಬಡ್ಸ್‌ನ ಮೇಲೆ ಎ.ರಾಚಪ್ಪ ಎಂಬುವವರು ವಂಚನೆಯ ಕಂಪ್ಲೇಂಟ್ ನೀಡಿದ ನಂತರ ರವೀಂದ್ರನಾಥ ಭೂಗತನಾಗಿದ್ದ. ಇವನನ್ನು ಬಂಧಿಸಲು ಅಂದಿನ ಪೊಲೀಸ್ ಕಮೀಷನರ್ ಕೆ.ಎಲ್.ಸುಧೀರ್‌ರವರು ನಜರಬಾದ್ ಠಾಣೆಯ ಇನ್ಸ್‌ಪೆಕ್ಟರ್ ಜಯಕುಮಾರ್ ನೇತೃತ್ವದಲ್ಲಿ ತಂಡವೊಂದನ್ನು ರಚಿಸಿದ್ದರು.

ಮಂಗಳೂರಿನಲ್ಲಿ ತಲೆಮರೆಸಿ ಕೊಂಡಿದ್ದವನನ್ನು ಬಂಧಿಸಿ ಜೈಲಿಗಟ್ಟುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಕೋರ್ಟ್ ಸದ್ಯ ಅವನನ್ನು ನ್ಯಾಯಾಂಗ ಬಂಧನದಲ್ಲಿರಿಸಿದೆ. ಹಗಲುದರೋಡೆ ನಡೆಸಿದ ರವೀಂದ್ರನಾಥನನ್ನು ಬಂಧಿಸಿರುವ ಪೊಲೀಸರು ಅದೇ ಖದರಿನೊಂದಿಗೆ 'ಸೈಡ್‌ವಿಂಗ್'ಗಳಿಗೆ ಅವಕಾಶವಿಲ್ಲದಂತೆ ಇತರ ಪ್ರಮುಖ ಆರೋಪಿಗಳನ್ನೂ ಬಂಧಿಸಿ ತನಿಖೆ ನಡೆಸಿದರೆ ಹಣ ಕಳೆದುಕೊಂಡ ಲಕ್ಷಾಂತರ ಜನ ನಿಟ್ಟುಸಿರು ಬಿಡಬಹುದು. ಅವನ ಬಂಧನದ ನಂತರ ಗ್ರೀನ್ ಬಡ್ಸ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಗ್ರಾಹಕರು ಅವನ ಸಮಸ್ತ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಂಡು ತಮಗೆ ಹಣ ವಾಪಸು ಕೊಡಿಸಬೇಕೆಂಬ ಅಳಲು ತೋಡಿಕೊಂಡಿದ್ದರು. ವಂಚಿತರ ಸಮಸ್ಯೆ ಬಗೆ ಹರಿಯುವುದೀಗ ಪೊಲೀಸರ ಪ್ರಾಮಾಣಿಕತೆಯ ಮೇಲೆ ನಿಂತಿದೆ...

● ಗಿರೀಶ್ ತಾಳಿಕಟ್ಟೆ

ಬಿಟ್ಟ ಹೆಂಡ್ತಿ ಮನೆಗೆ ಹಿಟ್ಟಿಗೆ ಹೋದ ಆತ್ಮಾನಂದ


ಆತ್ಮಾನಂದ

ಬಿಟ್ಟ ಹೆಂಡ್ತಿ ಮನೆಗೆ ಹಿಟ್ಟಿಗೆ ಹೋದ್ನಂತೆ... ಎಂಬ ಗಾದೆ ಮಾತು ಮಂಡ್ಯದ ಮಾಜಿ ಸಚಿವ ಆತ್ಮಾನಂದರಿಗೆ ಹೇಳಿ ಮಾಡಿಸಿದ್ದಂಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಅಂಬರೀಶ್‌ಗೆ ಮಂಡ್ಯದಿಂದ ಟಿಕೆಟ್ ನೀಡಿದ್ದಕ್ಕೆ ಸಿಟ್ಟಿಗೆದ್ದು 'ನನಗೇ ಟಿಕೆಟ್ ಇಲ್ಲಾ ಅಂತೀರಾ.... ಏನ್ ಮಾಡ್ತೀನಿ ನೋಡ್ತೀರಿ' ಎಂದು ಅಬ್ಬರಿಸಿ ಬೊಬ್ಬರಿದ ಆತ್ಮಾನಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಬಿಸಾಡಿದ್ದರು. ಉತ್ತರ ಕುಮಾರನ ಪೌರುಷ ಒಲೆ ಮುಂದೆ ಎಂಬಂತೆ ಅಂಬಿ ವಿರುದ್ಧ ತೊಡೆತಟ್ಟಿದ್ದ ಆತ್ಮಾನಂದ ಚುನಾವಣೆಯಲ್ಲಿ ಅವರನ್ನು ಸೋಲಿಸಲು ಏನೆಲ್ಲಾ ಕುತಂತ್ರ ನಡೆಸಿದರೂ ಏನೂ ಕಿಸಿಯಲಾಗಲಿಲ್ಲ. ಅಂಬಿಯ ರೆಬಲ್ ಮಾತುಗಳಿಗೆ ಬೆರಗಾದ ಮಂಡ್ಯದ ಜನತೆ 43,000 ಮತಗಳ ಅಂತರದಿಂದ ಗೆಲ್ಲಿಸಿದ್ದನ್ನು ಕಂಡು ಇಂಗು ತಿಂದ ಮಂಗ ನಂತಾದ ಆತ್ಮಾನಂದ ಮನೆ ಸೇರಿ ಮುದುರಿಕೊಂಡಿದ್ದರು.

ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಇಂತಹ ಆತ್ಮಾನಂದರನ್ನೇ ಪುನಃ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿ ಮುಂದುವರಿಸಲು ಗ್ರೀನ್ ಸಿಗ್ನಲ್ ನೀಡುತ್ತಿದ್ದಂತೆಯೇ ಸಿಟ್ಟಿಗೆದ್ದಿರುವ ಅಂಬಿ ಬೆಂಬಲಿಗರು ರೆಡ್ ಸಿಗ್ನಲ್ ತೋರಿಸಲು ಸಜ್ಜಾಗಿದ್ದಾರೆ. ಪರಮೇಶ್ವರ್ ಕ್ರಮವನ್ನು ಖಂಡಿಸಿರುವ ಅಂಬಿ ಪಡೆ 'ಯಾವುದೇ ಕಾರಣಕ್ಕೂ ಆತ್ಮಾನಂದರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸಬಾರದು' ಎಂದು ತೊಡೆತಟ್ಟುತ್ತಾ ಬೀದಿಕಾಳಗಕ್ಕೆ ಸಿದ್ಧವಾಗಿ ನಿಂತಿದೆ. ಕೆಲವೇ ದಿನಗಳ ಹಿಂದೆ ತನ್ನ ಬೆನ್ನ ಹಿಂದಿದ್ದ ಬೆಂಬಲಿಗರೇ ಈಗ ಅಂಬಿ ಪಾಳಯದಲ್ಲಿ ನಿಂತು ಹೂಂಕರಿಸುತ್ತಿರುವುದನ್ನು ಕಂಡು ಆತ್ಮಾನಂದ ಏದುಸಿರು ಬಿಡುತ್ತಿರುವುದು ಇಂಟರೆಸ್ಟಿಂಗ್ ಸಂಗತಿಯಾಗಿದೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಆತ್ಮಾನಂದ ಕೂಡ ಮಂಡ್ಯ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರು. 2008ರ ಚುಣಾವಣೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಸೋತಿದ್ದ ಅಂಬರೀಶ್ ಕೂಡ ಮಂಡ್ಯ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದರು. ಯಾವಾಗ ಮಂಡ್ಯದಿಂದಲೇ ಅಂಬರೀಶ್ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆಂಬ ಸುದ್ದಿ ಕಿವಿಗೆ ಬಿತ್ತೋ ಆಗಿನಿಂದಲೇ ಅಂಬಿ ವಿರುದ್ಧ ಸೆಟೆದುಕೊಂಡ ಆತ್ಮಾನಂದ ಎಸ್.ಎಂ.ಕೃಷ್ಣ ಜಿ.ಮಾದೇಗೌಡರನ್ನು ಮುಂದಿಟ್ಟುಕೊಂಡು ಟಿಕೆಟ್ ಪಡೆಯಲು ಹವಣಿಸಿದ್ದರು. ಆತ್ಮಾನಂದರನ್ನು ಕಂಡರೆ ಕೃಷ್ಣರಿಗೆ ಅಷ್ಟಕಷ್ಟೆ. ಆದರೆ ಅಂಬರೀಶ್ ವಿರುದ್ಧ ಕೃಷ್ಣರ ಸಿಟ್ಟು ತಾರಕಕ್ಕೇರಿದ್ದರಿಂದ ಕೃಷ್ಣ ಕೂಡ ಅಂಬಿಗೆ ಟಿಕೆಟ್ ತಪ್ಪಿಸಲು ಯತ್ನಿಸಿದ್ದರು. ಆಗ ಆತ್ಮಾನಂದ ತನ್ನ ಚೇಲಾ ಸತ್ಯಾನಂದನನ್ನು ಮುಂದಿಟ್ಟುಕೊಂಡು ಅಂಬಿ ವಿರುದ್ಧ ದೊಡ್ಡ ಷಡ್ಯಂತ್ರವನ್ನೇ ನಡೆಸಿದ್ದರು.

15 ಮಂದಿ ನೂತನ ನಗರಸಭಾ ಸದಸ್ಯರನ್ನು ಅಸ್ತ್ರವಾಗಿ ಬಳಸಿಕೊಳ್ಳಲು ಆತ್ಮಾನಂದ ಮುಂದಾಗಿದ್ದರು. 'ಅಂಬರೀಶ್‌ಗೆ ಟಿಕೆಟ್ ಕೊಟ್ಟರೆ ನಾವೆಲ್ಲಾ ಸಾಮೂಹಿಕ ರಾಜೀನಾಮೆಗೆ ಸಿದ್ಧ' ಎಂಬ ಪತ್ರಕ್ಕೆ ಅವರೆಲ್ಲರ ಸಹಿ ಮಾಡಿಸಿ ಕೆಪಿಸಿಸಿ ಅಧ್ಯಕ್ಷ ಹಾಗೂ ಹೈಕಮಾಂಡ್ ನಾಯಕರಿಗೂ ಕಳುಹಿಸಿದ್ದರು. ಕೃಷ್ಣರ ಸೆಡ್ಡು ಮತ್ತು ಆತ್ಮಾನಂದರ ಕಾರಣದಿಂದ ಮಂಡ್ಯ ಕೈ ಟಿಕೆಟ್ ದೊಡ್ಡ ಕಗ್ಗಂಟಾಗಿತ್ತು. ಇಷ್ಟೆಲ್ಲಾ ವಿರೋಧಗಳ ನಡುವೆಯೂ ಮಂಡ್ಯ ಟಿಕೆಟ್ ಅಂಬರೀಶ್ ಪಾಲಾದದ್ದು ಆತ್ಮಾನಂದರ ಟೀಮಿಗೆ ದೊಡ್ಡ ಮುಖಭಂಗವೇ ಆದಂತಾಗಿತ್ತು.


ಕರೆದರೂ ಬರಲಿಲ್ಲ

ನಾಮಪತ್ರ ಸಲ್ಲಿಕೆಯ ದಿನ ಬೆಳಗ್ಗೆಯೇ ಆತ್ಮಾನಂದರ ಮನೆಗೆ ಬಂದ ಅಂಬರೀಶ್ ಆತ್ಮಾನಂದರ ಕೈ ಹಿಡಿದು 'ಎಲ್ಲಾ ಭಿನ್ನಾಭಿಪ್ರಾಯ ಮರೆತು ನನ್ನ ಜೊತೆ ಬಾ. ಮುಂದೆ ಒಳ್ಳೇದಾಗುತ್ತೆ' ಅಂತ ಕರೆದರೂ ಆತ್ಮಾನಂದ ಬರಲೇ ಇಲ್ಲ. ಮತ್ತೆ ಎರಡು ಬಾರಿ ಅಂಬಿ ವಿನಂತಿಗೆ ಮಣೆ ಹಾಕದ ಆತ್ಮಾನಂದ ಕೈಕೊಡವಿಕೊಂಡು ಬಿಟ್ಟರು. ಪಕ್ಷದ ಕಾರ್ಯಕರ್ತರು, ನೂತನ ನಗರಸಭಾ ಸದಸ್ಯರು ಹಲವು ಬಾರಿ ಕರೆದರೂ ಆತ್ಮಾನಂದ ಚುನಾವಣಾ ಪ್ರಚಾರದಿಂದ ದೂರವೇ ಉಳಿದಿದ್ದರು. ರಾಹುಲ್ ಗಾಂಧಿ ಮಂಡ್ಯಕ್ಕೆ ಬಂದಿದ್ದಾಗಲೂ ಸಭೆಗೆ ಬರದೆ ಮುನಿಸು ತೋರಿದ ಆತ್ಮಾನಂದರನ್ನು ಬಿಟ್ಟು ಅಂಬಿ ಏಕಾಂಗಿಯಾಗಿ ಕ್ಷೇತ್ರವನ್ನು ಸುತ್ತಿದ್ದರು. ಪಕ್ಷದ ಟಿಕೆಟ್ ತನಗೆ ತಪ್ಪಿದಾಗಲೆಲ್ಲ ವಿರೋಧಿಗಳೊಂದಿಗೆ ಕೈಜೋಡಿಸುವ ಆತ್ಮಾನಂದ ಈ ಬಾರಿಯೂ ಅದನ್ನೇ ಮಾಡಿದ್ದರು. ತನ್ನ ಸಹೋದರನ ಮೂಲಕ ಅಂಬರೀಶ್ ವಿರುದ್ಧ ಕೆಲಸ ಮಾಡಿಸಿದ್ದರು. ಇಷ್ಟೆಲ್ಲಾ ವಿರೋಧ, ಗೊಂದಲಗಳ ಹೊರತಾಗಿಯೂ ಅಂಬರೀಶ್ ಗೆದ್ದು ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕವಾದರು. ಮಂಡ್ಯದಲ್ಲಿ ಅಂಬರೀಶ್‌ರನ್ನು ಸೋಲಿಸಿಯೇ ಸಿದ್ಧ ಎಂದು ಅಬ್ಬರಿಸಿ-ಬೊಬ್ಬರಿದಿದ್ದ ಆತ್ಮಾನಂದ ಈ ಬೆಳವಣಿಗೆಯಿಂದ ಬಾಲ ಸುಟ್ಟ ಬೆಕ್ಕಿನಂತಾದದ್ದು ಅಂಬಿ ಪಡೆಗೆ ಸಾಕಷ್ಟು ಸಂತಸ ತಂದಿತ್ತು.

ಬಿಟ್ಟ ಹೆಂಡ್ತಿ ಮನೆಗೆ...

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪವರ್ ಸಿಕ್ಕೊಡನೆಯೇ 'ಅಂದಿರಿಕಿ ಮಂಚಿವಾಡು' ಖ್ಯಾತಿಯ ಆತ್ಮಾನಂದರಿಗೂ ಪವರ್ ಬಂದಂತಾಗಿದೆ. ಹಾಗಾಗೇ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಮುಂದೆ ನಿಂತ ಆತ್ಮಾನಂದ ತಮ್ಮನ್ನೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮುಂದುವರೆಸುವಂತೆ ದುಂಬಾಲು ಬದ್ದಿದ್ದರು. ಎಸ್.ಎಂ.ಕೃಷ್ಣರ ಶಿಷ್ಯರಾದ ಪರಮೇಶ್ವರ್ ಕೂಡ ಡರ್ಬಿ ರೇಸ್ ಆಡಿಕೊಂಡು ಜಿಲ್ಲೆಯನ್ನು ಮರೆತಿರುವ ಅಂಬರೀಶ್‌ಗೆ ಹೇಳದಿದ್ದರೂ ನಡೆಯುತ್ತೆ ಅಂತ ಅಂದುಕೊಂಡು 'ಎಸ್' ಅಂದಿದ್ದಾರೆ.

ಆತ್ಮಾನಂದ ಜಿಲ್ಲಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಒಂದಾದರೂ ಕಾರ್ಯಕರ್ತರ ಬಹಿರಂಗ ಸಭೆ ಕರೆದಿಲ್ಲ, ಜಿಲ್ಲಾ ಕಾಂಗ್ರೆಸ್ ಕಮಿಟಿ ಮಾಡಿಲ್ಲ, ಅಷ್ಟೇ ಏಕೆ ಕಾಂಗ್ರೆಸ್ ಕಚೇರಿಯ ಬಾಡಿಗೆಯನ್ನು ಸ್ವತಃ ಕಾಂಗ್ರೆಸ್ ಕಾರ್ಯಕರ್ತರೆ ಪಾವತಿಸಿದ್ದರು. ಮೂರು ಬಾರಿ ಶಾಸಕರಾಗಿ, ಸಚಿವರಾದರೂ ಮಂಡ್ಯಕ್ಕೆ ಅವರು ಕಿಸಿದಿದ್ದೇನೂ ಇಲ್ಲ. ಬದಲಾಗಿ ಟಿಕೆಟ್



ಸಿಗಲಿಲ್ಲವೆನ್ನುವ ಕಾರಣಕ್ಕೆ ಚುನಾವಣೆಯಲ್ಲಿ ಪಕ್ಷ ವಿರುದ್ಧವೇ ಕೆಲಸ ಮಾಡಿದ್ದರು. ಊರ ತುಂಬಾ ಆ ಇದ್ದರೂ ಪಕ್ಷ ಸಂಘಟನೆಗಾಗಿ ನಯಾ ಪೈಸೆ ಬಿಚ್ಚ ಆತ್ಮಾನಂದರನ್ನು ಜಿಲ್ಲಾಧ್ಯಕ್ಷರನ್ನಾಗಿ ಮುಂದುವರೆಸಿದರೆ ಪಕ್ಷ ಡ್ಯಾಮೇಜ್ ಗ್ಯಾರಂಟಿ ಎಂದು ಅಂಬಿ ಬೆಂಬಲಿಗರು ರಾ ಕಾಂಗ್ರೆಸ್ ನಾಯಕರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಂ ಕೂಡ ಪರಮೇಶ್ವರನ್ನು ಭೇಟಿ ಮಾಡಿ ಆತ್ಮಾನಂದ ರಾಜೀನಾಮೆ ಪಡೆದು ಬೇರೆಯವರನ್ನು ನೇಮಿಸಿ ಎಂದ ಕನ್ವರ್‌ಲಾಲ್ ಶೈಲಿಯಲ್ಲಿ ಗುಟುರು ಹಾಕಿ ಬಂದಿದ್ದಾರೆ


ಟಿಕೆಟ್ ಸಿಗದಿದ್ದಕ್ಕೆ ಬೇಸರದಿಂದ 'ಯಾರು ಎಷ್ಟೆ ಹೇಳಿದರೂ ರಾಜೀನಾಮೆ ವಾಪಸ್ ಪಡೆಯಲ್ಲ' ಎಂದ ಪೋಸ್ ಕೊಟ್ಟಿದ್ದ ಆತ್ಮಾನಂದ ಈಗ ತಮ್ಮನ್ನೇ ಜಿಲ್ಲಾಧ್ ಸ್ಥಾನದಲ್ಲಿ ಮುಂದುವರಿಸುವಂತೆ ಗೋಗರೆದದ್ದು ಏಕೆ ಇಷ್ಟು ಬೇಗ ಆತ್ಮಾನಂದರ ಸ್ವಾಭಿಮಾನ ಸತ್ತು ಹೋಯಿತೇ ಎಸ್.ಎಂ.ಕೃಷ್ಣ ಹಾಗೂ ಅಂಬರೀಶ್ ನಡುವಿನ ಶೀತಲ ಸಮರದಲ್ಲಿ ಅಂಬಿಗೆ ಇರಿಸುಮುರಿಸು ಉಂಟಾಗುವಂ ಮಾಡುವ ಪ್ರಯತ್ನ ಈ ಬೆಳವಣಿಗೆಯ ಹಿಂದಿದೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ. ಅದೇನೆ ಇರಲಿ ಬಿಟ್ಟ ಹೆಂಡ್ತಿ ಮನೆಗೆ ಹಿಟ್ಟಿಗೆ ಹೋದ ಆತ್ಮಾನಂದರನ್ನು ಕಂಡು ಜಿಲ್ಲೆಯ ಜನ ನಗಾಡುತ್ತಿರುವುದಂತೂ ಸುಳ್ಳಲ್ಲ.

● ಸಂಸ ನಾಗೇಶ್

ಮುಡಾ ಹಣ ಮುಂಡಾಯಿಸಿದ ಖದೀಮರ ಬಂಧನ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಐದು ಕೋಟಿ ರೂ. ಠೇವಣಿ ಹಣ ಮುಂಡಾಯಿಸಿದ ಖದೀಮರ ಕೈಗೆ ಕೋಳ ಬಿದ್ದಿದೆ. ಹಣ ಲಪಟಾಯಿಸಲು ಸ್ಕೆಚ್ ಹಾಕಿದ ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ಮತ್ತು ನಾಗಲಿಂಗಸ್ವಾಮಿಯ ಆಮಿಷಕ್ಕೆ ಬಲಿಯಾದ ಮುಡಾ ಕಮೀಷನರ್ ಡಾ.ಹೆಚ್.ಎಸ್.ಶಿವರಾಮು ಕೂಡ ಕಂಬಿ ಎಣಿಸುವ ಸ್ಥಿತಿ ಬಂದೊದಗಿದೆ.

ಮಂಡ್ಯದ ಇಂಡಿಯನ್ ಬ್ಯಾಂಕ್‌ನಲ್ಲಿ ಮುಡಾ ಇಟ್ಟಿದ್ದ ಐದು ಕೋಟಿ ರೂ. ತಮ್ಮ ಗಮನಕ್ಕೇ ಬಾರದೆ ಅಚಾನಕ್ಕಾಗಿ ನಾಪತ್ತೆಯಾಗಿದೆಯೆಂದು ಇದೇ ಜುಲೈ 5 ರಂದು ಆಯುಕ್ತ ಡಾ.ಹೆಚ್.ಎಸ್.ಶಿವರಾಮು ಪಶ್ಚಿಮ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ದೂರಿನಲ್ಲಿ '2012ರ ಸೆಪ್ಟೆಂಬರ್ 3ರಂದು ಇಂಡಿಯನ್ ಬ್ಯಾಂಕ್‌ನ ಮ್ಯಾನೇಜರ್ ರಾಮಸ್ವಾಮಿ ಮುಡಾದ ಹಣವನ್ನು ತಮ್ಮ ಬ್ಯಾಂಕಿನಲ್ಲಿ ಠೇವಣಿಯಾಗಿ ಡುವಂತೆ ಲಿಖಿತ ಮನವಿ ಮಾಡಿದ್ದರು. ಅದರಂತೆ 2013ರ ಫೆ.8ರಂದು ಅಲಹಾಬಾದ್ ಬ್ಯಾಂಕ್‌ನಲ್ಲಿದ್ದ ಖಾತೆಯಿಂದ ಎರಡು ಕೋಟಿ ರೂಪಾಯಿಯನ್ನು ಕ್ರಾಸ್ಡ್ ಚೆಕ್ ಮೂಲಕ ಇಂಡಿಯನ್ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಯಿತು. ಅದೇ ರೀತಿ ಫೆ.14ರಂದು ಎರಡು ಕೋಟಿ, ಫೆ.19ರಂದು ಒಂದು ಕೋಟಿ ಹೀಗೆ ಒಟ್ಟು ಐದು ಕೋಟಿ ರೂಪಾಯಿಯನ್ನು ಇಂಡಿಯನ್ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಯಿತು. ಇದಕ್ಕೆ ಪ್ರತಿಯಾಗಿ ಬ್ಯಾಂಕ್ ಠೇವಣಿ ಪತ್ರಗಳನ್ನು ನೀಡಿದೆ. ಪ್ರಾಧಿಕಾರದ ಎಲ್ಲಾ ಚೆಕ್‌ಗಳನ್ನು ಬ್ಯಾಂಕ್ ಮ್ಯಾನೇಜರ್ ರಾಮಸ್ವಾಮಿ ಅವರ ಕೊಠಡಿಯಲ್ಲೇ ನೀಡಲಾಗಿದೆ. ಜಿಲ್ಲಾಧಿಕಾರಿಗಳು ವಿವೇಕಾನಂದ ಬಡಾವಣೆಯಲ್ಲಿ ಒಳಚರಂಡಿ ಕಾಮಗಾರಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ್ದರಿಂದ 2013ರ ಜುಲೈ 2ರಂದು ಮುಡಾ ಲೆಕ್ಕಾಧಿಕಾರಿ ನಾಗರಾಜು ಬ್ಯಾಂಕಿಗೆ ತೆರಳಿ ಠೇವಣಿ ಇರಿಸಿದ್ದ ಐದು ಕೋಟಿ ರೂವನ್ನು ಬಡ್ಡಿ ಸಮೇತ ಹಿಂದಿರುಗಿಸುವಂತೆ ಠೇವಣಿ ಪತ್ರಗಳನ್ನು ನೀಡಿದಾಗ ಈಗಿರುವ ಮ್ಯಾನೇಜರ್ ಕುಮಾರನಾಯಕ್ ಅವೆಲ್ಲ ನಕಲಿ ಪತ್ರಗಳು ಎಂದು


ಕೆಬ್ಬಳ್ಳಿ ಆನಂದ್

ತಿಳಿಸಿದರು. ತರುವಾಯ ನಾನು ಅಲಹಾಬಾದ್ ಬ್ಯಾಂಕ್‌ಗೆ ತೆರಳಿ ಪ್ರಾಧಿಕಾರದಿಂದ ನೀಡಿದ ಚೆಕ್ಕನ್ನು ಪರಿಶೀಲಿಸಿದಾಗ ಇಂಡಿಯನ್ ಬ್ಯಾಂಕ್ ಮಂಡ್ಯ ಹೆಸರಿನ ಮುಂದೆ ಅಕ್ರಮವಾಗಿ 6060020206 ಎಂಬ ಅಕೌಂಟ್ ನಂಬರ್ ಬರೆದಿರುವುದು ಕಂಡು ಬಂತು. ಇಂಡಿಯನ್ ಬ್ಯಾಂಕ್‌ನಲ್ಲಿ ಈ ಅಕೌಂಟ್ ನಂಬರನ್ನು ಪರಿಶೀಲಿಸಿದಾಗ ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿ ಪುಟ್ಟರಾಜಯ್ಯನವರ ಪುತ್ರ ಚಂದ್ರಶೇಖರ್ ಅವರಿಗೆ ಸೇರಿದ ಆಕಾಶ್ ಎಂಟರ್ ಪ್ರೈಸಸ್‌ಗೆ ಐದು ಕೋಟಿ ಹೋಗಿರುವುದು ಪತ್ತೆಯಾಯಿತು. ಬ್ಯಾಂಕ್ ಮ್ಯಾನೇಜರ್ ಕುಮಾರನಾಯಕ್‌ರು ಇಂಡಿಯನ್ ಬ್ಯಾಂಕ್ ಮಂಡ್ಯ ಎಂದಿದ್ದ ಚೆಕ್ಕನ್ನು ವ್ಯಕ್ತಿಯೊಬ್ಬರ ಸಂಸ್ಥೆಯ ಹೆಸರಿಗೆ ಜಮಾ ಮಾಡುವ ಮೂಲಕ ಹಗರಣದಲ್ಲಿ ಭಾಗಿಯಾಗಿದ್ದಾರೆ. ಠೇವಣಿ ಹಣವನ್ನು ವಂಚಿಸಿರುವ ಹಾಲಿ ಮ್ಯಾನೇಜರ್ ಕುಮಾರನಾಯಕ್ ಹಾಗೂ ಹಿಂದಿನ ಮ್ಯಾನೇಜರ್ ರಾಮಸ್ವಾಮಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಪ್ರಾಧಿಕಾರದ ಹಣ ಬಡ್ಡಿ ಸಮೇತ ಹಿಂದಿರುಗಿಸಿ ಕೊಡಿ' ಎಂದು ಆಯುಕ್ತ ಶಿವರಾಮ್ ಕೇಳಿಕೊಂಡಿದ್ದರು.


ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಧಿಕಾರಿ ಬಿ.ಎಸ್.ಕೃಷ್ಣಯ್ಯ, ಎಸ್ಪಿ ಭೂಷಣ್ ಬೊರಸೆಗೆ ತನಿಖೆಗೆ ಆದೇಶಿಸಿದ್ದರು. ಅದರಂತೆ ಪ್ರಕರಣದ ಬೆನ್ನು ಹತ್ತಿದ ಡಿವೈಎಸ್ಪಿ ಶೋಭಾರಾಣಿಯವರ ತಂಡಕ್ಕೆ ಅಮಾಯಕನಂತೆ ಕಂಪ್ಲೇಂಟು ನೀಡಿದ ಆಯುಕ್ತ ಶಿವರಾಮ್‌ನೇ ಮೊದಲ ಕಳ್ಳನಾಗಿ ತಗುಲಿಕೊಂಡಿದ್ದಾನೆ.

ಮಾಸ್ಟರ್ ಮೈಂಡ್ ಕೆಬ್ಬಳ್ಳಿ ಆನಂದ್


ತನಿಖಾ ತಂಡಕ್ಕೆ ಮುಡಾ ಆಯುಕ್ತ ಶಿವರಾಮನ ಮೇಲೆಯೇ ಅನುಮಾನ ಮೂಡಿತ್ತಾದರು ಸರಿಯಾದ ಸಾಕ್ಷ್ಯವಿಲ್ಲದೆ ಕೆಎಎಸ್ ಅಧಿಕಾರಿಯನ್ನು ತಡವಿಕೊಳ್ಳಲು ಡಿವೈಎಸ್‌ಪಿ ಶೋಭಾರಾಣಿ ಸಿದ್ಧರಿರಲಿಲ್ಲ. ಹಾಗಾಗಿ ಅವರು ಮೊದಲು ಇಂಡಿಯನ್ ಬ್ಯಾಂಕ್‌ಗೆ ಹೋಗಿ ಮುಡಾದ ಐದು ಕೋಟಿ ವರ್ಗಾವಣೆಯಾಗಿದ್ದ ಹೆಮ್ಮನಹಳ್ಳಿ ಚಂದ್ರಶೇಖರ್‌ನ ಅಕೌಂಟ್‌ನಿಂದ ಮತ್ತೆ ಯಾರ್‍ಯಾರಿಗೆ ದುಡ್ಡು ಡೈವರ್ಟ್ ಆಗಿದೆ ಎಂದು ಪರಿಶೀಲನೆ ಮಾಡಿದರು. ಆಗ ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ಹಾಗೂ ನಾಗಲಿಂಗಸ್ವಾಮಿಯ ಅಕೌಂಟ್‌ಗಳು ಚಂದ್ರಶೇಖರ್‌ನಿಂದ ಕೋಟಿ ಕೋಟಿ ಹಣ ಸ್ವೀಕರಿಸಿರುವುದು ಗೊತ್ತಾಯಿತು ಕೂಡಲೇ ಕೆಬ್ಬಳ್ಳಿ ಆನಂದನನ್ನು ಕರೆತಂದು ಪಕ್ಕಾ ಪೊಲೀಸ ಸ್ಟೈಲಿನಲ್ಲಿ ಬಾಯಿ ಬಿಡಿಸಿದಾಗಲೇ ಇಡೀ ಹಗರಣದಲ್ ಮುಡಾ ಆಯುಕ್ತ ಶಿವರಾಮ್ ಕೂಡ ಪಾರ್ಟ್ನರ್ ಎಂಬುದು ತಿಳಿದು ಬಂತು. ಕೆಬ್ಬಳ್ಳಿ ಆನಂದನೇ ಐದು ಕೋಟಿ ರೂ ಹಣವನ್ನು ಮುಂಡಾಯಿಸಲು ಸ್ಕೆಚ್ ರೂಪಿಸಿದ ಮಾಸ್ಟರ್ ಮೈಂಡ್ ಎಂಬುದೂ ಬಯಲಾಯಿತು.

ಮದ್ದೂರಿನ ಹೆಬ್ಬೆರಳು ಗ್ರಾಮದವನಾದ ಡಾ.ಶಿವರಾಮ ಬಡತನದಲ್ಲೇ ಕಷ್ಟಪಟ್ಟು ಓದಿ ಕೆಎಎಸ್ ಅಧಿಕಾರಿಯಾದವನು. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಶಿವರಾಮು ಇಂದು ಆರ್ಥಿಕವಾಗಿ ಸಾಕಷ್ಟು ಕಲ್ಯಾಣ ಕಂಡಿದ್ದಾನೆ. ಅವನ ಐಶ್ವರ್ಯದ ಹಿಂದೆ ಭ್ರಷ್ಟಾಚಾರದ ವಾಸನೆ ಇದೆಯೆನ್ನು ಅನುಮಾನ ಈ ಪ್ರಕರಣದಿಂದ ನಿಜವಾದಂತಾಗಿದೆ.

ಮಂಡ್ಯ ತಾಲ್ಲೂಕಿನ ಕೆರಗೋಡು ಹೋಬಳಿಯ ಕೆಬ್ಬ ಆನಂದ್ ಈಗ್ಗೆ ಕೆಲ ವರ್ಷಗಳ ಹಿಂದೆ ಖಾಲಿ ಕೈ ದಾಸ



ಚಂದ್ರಶೇಖರ್


ನಾಗಲಿಂಗಸ್ವಾಮಿ


ಹೆಚ್.ಎಸ್. ಶಿವರಾಮು

ಹುಬ್ಬಳ್ಳಿ : ಶಿರ್ಸಿ ಮಲ್ಲಿಗೆ ಬ್ಲ್ಯೂ ಫಿಲ್ಮ್ ಅವಾಂತರ

ಪ್ರಭಾಕರ ಪೂಜಾರಿಯ ರಗಳೆ



ಛೋಟಾ ಮುಂಬೈ ಖ್ಯಾತಿಯ ಹುಬ್ಬಳ್ಳಿಯಲ್ಲಿ ಕಳೆದ ತಿಂಗಳು ಗೆಳೆಯರಿಬ್ಬರ ಕಿತ್ತಾಟದಲ್ಲಿ ಬಯಲಿಗೆ ಬಿದ್ದ 'ಶಿರ್ಸಿ ಮಲ್ಲಿಗೆ' ಉರ್ಫ್ 'ಸರಸ' ಎಂಬ ಬ್ಲ್ಯೂ ಫಿಲ್ಮ್ ಪಡ್ಡೆ ಹುಡುಗರ ಮೊಬೈಲ್‌ನಲ್ಲಿ ಮಜಾ ನೀಡಿದ್ದಕ್ಕಿಂತ ಬ್ಲ್ಯೂಫಿಲ್ಮ್ ಹೀರೋ ಪ್ರಭಾಕರ ಪೂಜಾರಿಯನ್ನ ಹಿಂದಿನ ಕಮೀಷನರ್ ಪದ್ಮನಯನ ಸಾಹೇಬರು ಭರ್ತಿ ಹಿಂಡಲು ನೆರವಾಗಿದೆ.

ಕಳೆದ ತಿಂಗಳು ಶಿರ್ಸಿ ಸರಸ ಎಂಬ ಬ್ಲ್ಯೂ ಫಿಲ್ಮ್ ಸುಣುಕು ಸದ್ದಿಲ್ಲದೆ ಹುಬ್ಬಳ್ಳಿಯ ಪಡ್ಡೆ ಹೈಕಳ ಮೊಬೈಲ್ ಹೊಕ್ಕಿತ್ತು. ಎಲ್ಲಿ ಕೇಳಿದರೂ ಈ ನೀಲಿ ಚಿತ್ರದ್ದೇ ಹಾವಳಿ. ಸೈಬರ್ ಕೆಫೆಗಳಲ್ಲಂತೂ ಇದಕ್ಕೆ ಭರ್ತಿ ಬೇಡಿಕೆ ಕೂಡ ಸಿಕ್ಕಿತ್ತು. ತಿಂಗಳಾನುಗಟ್ಟಲೆ ಈ ಕೊಳಕು ಚಿತ್ರವನ್ನ ಹರಿದಾಡಲು ಬಿಟ್ಟು ಎಲ್ಲಾ ತಣ್ಣಗಾದ ಮೇಲೆ ಪ್ರಭಾಕರ ಪೂಜಾರಿ ಎಂಬ ಮನುಷ್ಯನಿಂದ ಹಿಂದಿನ ಕಮೀಷನರ್ ಪದ್ಮನಯನ ಭರ್ತಿ ಕಾಸು ಪೀಕಿದ್ದಾರೆ. ಸಾಲಮಾಡಿ ಹಣ ಕೊಟ್ಟು ಸೇಫಾದೆ ಎಂದುಕೊಂಡಿದ್ದ ಪೂಜಾರಿಗೆ ಹೊಸದಾಗಿ ಬಂದ ಅಧಿಕಾರಿಗಳು ಮತ್ತೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರಂತೆ. ಕುಡಿದ ಅಮಲಿನಲ್ಲಿ ಮಾಡಿದ ತಪ್ಪನ್ನ ಸರಿಪಡಿಸಿಕೊಳ್ಳಲಾಗದೆ, ಮತ್ತೆ ಸಾಲಗಾರನಾಗಲು ಹೊರಟಿರುವ ಪೂಜಾರಿ ಪೊಲೀಸರಿಗೆ ಹಿಡಿ ಶಾಪ ಹಾಕುತ್ತಿದ್ದಾನೆ.

ಪೂಜಾರಿಯ ಪುಕ್ಸಟ್ಟೆ ವೀಡಿಯೋ

ಈ ಕಥೆಯ ಕಥಾನಾಯಕ ಶಿರ್ಸಿ ಮೂಲದ ಕಾರ್ ಗ್ಯಾರೇಜ್ ಮಾಲಕ ಪ್ರಭಾಕರ ಪೂಜಾರಿ. ಈತನೊಂದಿಗೆ ಅಸಹ್ಯವಾಗಿ ಆ ಬ್ಲ್ಯೂ ಫಿಲ್ಮ್ ವೀಡಿಯೋದಲ್ಲಿ ಬಟ್ಟೆ ಬಿಚ್ಚಿ ಮನಬಂದಂತೆ ವರ್ತಿಸಿರುವವಳು ಕೂಡ ಅದೇ ಶಿರ್ಸಿ ಮೂಲದವಳೇ. ಹುಬ್ಬಳ್ಳಿಯ ಗೋಕುಲ ರಸ್ತೆಯ ಹೊಸೂರು ಭಾಗದ ಹಾಟ್‌ಕೋಟ್ಸ್‌ನಲ್ಲಿ ಕೆಲಸಕ್ಕಿದ್ದ ಈಕೆ ಪಕ್ಕಾ ಗಾಂಚಾಲಿ ಹುಡುಗಿ. ಇವರಿಬ್ಬರ ಮೈಮರೆತ ಪ್ರಣಯ ಪ್ರಸಂಗಗಳು ಚಿತ್ರೀಕರಣಗೊಂಡಿದ್ದು ಅದೇ ಹೊಸೂರಿನ ಮೈಮಾರುವ ಅಡ್ಡೆ ಖ್ಯಾತಿಯ ಮಂಗಳೂರು ಲಾಡ್ಜ್‌ನಲ್ಲಿ ಎಂಬುದು ಕೂಡ ಸ್ಪಷ್ಟ. ದುರಂತವೆಂದರೆ, ಇವರಿಬ್ಬರ ಈ ಹೊಲಸು ಬ್ಲ್ಯೂ ಫಿಲ್ಮ್‌ನ್ನ ಮಾರುಕಟ್ಟೆಗೆ ತಂದು ಬಿಟ್ಟವನು ಬೇರಾರೂ ಅಲ್ಲ. ಒಂದು ಕಾಲದ ಈತನ ಪರಮ ಸ್ನೇಹಿತ ಆದರೆ ಹಾಲಿ ಪರಮ ಶತ್ರು ಷಣ್ಮುಖ ಲಮಾಣಿ ಮತ್ತು ಆತನ ಪಕ್ಕಾ ಲಂಪಟ ತಮ್ಮ ದೇವು ಲಮಾಣಿ.

ಸ್ನೇಹಿತರು ಒಬ್ಬರಿಗೇ ಸ್ಕೆಚ್ ಹಾಕಿದ್ರು

ಒಟ್ಟಿಗೆ ಏಳು ವರ್ಷಗಳ ಕಾಲ ಇಲ್ಲಿಯ ದೇಶಪಾಂಡೆ ನಗರದ ಗ್ಯಾರೇಜ್‌ವೊಂದರಲ್ಲಿ ಕೆಲಸ ಕಲಿತು ಆಪ್ತ ಸ್ನೇಹಿತರಾಗಿದ್ದ ಪ್ರಭಾಕರ ಪೂಜಾರಿ ಮತ್ತು ಷಣ್ಮುಖ ಲಮಾಣಿ ಮುಂದೆ ಗೋಕುಲ ರಸ್ತೆಯ ಕೆಎಸ್‌ಆರ್‌ಟಿಸಿಯ ಡಿಪೋ ಹಿಂಭಾಗದಲ್ಲಿ ಪಾಲುದಾರಿಕೆಯಲ್ಲಿ ನ್ಯೂ ಸ್ಟಾರ್ ಆಟೋ ಗ್ಯಾರೇಜ್ ಎಂಬ ಸ್ವಂತ ಗ್ಯಾರೇಜ್ ಆರಂಭಿಸಿದರು. ಹಣಕಾಸಿನ ವ್ಯವಹಾರದಲ್ಲಿ ಕೊಂಚ ಶ್ರೀಮಂತನಾಗಿದ್ದ ಪೂಜಾರಿ ಸ್ನೇಹಿತ ಷಣ್ಮುಖನ ಸಾಂಸಾರಿಕ ಜೀವನ ಮತ್ತು ಇನ್ನಿತರೆ ಖರ್ಚುಗಳಿಗೆ ನೆರವಾಗುತ್ತಿದ್ದ. ಜೊತೆಗೆ ಒಂದು ಲಕ್ಷ ರೂ. ಸಾಲವನ್ನೂ ನೀಡಿದ್ದ.

ಕಾಲ ಕಳೆದಂತೆ ಗ್ಯಾರೇಜು ಫೇಮಸ್ ಆಗುತ್ತಾ ಕೈ ಹಿಡಿದಿತ್ತು. ಹೀಗಾಗೇ ಪಾಲುದಾರಿಕೆಯಲ್ಲಿ ಇಬ್ಬರೂ ಸೇರಿ ಇಂಡಿಕಾ ಕಾರು ಕೂಡ ಖರೀದಿಸಿದ್ದರು. ಕೆಲ ದಿನಗಳಲ್ಲೇ ಆ ಕಾರು ಅಪಘಾತಕ್ಕೀಡಾಗಿ ಏಟು ತಿಂದು ಷಣ್ಮುಖ ಆಸ್ಪತ್ರೆ ಸೇರಿದಾಗ ಆತನ ಎಲ್ಲಾ ಖರ್ಚು ಕೂಡಾ ಪ್ರಭಾಕರನ ಹೆಗಲ ಮೇಲೆ ಬಿದ್ದಿತ್ತು. ಅಷ್ಟರ ಮಟ್ಟಿಗೆ ಆಪ್ತರಾಗಿದ್ದ ಇವರಿಬ್ಬರೂ ಚಟದಲ್ಲೂ ಹಿಂದೇನು ಬಿದ್ದಿದ್ದಿಲ್ಲ.

ಸೆಟ್ಟಾದಳು ಸೆಕ್ಸಿ ಕ್ವೀನ್

ಗ್ಯಾರೇಜು ಕೆಲಸದಿಂದ ನಾಲ್ಕು ಕಾಸು ಕಂಡಿದ್ದ ಇವರು ಐಷಾರಾಮಿ ಜೀವನಕ್ಕೆ ಬಿದ್ದಿದ್ದರು. ಆ ವೇಳೆಗೆ ಹೊಸೂರಿನ ದೊಡ್ಡ ಗಟಾರದ ಹತ್ತಿರದಲ್ಲಿದ್ದ ಹಾಟ್ ಕೋಟ್ಸ್‌ನಲ್ಲಿ ಕೆಲಸಕ್ಕಿದ್ದ ಶಿರ್ಸಿ ಮೂಲದ ಹುಡಗಿಯನ್ನ ಷಣ್ಮುಖ ಲಮಾಣಿ ಪಟಾಯಿಸಿ ಬುಟ್ಟಿಗೆ ಹಾಕಿಕೊಂಡಿದ್ದ. ಪಕ್ಕಾ ಬಿಚ್ಚಮ್ಮಳಾಗಿದ್ದ ಅವಳನ್ನು ಆಗಾಗ ತನ್ನ ಇಂಡಿಕಾ ಕಾರಿನಲ್ಲಿ ಜಾಲಿ ಟ್ರಿಪ್ ಹೊಡಿಸುತ್ತಿದ್ದ. ಅಷ್ಟೇ ಅಲ್ಲಾ ಇವರಿಬ್ಬರು ಮಂಗಳೂರ್ ಲಾಡ್ಜ್‌ಗೆ ಖಾಯಂ ಕಸ್ಟಮರ್ಸ್ ಕೂಡಾ ಆಗಿದ್ದರು. ಹೀಗಿದ್ದಾಗಲೆ ಅದೇ ಹುಡುಗಿಯ ಹಿಂದೆ ಪ್ರಭಾಕರ ಪೂಜಾರಿ ಕೂಡಾ ಬಿದ್ದು ಆಕೆಯನ್ನು ಪಟಾಯಿಸುವಲ್ಲಿ ಯಶಸ್ವಿಯಾದ. ಹೊಸ ಗೆಳೆಯನ ಸಹವಾಸಕ್ಕೆ ಬಿದ್ದ ಶಿರ್ಸಿ ಹುಡುಗಿ ತನ್ನ ಹಳೆಯ ಗೆಳೆಯ ಷಣ್ಮುಖ ಲಮಾಣಿಯನ್ನ ದೂರ ಸರಿಸಿದಳು.

ಅದೊಂದು ದಿನ ಪ್ರಭಾಕರ ಪೂಜಾರಿ ಮಂಗಳೂರ ಲಾಡ್ಜ್‌ನಲ್ಲಿ ಅವಳೊಂದಿಗೆ ಕುಳಿತುಕೊಂಡು ಸಮಾ ಕುಡಿದಿದ್ದಾನೆ. ನಂತರ ತನ್ನ ಬಳಿ ಇದ್ದ ಮೊಬೈಲ್‌ನ್ನೇ ವೀಡಿಯೋ ಮೋಡಿನಲ್ಲಿಟ್ಟು ಕುಡಿದ ನಿಶೆಯಲ್ಲಿ ಬೆತ್ತಲೆ ದೃಶ್ಯವನ್ನು ಚಿತ್ರೀಕರಿಸಿದ್ದಾನೆ. ನಂತರ ಅದನ್ನು ಡಿಲೀಟ್ ಮಾಡಲು ಪ್ರಯತ್ನಿಸಿದ್ದಾರೆ. ಆದರೆ ಸೋನಿ ಎರಿಕ್ಸನ್ ಮೊಬೈಲಿನ ಆಪರೇಶನ್ ತಿಳಿಯದೆ ಅಳಿಸಲಾಗದೆ ಹಾಗೆ ಬಿಟ್ಟಿದ್ದಾರೆ.

ನಂತರ ಪ್ರಭಾಕರ ಪೂಜಾರಿ ಆ ದೃಶ್ಯಗಳ ವಿಡಿಯೋ ಕ್ಲಿಪಿಂಗ್‌ನ್ನು ಡಿಲೀಟ್ ಮಾಡುವಂತೆ ತನ್ನ ಆಪ್ತ ಗೆಳೆಯ ಷಣ್ಮುಖ ಲಮಾಣಿ ಕೈಗೆ ಮೊಬೈಲ್ ನೀಡಿದ್ದಾನೆ. ಆದರೆ ಆತ ಡಿಲೀಟ್ ಮಾಡುವ ನಾಟಕವಾಡಿ ಬ್ಲೂಟೂತ್ ಮೂಲಕ ಆ ಕ್ಲಿಪಿಂಗ್‌ನ್ನು ತನ್ನ ಮೊಬೈಲ್‌ಗೆ ಕಳಸಿಕೊಂಡಿದ್ದಾನೆ. ಈ ವಿಚಾರ ಪೂಜಾರಿಗೆ ತಿಳಿದಿಲ್ಲ. ಕ್ಲಿಪಿಂಗ್ ಅಳಿಸಿದ ಖುಷಿಯಲ್ಲಿದ್ದ ಪೂಜಾರಿ ಮಾಡಿದ ಮೊದಲ ತಪ್ಪೇ ಇದಾಗಿತ್ತು.

ಸಂಬಂಧ ಹಳಸಿತು

ಹುಡುಗಿ ಹಾಗೂ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಈ ಇಬ್ಬರ ಸಂಬಂಧ ಹಳಸಿದೆ. ಅಲ್ಲಿಯತನಕ ಲಮಾಣಿ ಮನೆಯಲ್ಲೇ ವಾಸವಾಗಿದ್ದ ಪ್ರಭಾಕರ ತನ್ನ ಸಾಮಗ್ರಿಗಳೊಂದಿಗೆ ಗೋಕುಲ ರಸ್ತೆಯ ಅಕ್ಷಯ ಪಾರ್ಕ್ ಹಿಂಭಾಗದ ಏರಿಯಾದಲ್ಲಿ ಬಾಡಿಗೆ ರೂಮು ಮಾಡಿಕೊಂಡು ವಾಸವಾಗಿದ್ದಾನೆ. ನಂತರ ತಾನು ಹಿಂದೆ ನೀಡಿದ್ದ ಸಾಲವನ್ನು ವಾಪಸ್ ಮಾಡುವಂತೆ ಷಣ್ಮುಖ ಲಮಾಣಿಗೆ ಪೂಜಾರಿ ಬೆನ್ನು ಬಿದ್ದಿದ್ದಾನೆ. ಅಷ್ಟೇ ಅಲ್ಲ ನ್ಯೂ ಸ್ಟಾರ್ ಆಟೋ ಗ್ಯಾರೇಜ್‌ನಲ್ಲಿ ತನ್ನ ಪಾಲುದಾರಿಕೆಯನ್ನು ಹಿಂಪಡೆದು ಕೆಎಸ್‌ಆರ್‌ಟಿಸಿ ಡಿಪೋ ಎದುರುಗಡೆ ಅದೇ ಹೆಸರಿನ ಹೊಸ ಗ್ಯಾರೇಜ್ ಪ್ರಾರಂಭಿಸಿದ್ದಾನೆ.

ಪೂಜಾರಿ ಹೊಸ ಗ್ಯಾರೇಜ್ ತೆಗೆದಿದ್ದು, ಹಿಂದೆ ಕೊಟ್ಟಿದ್ದ ಸಾಲ ವಾಪಸ್ ಮಾಡುವಂತೆ ಬೆನ್ನಿಗೆ ಬಿದ್ದಿದ್ದು ಷಣ್ಮುಖ ಲಮಾಣಿಯನ್ನು ರೊಚ್ಚಿಗೆಬ್ಬಿಸಿದೆ. ಈ ನಡುವೆ ಪ್ರಭಾಕರ ಪೂಜಾರಿ ನಿತ್ಯ ಹಣ ಹಿಂದಿರುಗಿಸುವಂತೆ ಪೀಡಿಸಿದ್ದಾನೆ. ಇದರಿಂದ ಮತ್ತಷ್ಟು ಜಿದ್ದಿಗೆ ಬಿದ್ದ ಷಣ್ಮುಖ ಲಮಾಣಿ ಮತ್ತವನ ತಮ್ಮ ದೇವು ಲಮಾಣಿ 'ನೀ ಕೊಟ್ಟಿರುವ ಸಾಲ ಮತ್ತು ಪಾರ್ಟನರ್‌ಶಿಪ್‌ನ ಬಾಕಿ ಹಣ ಕೊಡಲಾಗುವುದಿಲ್ಲ. ಒಂದು ವೇಳೆ ವಸೂಲಿಗೆ ಜೋರು ಮಾಡಿದ್ದಲ್ಲಿ ಶಿರ್ಸಿ ಮೂಲದ ಹುಡುಗಿಯೊಂದಿಗೆ ನೀನಿರುವ ಬ್ಲ್ಯೂ ಫಿಲ್ಮ್ ಕ್ಲಿಪಿಂಗ್‌ನ್ನು ಟಿ.ವಿ ಮಾಧ್ಯಮಗಳಿಗೆ ಕಳುಹಿಸಿಕೊಡುತ್ತೇವೆ' ಎಂದು ಸಮಾ ಧಮಕಿ ಹಾಕಿದ್ದಾರೆ. ಸಹೋದರರಿಬ್ಬರ ಬ್ಲ್ಯಾಕ್‌ಮೇಲ್‌ಗೆ ಹೆದರಿದ ಪೂಜಾರಿ ಒಂದಷ್ಟು ದಿನ ತಣ್ಣಗಾಗಿದ್ದಾನೆ. ನಂತರ ತನಗೆ ಹಣದ ತ್ರಾಸ ಹೆಚ್ಚಾದಾಗ ಮತ್ತೆ ಸಾಲ ವಾಪಸ್ ಕೊಡುವಂತೆ ಲಮಾಣಿ ಬ್ರದರ್ಸ್‌ಗೆ ಕೇಳಿದ್ದಾನೆ. ತನ್ನ ಬ್ಲ್ಯೂಫಿಲ್ಮ್ ವೀಡಿಯೋವನ್ನು ಅಳಿಸಿ ಹಾಕಿದ್ದರಿಂದ ಅದನ್ನು ಬೇರೆಯವರಿಗೆ ಕಳುಹಿಸಲು ಸಾಧ್ಯವಿಲ್ಲ ಎಂಬ ಧೈರ್ಯ ಪೂಜಾರಿಯದ್ದಾಗಿತ್ತು.


ಪೂಜಾರಿಯ ಕಾಟ ಹೆಚ್ಚಾಗುತ್ತಿದ್ದಂತೆ ಪ್ರಭಾಕರ ಪೂಜಾರಿ ಮತ್ತು ಹಾಟ್‌ಕೋಟ್ಸ್‌ನ ಶಿರ್ಸಿ ಮೂಲದ ಹುಡುಗಿ ಒಟ್ಟಾಗಿ ಚಿತ್ರಿಸಿಕೊಂಡ ಬ್ಲ್ಯೂ ಫಿಲ್ಮ್ ಕ್ಲಿಪಿಂಗ್‌ನ ದೃಶ್ಯಗಳನ್ನ ಲಮಾಣಿಗಳಿಬ್ಬರೂ ಸೇರಿಕೊಂಡು ಸ್ನೇಹಿತರ ಮೊಬೈಲ್‌ಗಳಿಗೆ ವರ್ಗಾಯಿಸಿದ್ದಾರೆ. ನೋಡನೋಡುತ್ತಲೇ ಇಡೀ ಹುಬ್ಬಳ್ಳಿಯ ಪಡ್ಡೆ ಹುಡುಗರಲ್ಲಿ ಕುತೂಹಲ ಹುಟ್ಟಿಸಿದ ಈ ಕ್ಲಿಪಿಂಗ್ ದೃಶ್ಯ ಬಹುತೇಕರ ಮೊಬೈಲ್ ಸೇರಿಕೊಂಡಿದೆ. ಇದರ ಹಾವಳಿಯಿಂದ ಪೂಜಾರಿ ಬಾಡಿಗೆಗಿದ್ದ ರೂಮು ಮತ್ತು ಗ್ಯಾರೇಜಿನ ಮಾಲೀಕರು ಜಾಗ ಖಾಲಿ ಮಾಡುವಂತೆ ಬಿಸಿ ಮುಟ್ಟಿಸಿದ್ದಾರೆ. ನಶೆಯಲ್ಲಿ ಮಾಡಿದ ತಪ್ಪಿಗೆ ಕಿಸೆಯಿಂದ ಹಣ ಕಳೆದುಕೊಂಡು, ಕೊಟ್ಟ ಸಾಲವನ್ನೂ ಹಿಂದೆ ಪಡೆಯದೆ ಮೂರ್ಖನಾದ ಪೂಜಾರಿ ಸಂಬಂಧಿಕರಿಗೂ ಮುಖ ತೋರಿಸಲಾಗದೆ ಈಗ ಭೂಗತನಾಗಿದ್ದಾನೆ.

ಊರೆಲ್ಲಾ ಸುಟ್ಟಮೇಲೆ ಫೈರ್ ಗಾಡಿ ತರಿಸುವಂತೆ ಶಿರ್ಸಿ ಮಲ್ಲಿಗೆ ಉರ್ಫ್ ಶಿರ್ಸಿ ಸರಸ ಎಂದೆಲ್ಲಾ ಹೆಸರಿಟ್ಟುಕೊಂಡು ಮೊಬೈಲ್‌ನಿಂದ ಮೊಬೈಲ್‌ಗೆ ಹರಿದ ಮೇಲೆ ಅವಳಿ ನಗರದ ಪೊಲೀಸರು ಪ್ರಭಾಕರ ಪೂಜಾರಿಯನ್ನ ಕಚೇರಿಗೆ ಕರೆಸಿ ಡೀಲ್ ಮುಗಿಸಿಕೊಂಡಿದ್ದಾರೆ. ಮಾಡಿದ ತಪ್ಪಿಗೆ ಹಣ ಕಳೆದುಕೊಂಡ ಪೂಜಾರಿ ತಪ್ಪ ಮೋರೆ ಹಾಕಿಕೊಂಡು ಕೇಸ್ ಮುಗಿತು ಅಂದುಕೊಂಡಿದ್ದ. ಆದರೆ, ಅವಳಿ ನಗರಕ್ಕೆ ಹೊಸದಾಗಿ ವರ್ಗ ಆಗಿ ಬಂದಿರುವ ಪೊಲೀಸ್ ಅಧಿಕಾರಿಯೊಬ್ಬರು ಹಳೆ ಕೇಸುಗಳನ್ನ ರಿವಿಜನ್ ಮಾಡಿಕೊಳ್ಳಲು ಸಿದ್ಧತೆ ನಡೆಸಿದ್ದಾರೆ. ಆ ಕೇಸುಗಳ ಪೈಕಿ ಪೂಜಾರಿಯ ಫೈಲು ಹತ್ತಿರದಲ್ಲಿದೆ ಎಂಬ ಸುದ್ದಿ ಅವಳಿ ನಗರದ ಖಾಕಿ ವಲಯದಲ್ಲಿ ಬಿಸಿ ಚರ್ಚೆ ಹುಟ್ಟು ಹಾಕಿದೆ.

• ವಿನಯ

ಆದರೆ ಐದು ವರ್ಷಗಳ ಹಿಂದೆ ದಿಢೀರ್ ಧನಿಕನಾದ ಈತ ಸಂಘ ಸಂಸ್ಥೆಗಳಿಗೆ ಹಣ ನೀಡುತ್ತಾ ದಾನಶೂರನಂತೆ ಪೋಸು ನೀಡುತ್ತಿದ್ದ. ಆತನ ದಿಢೀರ್ ಸಂಪತ್ತಿನ ಹಿಂದೆ ಬಿಳ್ಳಾದಿಯ ಗಣಿ ದಂಧೆಯ ಹೊಲಸು ವಾಸನೆ ತಟ್ಟುತ್ತದೆ. ಸಕ್ರಿಯ ರಾಜಕಾರಣಿಯಾಗಲು ಹೊರಟಿದ್ದ ಆನಂದ ಕಳೆದ ಜಿ.ಪಂ. ಚುನಾವಣೆಯಲ್ಲಿ ಕೆರಗೋಡು ಕ್ಷೇತ್ರದಿಂದ ನಿಂತು ಸೋತಿದ್ದ. ಸಮಾಜ ಸೇವಕನೆಂಬ ಹೆಸರಿನಲ್ಲಿ ಚಾಲ್ತಿಯಲ್ಲಿದ್ದ ಆನಂದನ ದಾನಧರ್ಮದ ಹಿಂದಿನ ಮರ್ಮ ಏನೆಂಬುದು ಈ ಪ್ರಕರಣದಿಂದ ಗೊತ್ತಾಗಿದೆ. ಇವರಿಬ್ಬರದೂ ಗಳಸ್ಯ-ಕಂಠಸ್ಯ ಎನ್ನುವಂತ ಸ್ನೇಹ.

ಅಲಹಾಬಾದ್ ಬ್ಯಾಂಕ್‌ನಲ್ಲಿದ್ದ 'ಮುಡಾಗೆ ಸೇರಿದ ಐದು ಕೋಟಿ ರೂ. ಠೇವಣಿ ಹಣವನ್ನು ಮೂರು ತಿಂಗಳ ಮಟ್ಟಿಗೆ ನಮಗೆ ಕೊಡು. ರಿಯಲ್ ಎಸ್ಟೇಟ್ ಹಾಗೂ ಷೇರು ಉದ್ಯಮದಲ್ಲಿ ತೊಡಗಿಸಿ ಸಾಕಷ್ಟು ಲಾಭ ಮಾಡಿಕೊಂಡು ಬಂದ ಲಾಭದಲ್ಲಿ ನಿನಗೂ ಪಾಲು ಕೊಡುತ್ತೇವೆ' ಎಂದು ಕೆಬ್ಬಳ್ಳಿ ಆನಂದ್ ಹಾಗೂ ನಾಗಲಿಂಗಸ್ವಾಮಿ ಆಯುಕ್ತ ಶಿವರಾಮ್‌ನನ್ನು ಪುಸಲಾಯಿಸಿದ್ದರು. ಡೀಲ್‌ನಂತೆ ಹಣ ವರ್ಗಾವಣೆಯಾಗುವುದಕ್ಕೂ ಮೊದಲೇ 10 ಲಕ್ಷ ರೂಪಾಯಿ ಶಿವರಾಮ್‌ಗೆ ತಲುಪಿತು. ಚೆಕ್‌ನಲ್ಲಿ ಇಂಡಿಯನ್ ಬ್ಯಾಂಕ್ ಎಂದಷ್ಟೇ ಬರೆದು ಮುಂದಿನ ಜಾಗವನ್ನು ಖಾಲಿ ಬಿಡಿ, ಅದರಲ್ಲಿ ನಾವು ಅಕೌಂಟ್ ನಂಬರ್ ಬರೆದುಕೊಳ್ಳುತ್ತೇವೆಂದು ವಂಚಕರು ಹೇಳಿದ ಅಣಿಮುತ್ತಿಗೆ ತಲೆಯಾಡಿಸಿದ ಶಿವರಾಮ್ ಅದೇ ರೀತಿ ಬರೆದುಕೊಟ್ಟಿದ್ದರು.



ಡಿವೈಎಸ್ಪಿ ಶೋಭಾರಾಣಿ

ಈ ಮಧ್ಯೆ ಕೆಬ್ಬಳ್ಳಿ ಆನಂದನ ಬಳಿಗೆ ಮದ್ದೂರಿನ ಹೆಮ್ಮನಹಳ್ಳಿಯ ಗುತ್ತಿಗೆದಾರ ಚಂದ್ರಶೇಖರ್ ಹಣದ ಸಹಾಯ ಕೇಳಿಕೊಂಡು ಬಂದಿದ್ದ. ಈ ಡೀಲ್‌ನಲ್ಲಿ ಭಾಗಿಯಾದರೆ ನಿನಗೂ ಹಣ ಸಿಗುವುದಾಗಿ ನಂಬಿಸಿದ ಕೆಬ್ಬಳ್ಳಿ ಆನಂದ್ ಆತನ ಹೆಸರಿನಲ್ಲಿ ಇಂಡಿಯನ್ ಬ್ಯಾಂಕ್‌ನಲ್ಲಿ ಅಕೌಂಟ್ ತೆರೆಸಿದ್ದ. ಆಮೇಲೆ ಕೆಬ್ಬಳ್ಳಿ ಆನಂದ್ ಹಾಗೂ ನಾಗಲಿಂಗಸ್ವಾಮಿ ಸೇರಿಕೊಂಡು ನಕಲಿ ಬ್ಯಾಂಕ್ ಲೋಗೋ, ಸೀಲ್, ಮ್ಯಾನೇಜರ್ ಸಹಿ ಫೋರ್ಜರಿ ಮಾಡಿ ಇಂಡಿಯನ್ ಬ್ಯಾಂಕ್‌ನ ಫೇಕ್ ಬಾಂಡ್ ತಯಾರು ಮಾಡಿ ಆಯುಕ್ತ ಶಿವರಾಮ್‌ಗೆ ಕೊಟ್ಟು ಐದು ಕೋಟಿ ಹಣ ಚಂದ್ರಶೇಖರ್ ಅಕೌಂಟ್‌ಗೆ ಬಂದು ಸೇರುವಂತೆ ನೋಡಿಕೊಂಡಿದ್ದರು. ಚಂದ್ರಶೇಖರ್‌ನ ಖಾತೆಯಿಂದ ನಂತರ ಕೆಬ್ಬಳ್ಳಿ ಆನಂದನ ಅಕೌಂಟಗೆ 2.80 ಕೋಟಿ, ನಾಗಲಿಂಗಸ್ವಾಮಿ ಅಕೌಂಟಿಗೆ 1.65 ಕೋಟಿ ಹಣ ವರ್ಗಾವಣೆಯಾಗಿತ್ತು, ಉಳಿದ 45 ಲಕ್ಷ ಚಂದ್ರಶೇಖರ್ ಪಾಲಾಗಿತ್ತು.

ಫೆಬ್ರವರಿಯಲ್ಲಿ ನಕಲಿ ಬಾಂಡ್ ಸೃಷ್ಟಿಸಿ ಐದು ಕೋಟಿ ಹಣ ಪಡೆದಿದ್ದ ಆನಂದ್ ಮತ್ತು ನಾಗಲಿಂಗಸ್ವಾಮಿ ಡೀಲ್‌ನಂತೆ ಮೇ ತಿಂಗಳಲ್ಲೇ ಹಣ ವಾಪಸ್ ನೀಡಬೇಕಾಗಿತ್ತಾದರು ಜೂನ್ ಆದರೂ ನೀಡಿರಲಿಲ್ಲ. ಈ ಮಧ್ಯೆ ಡಿಸಿ ಕೃಷ್ಣಯ್ಯ ಒಳಚರಂಡಿ ಕಾಮಗಾರಿ ನಡೆಸಲು ಐದು ಕೋಟಿ ಠೇವಣಿ ಹಣ ಡ್ರಾ ಮಾಡುವಂತೆ ಆಯುಕ್ತ ಶಿವರಾಮ್‌ಗೆ ಸೂಚಿಸಿದ್ದರು. ಇಕ್ಕಟ್ಟಿಗೆ ಸಿಲುಕಿದ ಆಯುಕ್ತ ಶಿವರಾಮ್ ಆನಂದ್ ಮತ್ತು ನಾಗಲಿಂಗಸ್ವಾಮಿಯನ್ನು ಹಣಕ್ಕಾಗಿ ಕೇಳಿದ. ಆದರೆ ಅವರಿಬ್ಬರೂ ಕೈ ಎತ್ತಿ 'ಗೋವಿಂದಾ' ಎಂದರು. ಆಗ ಶಿವರಾಮ್ ಇಂಡಿಯನ್ ಬ್ಯಾಂಕ್‌ನವರ ಮೇಲೆಯೇ ಗೂಬೆ ಕೂರಿಸಿ ಸುಳ್ಳು ದೂರು ನೀಡಿ ಬಚಾವಾಗಬಹುದೆನ್ನುವ ಎಳಸು ಪ್ಲಾನ್ ಸೃಷ್ಟಿಸಿದ.

ರಹಸ್ಯ ಬಿಚ್ಚಿಟ್ಟ ಯಡವಟ್ಟುಗಳು

ಯಾವ ಬ್ಯಾಂಕ್‌ನಲ್ಲೂ ಬಾಂಡ್‌ಗಳನ್ನು ಕೈಯಿಂದ ಬರೆಯುವುದಿಲ್ಲ. ಆದರೆ ಮಾಸ್ಟರ್ ಮೈಂಡ್ ಆನಂದ ತಾನೇ ಇಂಡಿಯನ್ ಬ್ಯಾಂಕ್ ಹೆಸರಿನಲ್ಲಿ ಬಾಂಡ್ ತಯಾರಿಸಿ ತನ್ನ ಕೈನಿಂದಲೇ ಬಾಂಡ್ ಬರೆದಿದ್ದ. ಅಲ್ಲದೆ ಬಾಂಡ್‌ನಲ್ಲಿ ಭಾನುವಾರದ ದಿನಾಂಕ ಸೃಷ್ಟಿಸಿ ಸಿಕ್ಕಿ ಬಿದ್ದಿದ್ದಾನೆ. ಮುಡಾದಲ್ಲಿದ್ದದ್ದು ಸಾರ್ವಜನಿಕರ ಹಣ. ಇದರಲ್ಲಿ ಇನ್ನೂ ಹಲವರಿಗೆ ಪಾಲು ಸಂದಿದೆ ಎಂಬ ಸುದ್ದಿ ಕೇಳಿ ಬರುತ್ತಿದೆ. ನಿಷ್ಪಕ್ಷಪಾತ ತನಿಖೆ ನಡೆಸಿದರೆ ಮುಡಾ ಅವ್ಯವಹಾರದಲ್ಲಿ ಇನ್ನೂ ಸಾಕಷ್ಟು ಜನರು ಸಿಕ್ಕಿ ಹಾಕಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

• ಹೆಮ್ಮನಹಳ್ಳಿ ಚಂದ್ರಶೇಖರ್ ಖಾತೆಗೆ ಮುಡಾದ ಐದು ಕೋಟಿ ಹಣವಲ್ಲದೆ ಇತರೆ ಎರಡು ಕೋಟಿ ಹಣ ಬಂದು ಸೇರಿರುವುದೂ ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಈ ಎರಡು ಕೋಟಿ ಹಣ ಎಲ್ಲಿಂದ ಬಂತು ಎಂಬ ಬಗ್ಗೆ ಎಸ್ಪಿ ಭೂಷಣ್ ಜಿ.ಬೊರಸೆ, ಡಿವೈಎಸ್ಪಿ ಶೋಭಾರಾಣಿ ನೇತೃತ್ವದ ತಂಡ ವಿಚಾರಿಸಬೇಕಿದೆ. ಯಾಕೆಂದರೆ, ರಾಮನಗರ-ಚನ್ನಪಟ್ಟಣ ಪ್ರಾಧಿಕಾರಕ್ಕೆ ಸೇರಿದ 9.90 ಕೋಟಿ ರೂ. ಹಣವನ್ನು ಮಂಡ್ಯದ ಇಂಡಿಯನ್ ಬ್ಯಾಂಕ್‌ನಲ್ಲೇ ಠೇವಣಿ ಇಟ್ಟಿದ್ದು, ಅದೂ ಕೂಡ ಮುಡಾದ ಹಣದಂತೆಯೇ ಮಂಗಮಾಯವಾಗಿದೆ ಎಂಬ ಬಗ್ಗೆ ರಾಮನಗರದ ಐಜೂರು ಠಾಣೆಯಲ್ಲಿ ದೂರು ದಾಖಲಾಗಿದೆ. ಎಂಡಿಸಿಸಿ ಬ್ಯಾಂಕಿನ ಐದು ಕೋಟಿ ಹಣವನ್ನೂ ಇದೇ ರೀತಿ ಲಪಟಾಯಿಸಲಾಗಿದೆ ಎಂಬ ಗುಸುಗುಸು ಸಹಾ ಕೇಳಿ ಬರುತ್ತಿದೆ. ಇಂಡಿಯನ್ ಬ್ಯಾಂಕ್‌ನ ಕೆಲ ಸಿಬ್ಬಂದಿಗಳೇ ಇಂತಹ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕೆ ಮೂಡಿದ್ದು ಪೊಲೀಸರು ಯಾವ ಒತ್ತಡಗಳಿಗೂ ಮಣಿಯದೆ ತನಿಖೆ ನಡೆಸಿದರೆ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಪ್ಲ್ಯಾನವನ್ನು ಹೆಡೆಮುರಿಗೆ ಕಟ್ಟಿ ಜೈಲಿಗಟ್ಟಬಹುದು.

• ಸಂಸ ನಾಗೇಶ್

ಚನ್ನಪಟ್ಟಣ-ರಾಮನಗರ ಹಣ ದೋಚಿದ್ದೂ ಇವರೆ!

ರಾಮನಗರ-ಚನ್ನಪಟ್ಟಣ ಪ್ರಾಧಿಕಾರದಲ್ಲಿದ್ದ 9.90 ಕೋಟಿ ನಾಪತ್ತೆಯ ಹಿಂದೆಯೂ ಇದೇ ಕೆಬ್ಬಳ್ಳಿ ಆನಂದ್ ಮತ್ತು ನಾಗಲಿಂಗಸ್ವಾಮಿಯ ಕೈವಾಡವಿರುವುದು ಈಗಷ್ಟೇ ಬಯಲಾಗಿದೆ. ವಿಚಾರಣೆ ನಡೆಸುತ್ತಿದ್ದ ಎಸ್.ಪಿ. ಅನುಪಮ್ ಅಗರ್‌ವಾಲ್‌ರ ಎಸ್‌ಕ್ವೈರಿಯ ಮುಂದೆ ಬೆದರಿ ಬಾಯ್ಬಿಟ್ಟಿರುವ ಪ್ರಾಧಿಕಾರದ ಆಯುಕ್ತ ಚಿದಾನಂದ, ಕೆಬ್ಬಳ್ಳಿ ಆನಂದ್, ನಾಗಲಿಂಗಸ್ವಾಮಿ ಮತ್ತು ಶೇಖರ್ ಜೊತೆಗೆ ಹಣ ಹಂಚಿಕೆಯ ಅಚ್ಚೇಗ್ ವ್ಯವಹಾರ ನಡೆದುದಾಗಿ ಒಪ್ಪಿಕೊಂಡಿದ್ದಾನೆ. ಭ್ರಷ್ಟ ಅಧಿಕಾರಿಗಳ ಜೊತೆ ಸೇರಿ ಸಾರ್ವಜನಿಕರ ಹಣ ಲಪಟಾಯಿಸುವುದೇ ಈ ಖತರ್ನಾಕ್ ಜೋಡಿಯ ಕಸುಬೆನ್ನುವುದು ಈಗ ಸಾಬೀತಾಗಿದೆ.

ವಸತಿ ಶಿಕ್ಷಣ ಸಂಸ್ಥೆ ಅವ್ಯವಸ್ಥೆ

ಶಿಕ್ಷಣ ಸಚಿವರು ತಕ್ಷಣ ಗಮನ ಹರಿಸಲಿ



ಇ.ಡಿ.ಯ ಅಧಿಕಾರಿ ಸಹೋದ್ಯೋಗಿಗಳು ಹೇಗಿರುತ್ತಾರೆಂದು ಗೊತ್ತಾಗಬೇಕಾದರೆ KREIS ನ ಯಾವನಾದರೊಬ್ಬ ಅಧಿಕಾರಿಗೆ ಫೋನ್ ಮಾಡಿ ನೀವು ಯಾವುದೋ ಒಂದು ಮೊರಾರ್ಜಿ ಶಾಲೆಯ ಶಿಕ್ಷಕನೆಂದು ಹೇಳಿ "ಇಲ್ಲೊಂದು ಸಮಸ್ಯೆ ಇದೆ. ಏನು ಮಾಡಬೇಕು?" ಎಂದು ಕೇಳಿ ನೋಡಿ, "ಥೂತ್ ಬೋಳಿಮಗ್ನೆ, ಲೋಫರ್, ಆಗದಿದ್ರೆ ಕೆಲ್ಸ ಬಿಟ್ಟು ಹೋಗು" ಎನ್ನುವ ಉತ್ತರ ಬರುತ್ತದೆ. ಮೆದುಳಿರಬೇಕಾದ ಜಾಗದಲ್ಲಿ ಕಿಡ್ನಿ ಇದ್ದರೆ ಬಾಯಲ್ಲಿ ಬರುವುದೆಲ್ಲ....!

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗೆ ನೂತನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ಬಿ.ಎಸ್. ಪುರುಷೋತ್ತಮ್ ಎಂಬುವರು ನೇಮಕಗೊಂಡಿದ್ದಾರೆ. ಹಾಗೆಯೇ ಪ್ರದೀಪ್ ಎಂಬುವವರು ಜಾಯಿಂಟ್ ಡೈರೆಕ್ಟರ್ ಆಗಿದ್ದಾರೆ.

ಈ ಹಿಂದೆ ಇದ್ದ ಶಾಂತಪ್ಪ ಎಂಬ ಇ.ಡಿ.ಮಹಾನ್ ಭ್ರಷ್ಟನಾಗಿದ್ದು ಇಡೀ ಸಂಸ್ಥೆಯನ್ನು ಹಾಳು ಮಾಡಿ ಹೋಗಿದ್ದಾನೆ. ಇವನ್ನೆಲ್ಲಾ ಸರಿಪಡಿಸಲು ವಸತಿ ಶಿಕ್ಷಣ ಸಂಸ್ಥೆಗಳ ಹಾಗೂ ಶಿಕ್ಷಕರ ನೈಜ ಸಮಸ್ಯೆಗಳೇನೆಂಬ ಬಗ್ಗೆ ಹೊಸ ಆಡಳಿತಾಧಿಕಾರಿ ತುರ್ತಾಗಿ ಗಮನ ನೀಡಬೇಕಿತ್ತಾದರೂ ಈಗ ಅವರೇ ಹೊಸ ಸಮಸ್ಯೆಗಳನ್ನೂ ಸೃಷ್ಟಿಸುತ್ತಿದ್ದಾರೆ.

ಸಂಸ್ಥೆಯ ಅವ್ಯವಸ್ಥೆಯ ಕೆಲವು ಸ್ಯಾಂಪಲ್‌ಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಅಪ್ಪ ನಿಂತುಕೊಂಡು ಮೂತ್ರ ಮಾಡಿದರೆ ಮಗ ಓಡಾಡ್ಕೊಂಡು ಮೂತ್ರ ಮಾಡ್ತಾನೆ ಎನ್ನುವ ಹಾಗಾಗಿದೆ KREIS (ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ) ಕಥೆ. ಕೋರ್ಟ್ ಆದೇಶವನ್ನು ಉಲ್ಲಂಘಿಸಿ ನೇಮಕ ಮಾಡುವುದು, ಒಂದೇ ಹುದ್ದೆಗೆ ಎರಡು, ಮೂರು ನೇಮಕಾತಿ ಮಾಡುವುದೆಲ್ಲ ಹಿಂದಿನ ಶಾಂತಪ್ಪನ ಆಟಗಳು. ಆತನ ಉತ್ತರಾಧಿಕಾರಿ ಪುರುಷೋತ್ತಮ ಹೊರಗುತ್ತಿಗೆ ಶಿಕ್ಷಕರಿಗೆ ಕೋರ್ಟ್ ಕೊಟ್ಟಿರುವ ಆದೇಶವನ್ನು ಪಾಲನೆ ಮಾಡುವುದು ಬಿಟ್ಟು ಬೇರಿನ್ನೇನೋ ಮಾಡಲು ಹೊರಟಿದ್ದಾರೆ. ಹೊರಗುತ್ತಿಗೆ ಶಿಕ್ಷಕರಿಂದ ಏನಾದರೂ ಬರುತ್ತದೋ ಎಂದು ಕಾದೂಕಾದೂ ಸುಸ್ತಾಗಿ ಕಡೆಗೆ ಅದನ್ನು ಬದಿಗಿಟ್ಟು ಈಗ ಪ್ರಾರಂಭಿಸಿರುವ ದಂಧೆಯೇ ಟ್ರಾನ್ಸ್‌ಫರ್. ಕೊಳ್ಳೇಗಾಲದವನನ್ನು ಬೀದರ್‌ಗೆ, ಬೆಳಗಾವಿಯವನನ್ನು ಮೈಸೂರಿಗೆ ಟ್ರಾನ್ಸ್‌ಫರ್ ಮಾಡಲಾಗಿದೆ. ಒಂದು ಹುದ್ದೆಯಲ್ಲಿ ಇಬ್ಬರು ಇರಬಾರದು ಅನ್ನುವುದೇನೋ ಸರಿ. ಒಂದೇ ಹುದ್ದೆಯಲ್ಲಿ ಯಾಕೆ ಇಬ್ಬರು ಇದ್ದಾರೆ? ಕೋರ್ಟ್ ಆದೇಶದ ಉಲ್ಲಂಘನೆ ಮಾಡಿ ನೇಮಕ ಮಾಡಿದ್ದರಿಂದ ಈ ಗತಿಯಾಗಿದೆ. ಸರಿಪಡಿಸಬೇಕಾದರೆ ಏನು ಮಾಡಬೇಕು? ಕೋರ್ಟ್ ಆದೇಶವನ್ನು ಪಾಲಿಸಬೇಕು. ಆಗ ಅಚ್ಚುಕಟ್ಟಾದ ಮೆರಿಟ್ ಲಿಸ್ಟ್ ಸಿಗುತ್ತದೆ. ಅದರಂತೆ ನೇಮಕಾತಿ ಮಾಡಿದರೆ ಎಲ್ಲವೂ ಸರಿ ಇರುತ್ತದೆ.

ಆದರೆ ಇ.ಡಿ.ಯ ಸ್ಟೈಲೇ ಬೇರೆ.

ನೆಟ್ಟಗೆ ಒಂದು ಸಿ ಆಂಡ್ ಆರ್ ರೂಲ್ ಮಾಡಲು ಬರುವುದಿಲ್ಲ, ಸುಪ್ರೀಂಕೋರ್ಟ್‌ಗೆ ಹೋಗುತ್ತೇನೆಂದು ಕೂತುಕೊಳ್ತಾರೆ. ನೇಮಕಾತಿ ಪರೀಕ್ಷೆಯಲ್ಲಿ 'ನಾಟ್ ಸಿಲೆಕ್ಟೆಡ್, ಬಿಲೋ ಕಟ್ ಆಫ್ ಪರ್ಸಂಟೇಜ್' ಎಂದು ಪರೀಕ್ಷೆ ನಡೆಸಿದ ಶಿಕ್ಷಣ ಇಲಾಖೆ ಕೊಟ್ಟಿರುವ ದಾಖಲೆ ಶಿಕ್ಷಣ ಇಲಾಖೆಯ ಕೈಯಲ್ಲಿದೆ ಎಂಬುದನ್ನೇ ಮರೆತು ಅಂಥವನಿಗೂ ನೇಮಕಾತಿ ಆದೇಶ ಕೊಟ್ಟಿರುವ KREIS ಹುಳುಕು ನೇಮಕಾತಿಯನ್ನು ಕಟ್ಟಿಕೊಂಡು ಸುಪ್ರೀಂ ಕೋರ್ಟ್‌ಗೆ ಹೊರಟಿರುವುದು ಶತಮಾನದ ಜೋಕ್! ಒಬ್ಬನನ್ನು ಮೂರು ಶಾಲೆಗಳಿಗೆ ಟ್ರಾನ್ಸ್‌ಫರ್ ಮಾಡಿರುವುದು ಮತ್ತೊಂದು ಜೋಕು.

ಈತನ ಟ್ರಾನ್ಸ್‌ಫರ್‌ಗಳೂ ಒಂದು ಜೋಕೇ. ನೇಮಕಾತಿಯಲ್ಲಿ 62 ಶೇ. ಬಂದವನು ಹೋಗಿರುವ ಜಾಗದಲ್ಲಿ ಹೊರಗುತ್ತಿಗೆ ಶಿಕ್ಷಕರು ಇಲ್ಲದೆ ಇದ್ದರೆ ಅವನು ಸುರಕ್ಷಿತ. 80 ಶೇ. ಅಂಕ ಪಡೆದವನು ಈ ಇ.ಡಿ. ಕೊಟ್ಟ ಜಾಗಕ್ಕೆ ಹೋದರೆ ಅಲ್ಲಿ ಹೊರಗುತ್ತಿಗೆ ಶಿಕ್ಷಕ ಇದ್ದರೆ ಈಗ ಆತನಿಗೆ ಕೊಳ್ಳೇಗಾಲದಿಂದ ಬೀದರ್‌ಗೆ ಟ್ರಾನ್ಸ್‌ಫರ್. ಯಾವುದೋ ಶಾಲೆಯಲ್ಲಿ 10 ವರ್ಷದಿಂದ ಕೆಲಸ ಮಾಡುತ್ತಿರುವವನು ಪ್ರಭಾರ ಪ್ರಾಂಶುಪಾಲನಾಗಿರುತ್ತಾನೆ. ಇನ್ನಾವುದೋ ಶಾಲೆಯಲ್ಲಿ ಹೊರಗುತ್ತಿಗೆ ಶಿಕ್ಷಕ ಇರುವಲ್ಲಿಗೆ ಹೊಸ ಶಿಕ್ಷಕ ನೇಮಕಗೊಂಡಿದ್ದರೆ 6 ತಿಂಗಳು ಸೇವೆ ಸಲ್ಲಿಸಿದ ಅವನನ್ನು ಪ್ರಭಾರ ಪ್ರಾಂಶುಪಾಲನಾಗಿ ಮಾಡಿ 10 ವರ್ಷದಿಂದ ಕೆಲಸ ಮಾಡುತ್ತಿರುವ ಪ್ರಭಾರ ಪ್ರಾಂಶುಪಾಲನ ಜಾಗಕ್ಕೆ ಟ್ರಾನ್ಸ್‌ಫರ್! ಪ್ರಾಂಶುಪಾಲ ಎಂಬ ಹುದ್ದೆ ಇದೆ. ಶಿಕ್ಷಕ ಎಂಬ ಹುದ್ದೆಯೂ ಇದೆ. ಆದರೆ ಮರ್ಯಾದ ಪುರುಷೋತ್ತಮ 'ಪ್ರಭಾರ ಪ್ರಾಂಶುಪಾಲ' ಎಂಬ ಹುದ್ದೆಯನ್ನೇ ಆವಿಷ್ಕರಿಸಿದ್ದಾರೆ! ಹೀಗೆ ಟ್ರಾನ್ಸ್‌ಫರ್ ಆದವರಲ್ಲಿ ಇನ್ನೆರಡು ವಾರದಲ್ಲಿ ಹೆರಿಗೆಯಾಗುವವರಿದ್ದಾರೆ. ಒಂದು ಹುದ್ದೆಗೆ ಇಬ್ಬರು ನೇಮಕಾತಿಯಾಗಿದ್ದರೂ ನಿಯೋಜನೆಯ ಮೇಲೆ ಕೆಲಸ ಮಾಡುವವರಿದ್ದಾರೆ. ಇವರೆಲ್ಲ ಟ್ರಾನ್ಸ್‌ಫರ್ ಆಗಲು ಸಿದ್ಧರಿಲ್ಲದೆ ಬರುತ್ತಾರೆ ನೋಡಿ, ಆಗ ಇ.ಡಿ.ಗೆ ಲಾಭ. ಇ.ಡಿ.ಯ ಕೈಯಲ್ಲಿ ಒಂದು ಸೀನಿಯಾರಿಟಿ ಲಿಸ್ಟ್ ಇಲ್ಲ, ತನ್ನ ಸಿಬ್ಬಂದಿ ಎಲ್ಲೆಲ್ಲಿ ಇದ್ದಾರೆ ಎಂಬುದೇ ಗೊತ್ತಿಲ್ಲ, ಕೋರ್ಟ್ ಆದೇಶ ಪಡೆದುಕೊಂಡವರ ಸರಿಯಾದ ಪಟ್ಟಿ ಇಲ್ಲ, 2011 ರಲ್ಲಿ ಖಾಯಂಗೊಳಿಸಿದ ಸಿಬ್ಬಂದಿಗೆ ಎಸ್.ಆರ್. ಬುಕ್ ತೆರೆದಿಲ್ಲ, ಪೆನ್ಷನ್ ಬೆನಿಫಿಟ್ ವ್ಯವಸ್ಥೆ ಮಾಡಿಲ್ಲ, ಸರ್ಕಾರ ಡಿ.ಎ. ಸ್ಯಾಂಕ್ಷನ್ ಮಾಡಿ 6 ತಿಂಗಳ ನಂತರ ಈತ ಡಿ.ಎ. ಕೊಡುವುದು! ಶಾಂತಪ್ಪ ಇದ್ದಾಗ ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಮಾಡಿ ಶಿಕ್ಷಕರಿಗೆ 400 ರೂಪಾಯಿ ವಿಶೇಷ ಭತ್ಯೆ ಮಂಜೂರು ಮಾಡಿದರೆ 18 ಗಂಟೆ ಕೆಲಸ ಮಾಡುವ ಶಿಕ್ಷಕರಿಗೆ ಅದನ್ನು ಪಡೆಯುವ ಅರ್ಹತೆ ಇಲ್ಲ; ಕೊಟ್ಟದ್ದನ್ನು ವಾಪಸ್ ಕಟ್ಟು ಎಂದು ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಮಾಡದೆಯೇ ಮರ್ಯಾದಾ ಪುರುಷೋತ್ತಮನ ಆದೇಶ ಜಾರಿಯಾಗುತ್ತದೆ. ಇ.ಡಿ.ಯ ಇನ್ನೊಂದು ಪ್ರಾಜೆಕ್ಟ್ ಎಚ್‌ಆರ್‌ಎಂಎಸ್‌ಎ ಮಾಡಿಸುವುದು. ಶಿಕ್ಷಕರಿಗೆ ಕೆಜಿಐಡಿ ಸೌಲಭ್ಯ ಇಲ್ಲ, ಎಚ್‌ಆರ್‌ಎಂಎಸ್‌ಎಗೆ ಕೆಜಿಐಡಿ ನಂಬರ್ ಬೇಕು. ಇ.ಡಿ.ಯ ಬ್ರಹ್ಮಾಂಡ ಬುದ್ಧಿವಂತಿಕೆ ಹೇಗಿದೆಯೆಂದರೆ ಡಮ್ಮಿ ಕೆಜಿಐಡಿ ನಂಬರ್ ಹಾಕಿ ಎಚ್.ಆರ್.ಎಂ.ಎಸ್.ಎ ಮಾಡುವುದು. ಎಲ್ಲರಿಗೂ ತಪ್ಪು ಮಾಹಿತಿ ನೀಡುವುದು KREIS ನ ಚಾಳಿ. ಕೋರ್ಟ್‌ನಲ್ಲಿ ಇ.ಡಿ.ಯ ಲಾಯರ್ 800 ಹುದ್ದೆಗಳು ಖಾಲಿ ಇವೆ ಎಂದಿದ್ದಾರೆ. ಆನಂತರ ಶಿಕ್ಷಣ ಇಲಾಖೆಗೆ ಹೊರಟುಹೋಗಿರುವವರೂ ಸೇರಿ ಸುಮಾರು 1800 ಹುದ್ದೆಗಳು ಖಾಲಿಯಾಗಿದ್ದರೂ ಈತ ತನ್ನ ಬಳಿ 350 ಹುದ್ದೆ ಮಾತ್ರ ಖಾಲಿ ಇರುವುದು ಎಂದು ಎಂಎಲ್‌ಎಗಳಿಗೆ ಹೇಳುತ್ತಾರೆ (ಪ್ರಾಯಶಃ ಉಳಿದ ಹುದ್ದೆಗಳನ್ನು ಮಾರಾಟಕ್ಕಾಗಿ ಇರಿಸಿಕೊಂಡಿರಬೇಕು!) ಡಬ್ಬಲ್ ಪೋಸ್ಟಿಂಗ್‌ನಿಂದ ಎಷ್ಟು ಹೆಚ್ಚುವರಿ ಖರ್ಚಾಗಿದೆ ಎಂದು ಕೇಳಿದರೆ ಡಬ್ಬಲ್ ಪೋಸ್ಟಿಂಗ್ ಆಗೇ ಇಲ್ಲ ಅಂತಾರೆ. ಡಬ್ಬಲ್, ತ್ರಿಬ್ಬಲ್ ಪೋಸ್ಟಿಂಗ್ ಆಗೇ ಇಲ್ಲದಿದ್ದರೆ ಟ್ರಾನ್ಸ್‌ಫರ್ ಯಾಕೆ ಬೇಕಿತ್ತು, ಕೋರ್ಟ್ ಅಂದದ್ದನ್ನೆಲ್ಲ ಮಾಡ್ಲಿಕಾಗುತ್ತಾ ಎಂದು ಕೋರ್ಟ್ ಬಗ್ಗೆಯೇ ಉಡಾಫೆ ಮಾತನಾಡುವ KREIS ತನಗೆ 100% ಫಂಡಿಂಗ್ ಮಾಡುವ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯ ಸಲಹೆಯನ್ನೂ ಕೇಳದೆ ಇಲಾಖೆಯನ್ನೇ ಪ್ರತಿವಾದಿಯಾಗಿ ಮಾಡಿ ಮೇಲ್ಮನವಿ ಹಾಕುತ್ತದೆ! ಸಂಕಟ ಬಂದರೆ ಇಲಾಖೆಯ ಕಾರ್ಯದರ್ಶಿಯ ತಲೆಯ ಮೇಲೆ ಎತ್ತಿ ಹಾಕುತ್ತದೆ! ಪಾಠ ಪ್ರಾರಂಭ ಆದ ಕೂಡಲೇ ಟ್ರಾನ್ಸ್‌ಫರ್ ದಂಧೆ ಪ್ರಾರಂಭಿಸುವ KREIS ದಂಧೆಗೆ ವಿಶ್ರಾಂತಿ ಕೊಡುವುದು ಏಪ್ರಿಲ್ 10 ಕ್ಕೆ!

ಈ ಶಾಲೆಗಳ ಮಕ್ಕಳ ಸ್ಥಿತಿ ಏನು? ಗ್ಯಾಸ್ ಸಿಲಿಂಡರ್‌ಗೆ 400 ರೂಪಾಯಿ ಇದ್ದಾಗಲೂ ಒಂದು ಮಗುವಿನ ಮಾಸಿಕ ಖರ್ಚು 800 ರೂಪಾಯಿ. ಗ್ಯಾಸ್ ಸಿಲಿಂಡರ್‌ಗೆ 1 ಸಾವಿರ ರೂಪಾಯಿಯಾದಾಗಲೂ 800 ರೂಪಾಯಿಯೇ. ಪರಪ್ಪನ ಅಗ್ರಹಾರದಲ್ಲಿ ಒಬ್ಬ ಖೈದಿಗೆ ದಿನದ ಖರ್ಚು 100 ರೂಪಾಯಿಯಾದರೆ ಮೊರಾರ್ಜಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯ ದಿನದ ಖರ್ಚಿಗೆ ಬಿಡುಗಡೆಯಾಗುವುದು 26 ರೂಪಾಯಿ! ಈ ರೂಪಾಯಿಯಲ್ಲಿ ಮೀನು, ಮೊಟ್ಟೆ, ಹಾಲು, ಕುರಿ ಮಾಂಸ, ಹಣ್ಣು, ತರಕಾರಿ, ಚಪಾತಿ ಇಡ್ಲಿ, ಪಾಯಸ ಎಲ್ಲವನ್ನೂ ಕೊಡಬೇಕೆಂದು ಶಾಲೆಗಳಿಗೆ ಆದೇಶ ಮಾಡುವ ಇ.ಡಿ.ಯ ತಲೆಯೊಳಗೆ ಮೆದುಳು ಇರುವುದೇ ಅನುಮಾನ. ಮೆದುಳಿಲ್ಲದ ಇ.ಡಿ.ಯ ಅಧಿಕಾರಿ ಸಹೋದ್ಯೋಗಿಗಳು ಹೇಗಿರುತ್ತಾರೆಂದು ಗೊತ್ತಾಗಬೇಕಾದರೆ KREIS ನ ಯಾವನಾದರೊಬ್ಬ ಅಧಿಕಾರಿಗೆ ಫೋನ್ ಮಾಡಿ ನೀವು ಯಾವುದೋ ಒಂದು ಮೊರಾರ್ಜಿ ಶಾಲೆಯ ಶಿಕ್ಷಕನೆಂದು ಹೇಳಿ "ಇಲ್ಲೊಂದು ಸಮಸ್ಯೆ ಇದೆ. ಏನು ಮಾಡಬೇಕು?" ಎಂದು ಕೇಳಿ ನೋಡಿ, "ಥೂತ್ ಬೋಳಿಮಗ್ನೆ, ಲೋಫರ್, ಆಗದಿದ್ರೆ ಕೆಲ್ಸ ಬಿಟ್ಟು ಹೋಗು" ಎನ್ನುವ ಉತ್ತರ ಬರುತ್ತದೆ. ಮೆದುಳಿರಬೇಕಾದ ಜಾಗದಲ್ಲಿ ಕಿಡ್ನಿ ಇದ್ದರೆ ಬಾಯಲ್ಲಿ ಬರುವುದೆಲ್ಲ....! ●

ಚಿತ್ರದುರ್ಗ ಪತ್ರಕರ್ತರ ತಮಾಷಿ ನ್ಯಾಯ ಪಂಚಾಯಿತಿ

ಚಿತ್ರದುರ್ಗ ಪತ್ರಕರ್ತರಲ್ಲಿ ಸದಾ ವಿವಾದ ಸೃಷ್ಟಿಸುವ ಒಬ್ಬರಿದ್ದಾರೆ. ಸದ್ಯಕ್ಕೆ ಆತನ ಹೆಸರು 'ರವಿಪುತ್ರ' ಅಂದುಕೊಳ್ಳೋಣ.

ಇತ್ತೀಚೆಗೆ ದುರ್ಗದ ಪತ್ರಕರ್ತ ಮಿತ್ರರು ಒಂದು ಅನಿವಾರ್ಯ ನ್ಯಾಯ ಪಂಚಾಯತಿ ನಡೆಸಬೇಕಾಗಿ ಬಂತು. ಇದಕ್ಕೆ ರವಿಪುತ್ರನೇ ಕಾರಣ.

ವಿಷಯ ಏನೆಂದರೆ...

ಮೀಡಿಯಾ ಮಸಾಲ

ವಿಧಾನಸಭೆ ಚುನಾವಣೆ ನಡೆದಾಗ ಬಿಎಸ್‌ಆರ್ ಪಕ್ಷದಿಂದ ಫಯಾಜ್ ಎಂಬುವರು ಚಿತ್ರದುರ್ಗದ ಕ್ಯಾಂಡಿಡೇಟ್ ಆಗಿದ್ದರು. ಆಗ ಪತ್ರಕರ್ತ 'ರವಿಪುತ್ರ' ಫಯಾಜ್‌ರಿಂದ ಒಂದೂವರೆ ಲಕ್ಷ ಹಣ ತಗೊಂಡು ತಾನದನ್ನು 'ಎಲ್ಲಾ ಪತ್ರಕರ್ತರಿಗೂ ಹಂಚಿ ಒಳ್ಳೇ ಪ್ರಚಾರ ಸಿಗುವಂತೆ ನೋಡಿಕೊಳ್ತೀನಿ' ಅಂತಾ ಭರವಸೆ ಕೊಟ್ಟಿದ್ದರಂತೆ. ಆ ನಂತರ ಒಂದಿಬ್ಬರು ಚಿಕ್ಕ ಪುಟ್ಟ ಪತ್ರಕರ್ತರಿಗೆ ರವಿಪುತ್ರ ತಲಾ ಎರಡೆರಡು ಸಾವಿರ ಮಾತ್ರ ಹಂಚಿದ. ಆದರೆ ಎಲ್ಲರಿಗೂ ಹಂಚಿದ್ದಾಗಿ ಫಯಾಜ್‌ನನ್ನು ನಂಬಿಸಿದ. ಕೊನೆಗೆ ಎಲೆಕ್ಷನ್‌ನಲ್ಲಿ ಫಯಾಜ್‌ಗೆ ಎರಡು ಸಾವಿರ ಓಟೂ ಬೀಳಲಿಲ್ಲ.

ಈ ಫಯಾಜ್ "ಹಣ ತಗೊಂಡರೂ ಪತ್ರಕರ್ತರು ತನಗೆ ಪ್ರಚಾರ ನೀಡಲಿಲ್ಲ" ಅಂತ ಗೊಣಗಾಡಲು ಶುರು ಮಾಡಿದಾಗ ಹಣ ಪಡೆದಿರದಿದ್ದ ಪತ್ರಕರ್ತರಿಗೆ ಕೋಪ ಬಂತು. ಅವರು ಇತ್ತೀಚೆಗೆ ಫಯಾಜ್‌ನನ್ನು ಹಿಡಿದು ಕೂರಿಸಿ "ನೀನೆಲ್ಲಯ್ಯ ನಮಗೆ ದುಡ್ಡು ಕೊಟ್ಟಿದ್ದೆ, ಯಾಕೆ ಅಪಪ್ರಚಾರ ಮಾಡ್ತಿದ್ದೀಯಾ?" ಅಂತ ದಬಾಯಿಸಿದರು. ಆಗ ಗಾಭರಿಯಾದ ಫಯಾಜ್ "ಹಾಗಾದ್ರೆ ನಿಮಗೆ ಹಣ ತಲುಪಿಲ್ಲವಾ? ಹೋಗ್ಲಿ ಬಿಡಿ, ಈಗ ಕೊಡ್ತೀನಿ" ಅಂದಿದ್ದಾನೆ. ಆಗ ಇನ್ನಷ್ಟು ರೇಗಿಹೋದ ಪತ್ರಕರ್ತರು "ಲೇಯ್ ನಾವೀಗ ಬಂದಿರೋದು ಹಣಕ್ಕಲ್ಲ, ಈ ಕೆಟ್ಟ ಮಾತು ನಿಲ್ಲಿಸು ಅಂತ ಹೇಳಲು" ಅಂದಿದ್ದಾರೆ.

ದುರ್ಗದಲ್ಲೀಗ 'ಕೊಟ್ಟೋನು ಫಯಾಜ್ ಈಸ್ಕೊಂಡೋನು 'ರವಿಪುತ್ರ' ಅಂತಾ ಹೊಸ ಗಾದೆ ಚಾಲ್ತಿಗೆ ಬಂದಿದೆ.

ಟೆಂಪಲ್ ಆಫ್ ಸಕ್ಸಸ್ ವಿರುದ್ಧ 'ಲಂಕೇಶ್' ಸಕ್ಸಸ್

ಈಗಲೂ ಕನ್ನಡ ಟಿವಿ ಚಾನಲ್‌ಗಳಲ್ಲಿ ತನ್ನ ವಂಚಕ ಮುಖ ತೋರಿಸುತ್ತಿರುವ 'ಟೆಂಪಲ್ ಆಫ್ ಸಕ್ಸಸ್'ನ ರಘುನಾಥ್ ಗುರೂಜಿಯ ಬಗ್ಗೆ 'ಲಂಕೇಶ್' ಕಳೆದ ಮಾರ್ಚ್ ತಿಂಗಳಲ್ಲಿ ಒಂದು ತನಿಖಾ ವರದಿ ಪ್ರಕಟಿಸಿತ್ತು.


ನೆಗಡಿಯಿಂದ ಕ್ಯಾನ್ಸರ್‌ವರೆಗೂ ಎಲ್ಲಾ ಕಾಯಿಲೆಗಳನ್ನು ವಾಸಿ ಮಾಡುವುದಾಗಿ ಜನರನ್ನು ನಂಬಿಸಿ ಲಕ್ಷಾಂತರ ರೂಪಾಯಿ ಕೀಳುತ್ತಿದ್ದ ರಘುನಾಥ ಗುರೂಜಿ ಜನರಿಗೆ ಔಷಧವೆಂದು ಕುಡಿಸುವುದು ಜುಜುಬಿ ನಿಂಬೆಪಾನಕ ಮಾತ್ರ!

ಆಗ ಪತ್ರಿಕೆಯ ವರದಿ ಗಮನಿಸಿದ್ದ ವಸಂತ ಕುಮಾರಿ ಎಂಬುವರು ಕಚೇರಿಗೆ ಬಂದು ತಮಗಾದ ಮೋಸದ ಬಗ್ಗೆ ಹೇಳಿಕೊಂಡಿದ್ದರು.

'ಲಂಕೇಶ್' ಈ ವಂಚಕನ ಬಗ್ಗೆ ಬಸವನಗುಡಿ ಪೊಲೀಸರಿಗೂ ಮಾಹಿತಿ ನೀಡಿತ್ತು. ಇದರಿಂದ ಬೆದರಿದ ಗುರೂಜಿ ಈಗ ವಸಂತ ಕುಮಾರಿಯವರಿಂದ ಕಿತ್ತಿದ್ದ ಒಂದು ಲಕ್ಷ ರೂ. ಹಣವನ್ನು ವಾಪಸ್ ನೀಡಿದ್ದಾನೆ.




ವಂಚಕ ರಘುನಾಥ ಗುರೂಜಿ




ಈ ನಡುವೆ ಹನುಮಂತನಗರದ ರಾಚಪ್ಪ ಎಂಬ ವಕೀಲರು 'ಟೆಂಪಲ್ ಆಫ್ ಸಕ್ಸಸ್'ನ ವಂಚನೆಗಳ ಬಗ್ಗೆ ಕೋರ್ಟ್‌ನಲ್ಲಿ 10 ಲಕ್ಷ ರೂ. ಪರಿಹಾರ ಕೇಳಿ ಕೇಸ್ ದಾಖಲಿಸಿದ್ದಾರೆ. (Case No.PCR 16380/2013, 2nd ACMM).

ರಾಚಪ್ಪನರಿಗೆ ಡಯಾಬಿಟಿಸ್ ಇತ್ತು, ಅದನ್ನು ವಾಸಿ ಮಾಡುವುದಾಗಿ ಗುರೂಜಿ ನಂಬಿಸಿ ಹಣ ಕಿತ್ತಿದ್ದಾನೆ. ಗುರೂಜಿಯ ನಿಂಬೆರಸ ಕುಡಿದು ಕುಡಿದು ರಾಚಪ್ಪನವರ ಶುಗರ್ ಜಾಸ್ತಿಯಾಗಿದ್ದಲ್ಲದೆ ಅವರಿಗೀಗ ಬಿಪಿ ಸಹ ಶುರುವಾಗಿದೆ.

ಜನಸಾಮಾನ್ಯರು ಈಗಲಾದರೂ ರಘುನಾಥ ಗುರೂಜಿಯ ವಂಚನೆಗಳನ್ನು ತಿಳಿಯಬೇಕಿದೆ. ಟೆಂಪಲ್ ಆಫ್ ಸಕ್ಸಸ್‌ನಿಂದ ಹಣ ಕಳೆದುಕೊಂಡವರು ಬಸವನಗುಡಿ ಪೊಲೀಸರಿಗೆ ದೂರು ನೀಡಿದರೆ ಈ ವಂಚಕನ ಕಳ್ಳಾಟ ಮುಗಿಯುವುದು ಖಚಿತ.



ಎಚ್.ಕೆ.ರಾಚಪ್ಪ



ಶೃತಿ ಬದುಕಲ್ಲಿ ಇನ್ನೆಷ್ಟು ಕಷ್ಟಗಳು

ತಿಂದ ಆಹಾರವೇ ವಿಷವಾಗಿ ಪರಿಣಮಿಸುವುದನ್ನು ...ವೈದ್ಯಕೀಯ ಪರಿಭಾಷೆಯಲ್ಲಿ ಫುಡ್‌ಪಾಯ್ಸನ್ ...ನ್ನಬಹುದಾದರೆ ನಂಬಿದ ಆಸಾಮಿಯೇ ವಿನಾಶಕ್ಕೆ ...ರಣನಾದರೆ ಏನೆನ್ನಬೇಕು?

ತಿಂದ ಆಹಾರ ವಿಷವಾಗುವುದಕ್ಕೂ, ನಂಬಿದ ...ದೀಮನೇ ಮುಳುವಾಗುವುದಕ್ಕೂ ಹೆಚ್ಚು ವ್ಯತ್ಯಾಸಗಳಿಲ್ಲ ...ಬ ಪಾಪ ಸತ್ಯ ನಟಿ ಶೃತಿ ಪಾಲಿಗೆ ತಡವಾಗಿಯಾದರೂ ...ರ್ಥವಾದಂತಿದೆ. ಇಲ್ಲದಿದ್ದರೆ ಪುಣ್ಯ ಆಸ್ಪತ್ರೆಯ ...ಟೋರಿಯಸ್ ಡಾಕ್ಟರಣಿಯ ಮುಂದೆ ನಿದ್ರಾ ಮಾತ್ರೆ ...ದಿದು ಅಂಗಾತ ಬಿದ್ದು ಒದ್ದಾಡಬೇಕಾದ ದುರ್ಗತಿ ...ಗೇಕೆ ಬರುತ್ತಿತ್ತು?

ಒಂದಲ್ಲ ಎರಡು ಬಾರಿ ಅದೇ ಚಂದ್ರಾಚಾರಿ ಜೊತೆ ...ದುವೆ, ಕದ್ದೂಮುಚ್ಚಿ ಮದುವೆಯಾಗಲು ಹೋಗಿ ...ಮಸ್ಥಿಂದ ಒದೆ, ತದನಂತರ ಚಂದ್ರಾಚಾರಿಯ ಮೊದಲ ...ತ್ನಿಯ ಪ್ರತಿಭಟನೆ, ಕೌಟುಂಬಿಕ ನ್ಯಾಯಾಲಯದಲ್ಲಿ ...ಮ ವಿವಾಹದ ಮೊಕದ್ದಮೆ, ಈ ಬಗ್ಗೆ ಟಿವಿ- ...ಾಧ್ಯಮಗಳಲ್ಲಾದ ರಗಳೆ ಇತ್ಯಾದಿಗಳೆಲ್ಲ ಇನ್ನೇನು ...ಗ್ಗಾಯಿತೆನ್ನುವಾಗಲೇ ಶೃತಿ ಆತ್ಮಹತ್ಯಾ ಯತ್ನದ ...ಕಾರೆದ್ದಿದೆ.

ಜುಲೈ 11ರ ಅಪರಾಹ್ನ ಬಸವೇಶ್ವನಗರದ ಕುಖ್ಯಾತ ...ಣ್ಯ ಆಸ್ಪತ್ರೆಗೆ ಶೃತಿ ದಾಖಲಾಗಿದ್ದರೆಂದೂ, ಆಸ್ಪತ್ರೆಗೆ ...ವಾಗಲೇ ಬಾಯಿಂದ ನೊರೆ ಬರುತ್ತಿತ್ತೆಂದೂ ಶೃತಿ ...ಷ್ಟೆ ನಿದ್ರಾ ಮಾತ್ರೆ ಸೇವಿಸಿದ್ದಾರೆಂದೂ ಟಿವಿಗಳಲ್ಲಿ ...ದ್ಧಿಯಾಗುತ್ತಿದ್ದಂತೆ... ಮೋರಿ ದಾಟಿದ ವೀರನಂತೆ ...ಪರದೆ ಮೇಲೆ ಪ್ರತ್ಯಕ್ಷನಾದವನು ಚಂದ್ರಾಚಾರಿ. ...ಥಾದ್ದೇನೂ ನಡೆದೇ ಇಲ್ಲ, ಶೃತಿಯವರಿಗೆ ...ಡ್‌ಪಾಯ್ಸನ್ನಾಗಿತ್ತು, ಅದಕ್ಕೇ ಆಸ್ಪತ್ರೆಗೆ ಸೇರಿಸಿದೀವಿ ...ದು ಚಂದ್ರಾಚಾರಿ ಡೈಲಾಗ್ ಹೊಡೆಯುತ್ತಿದ್ದ.

ಬಹುಶಃ ಶೃತಿ ತಂದೆಯೋ, ತಾಯಿಯೋ, ಅಣ್ಣನೋ ...ಹೇಳಿಕೆ ಕೊಟ್ಟಿದ್ದರೆ ಯಾರಾದರೂ ನಂಬುತ್ತಿದ್ದರೇನೊ. ...ದರೆ ತಲೆಹರಟೆಗಿಳಿದವನು ಹರಾಮೀ ಚಂದ್ರಾಚಾರಿ!

ಅನುಮಾನ ಬಂದ ಟಿವಿ ರಿಪೋರ್ಟರ್ ಒಬ್ಬ ...ವಾಗಿ ಪುಣ್ಯ ಆಸ್ಪತ್ರೆಯೊಳಕ್ಕೇ ಹೋಗಿ ಶೃತಿಯನ್ನು ...ತಾಡಿಸಿದರೆ ಆಕೆಯ ಬಾಯಿಂದ ಬಂದದ್ದು "ನನಗೆ ...ೋ ಬಿಪಿ' ಆಯ್ತು ಅದಕ್ಕೆ" ಎಂದು. ಇನ್ನೂ ಕೆಲ ...ದಿಗಾರರಿಗೆ ಚೆನ್ನೈನಿಂದ ಬರುವಾಗ ಡಾಬಾದಲ್ಲಿ ...ವದ್ದು ಫುಡ್ ಪಾಯ್ಸನ್ನಾಯಿತೆಂದೂ, ಶಿರಡಿಯಿಂದ ...ವಾಗ ಮಾಡಿದ ಊಟ ಯಡವಟ್ಟಾಯಿತೆಂದೂ, ...ಹತ್ಯೆ ಮಾಡಿಕೊಳ್ಳೋಕೆ ನಾನು ಹೇಡಿಯಲ್ಲವೆಂದೂ, ...ೇನೋ ಸರ್ಜರಿಗಳಾಗಿದ್ದರಿಂದ ಅದರ ಸೈಡ್ ...ಫೆಕ್ಟೆಂದೂ ಶೃತಿ ನೀಡಿದ ಹೇಳಿಕೆಗಳಲ್ಲೇ ...ೋಧಾಭಾಸವಿತ್ತು.

...ಲೋ ಬೀಪಿಯೋ ಆಗಿದ್ದರೆ ಚಂದ್ರಾಚಾರಿ ...ಡ್‌ಪಾಯ್ಸನ್ ಕತೆ ಹೊಡೆದಿದ್ದೇಕೆ? ಶಿರಡಿಯಿಂದ ...ವಾಗ ಊಟ ಮಾಡಿದ್ದು ಯಾವ ಡಾಬಾದಲ್ಲಿ? ಶಿರಡಿಗೆ ...ೋಗಿದ್ದು ಯಾವತ್ತು? ಜೊತೆಗೆ ಮಗಳು ಮಿಲಿ, ಗಂಡ ...ಚಂದ್ರಾಚಾರಿ, ಇಬ್ಬರು ತಾಯಂದಿರು, ಡ್ರೈವರ್ ಯಾರೇ ...ರೂ ಅವರ್‍ಯಾರಿಗೂ ಆಗದ ಫುಡ್‌ಪಾಯ್ಸನ್ ಶೃತಿಗೆ ...ತ್ರವೇ ಹೇಗಾದೀತು?

ಹಾಗೊಮ್ಮೆ ಶೃತಿ ಒಬ್ಬರೇ ಆ ಡಾಬಾದಲ್ಲಿ ಊಟ ...ಡಿದ್ದರೂ ಮಿಕ್ಕಂತೆ ಆವತ್ತು ಆ ಡಾಬಾದಲ್ಲಿ ಉಂಡ ...ಗಿರಾಕಿಗಳಿಗೂ ಫುಡ್ ಪಾಯ್ಸನ್ನಾದ ಸುದ್ದಿಯಿರಬೇಕಿತ್ತು, ... ಗಲಾಟೆ ಮಾಡಿದ ಸುದ್ದಿಯಾದರೂ ಬರಬೇಕಿತ್ತು.

... ವಿಪರ್‍ಯಾಸವೆಂದರೆ ತಾನು ಊಟ ಮಾಡಿದ್ದು ಯಾವ ಡಾಬಾದಲ್ಲಿ ಎಂಬುದನ್ನು ಕೂಡ ಬಿಡಿಸಿ ಹೇಳುವಷ್ಟು ಧೈರ್ಯ ಶೃತಿಗಿಲ್ಲ. ಆಕೆಯ ಮಾತುಗಳಲ್ಲೇ ಮುಚ್ಚೂಮರೆ ಅಡಗಿರುವುದು ಎಂಥವರಿಗೂ ಅರ್ಥವಾಗುತ್ತಿತ್ತು. ಈ ಮಧ್ಯೆ ಯಾರೂ ಗಮನಿಸದ ಸಂಗತಿಯೆಂದರೆ ಬಸವೇಶ್ವರನಗರದ ಶೃತಿಯ ಮನೆ ಎದುರಿಗೇ ಇರುವ ಡಾಕ್ಟರ್ ಜಯಣ್ಣನವರ ಪನೇಸಿಯಾ ಆಸ್ಪತ್ರೆಯನ್ನು ಬಿಟ್ಟು ದೂರದ ಪುಣ್ಯ ಆಸ್ಪತ್ರೆಗೆ ಶೃತಿ ದಾಖಲಾಗಿದ್ದೇಕೆ?

ಈ ಹಿಂದೆಲ್ಲ ಶೃತಿ ಚಿಕಿತ್ಸೆಗೆ ದಾಖಲಾಗುತ್ತಿದ್ದದ್ದು ಪನೇಸಿಯಾ ಆಸ್ಪತ್ರೆಯಲ್ಲಿ. ಹೇಳಿ ಕೇಳಿ ಅದು ಬಸವೇಶ್ವರನಗರ ಪೊಲೀಸ್ ಠಾಣೆಯ ವ್ಯಾಪ್ತಿಗೊಳಪಡುವ ಆಸ್ಪತ್ರೆ. ಅಂದರೆ ಬಸವೇಶ್ವರನಗರ ಪೊಲೀಸರನ್ನು ಹೊರಗಿಡುವ ಉದ್ದೇಶದಿಂದಲೇ ಅಷ್ಟೊಂದು ಸುಸಜ್ಜಿತವಲ್ಲದ, ಒಳ್ಳೆಯ ಹೆಸರಿಲ್ಲದ, ನಡುರಸ್ತೆಗೆ ಹೊಂದಿಕೊಂಡಂತೆ ಸದಾ ಗಿಜಿಗುಟ್ಟುವ, ಕಳಪೆ ದರ್ಜೆಯ ಪುಣ್ಯ ಆಸ್ಪತ್ರೆಗೆ ಶೃತಿಯವರನ್ನು ಸೇರಿಸಲಾಯ್ತೆ? ಅಥವಾ ಕಾಮಾಕ್ಷಿಪಾಳ್ಯ ಪೊಲೀಸರಿಗೂ ಪುಣ್ಯ ಆಸ್ಪತ್ರೆಯ ಮಾಲಿಕರಿಗೂ ಇರುವ ಪುರಾತನ ನೆಂಟಸ್ತಿಕೆಯನ್ನು ಬಳಸಿಕೊಳ್ಳುವ ಉದ್ದೇಶದಿಂದಲೇ ಶೃತಿಗೆ 'ಪುಣ್ಯ' ಪ್ರಾಪ್ತಿಯಾಗಿತ್ತೆ?

ಇಂಥ ಎಲ್ಲಾ ಅನುಮಾನ-ಗೊಂದಲಗಳೇ ಶೃತಿಗೇ ಫುಡ್‌ಪಾಯ್ಸನ್ ಅಥವಾ ಲೋ ಬೀಪಿಯ ಹೊರತಾದ ಇನ್ನೇನೋ ಆಗಿದೆಯೆಂಬುದನ್ನು ಸಾರಿ ಹೇಳುತ್ತಿತ್ತು. ಶೃತಿ ಮತ್ತು ಖದೀಮ ಚಂದ್ರಚೂಡ್ ನಡುವಿನ ಸಂಬಂಧಕ್ಕೆ ಯಾವುದೇ ಸದುದ್ದೇಶಗಳಿರಲಿಲ್ಲ. ಅಲ್ಲಿ ಪ್ರೀತಿಯಾಗಲಿ, ವಿಶ್ವಾಸವಾಗಲಿ ಇರಲಿಲ್ಲ. ಪ್ರೇಮವಿಲ್ಲದ ಸಂಬಂಧ ಬಹುಕಾಲ ಬಾಳುವುದಿಲ್ಲ. ಅಲ್ಲಿ ನಂಬಿಕೆ, ಮನುಷ್ಯತ್ವ, ವಿವೇಕ ಯಾವುದೂ ಇರುವುದಿಲ್ಲ.

ಮೊದಮೊದಲು ಯಾವುದೋ ದುರ್ಬಲ ಗಳಿಗೆಯಲ್ಲಿ ಚಂದ್ರಾಚಾರಿಯ ಬಲೆಗೆ ಬಿದ್ದ ಶೃತಿ ಕ್ರಮೇಣ ಅದರಿಂದ ಹೊರಬರಲಾಗದೆ ಪಟ್ಟ ಪಾಡು ಅಷ್ಟಿಷ್ಟಲ್ಲ. ಇದ್ದ ಗೌರವ ನೆಲಕಚ್ಚಿತು. ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷಗಿರಿಯೂ ಕೈತಪ್ಪಿತು. ಮಹೇಂದರ್‌ಗೆ 40 ಲಕ್ಷ ತೆತ್ತು ಜೈಲು ಪಾಲಾಗುವುದನ್ನು ತಪ್ಪಿಸಿಕೊಳ್ಳಬೇಕಾಯ್ತು. ಇನ್ನೇನು ವಿಚ್ಛೇದನ ಸಿಕ್ಕಿ ಅಧಿಕೃತವಾಗಿ ಮತ್ತೊಮ್ಮೆ ಚಂದ್ರಾಚಾರಿಯನ್ನು ಮದುವೆಯಾಗುವ ಒತ್ತಾಯಕ್ಕೆ ತಲೆ ಕೊಟ್ಟರೆ ಬೆಂಕಿಯಿಂದ ಬಾಣಲೆಗೆಂಬಂತೆ ಚಂದ್ರಾಚಾರಿಯ ಮೂಲ ಪತ್ನಿಯೇ ಕೋರ್ಟು ಕಟಕಟೆ ಹತ್ತಿದ್ದಳು. ವಂಚಕ ಚಂದ್ರಾಚಾರಿಯ ಕೈಹಿಡಿದಾಗಿನಿಂದಲೂ ಕಳಂಕ, ಕಂಟಕ, ತರಲೆ, ತಾಪತ್ರಯ ಬಿಟ್ಟರೆ ಶೃತಿ ಇನ್ನೊಂದನ್ನು ಕಂಡವಳಲ್ಲ.

ಯಾವತ್ತು ಚಂದ್ರಾಚಾರಿಯ ಮೊದಲ ಪತ್ನಿ ಮಂಜುಳಾ ಕೋರ್ಟಿಗೆ ದೂರಿತ್ತಳೋ ಶೃತಿಗೆ ಬೇರೆಯದೇ ಆತಂಕವೊಂದು ಶುರುವಾಗಿದೆ. ಇವತ್ತಲ್ಲಾ ನಾಳೆ 'ಇದು ಕಾನೂನು ಬಾಹಿರ ಸಂಬಂಧವೆಂಬುದು ಸಾಬೀತಾಗಲೇಬೇಕು. ಹಾಗೊಮ್ಮೆ ಸಾಬೀತಾಯಿತೆಂದರೆ ಚಂದ್ರಾಚಾರಿಯ ಸಮೇತ ಏಳು ವರ್ಷ ಜೈಲು ಗ್ಯಾರಂಟಿ!


ಶೃತಿ ಇಂಥ ಆತಂಕದಲ್ಲಿದ್ದಾಳೆಂಬುದನ್ನು ಸೂಕ್ಷ್ಮವಾಗಿ ಗಮನಿಸಿದ ಚಂದ್ರಚೂಡ್‌ನ ಪಾಖಂಡಿ ತಲೆ ಬೇರೆಯದೇ ಷಡ್ಯಂತ್ರ ಹೊಸೆಯಲಾರಂಭಿಸಿದೆ. ಹೇಗೂ ಶೃತಿಯ ಆಸ್ತಿ ಅಂತ ಬಸವೇಶ್ವರನಗರದ ಮನೆಯಿದೆ. ಅದರ ಪತ್ರ ಒತ್ತೆ ಇಟ್ಟು 25 ಲಕ್ಷ ಸಾಲ ಪಡೆದು ಅದನ್ನೇ ತನ್ನ ಪತ್ನಿ ಮಂಜುಳಾಗೆ ಪರಿಹಾರವಾಗಿ ಕೊಟ್ಟು ಕೈತೊಳೆದುಕೊಂಡರೆ ಜೈಲೂ ಬಚಾವು, ಕಾಟವೂ ತಪ್ಪಿದಂತೆ ಎಂದು ಚಂದ್ರಾಚಾರಿ ತಲೆ ಓಡಿಸಿದ್ದಾನೆ.

ಇತ್ತೀಚೆಗೆ ಚಂದ್ರಾಚಾರಿಯ ಓಡಾಟ, ಕಾರ್‍ಯಾಚರಣೆ ಗಮನಿಸಿದವರಿಗೆ ಆತ ಶೃತಿಯ ಬಸವೇಶ್ವರನಗರದ ಮನೆಪತ್ರದ ಜೆರಾಕ್ಸ್ ಹಿಡಕೊಂಡು ಒಂದೆರಡು ಬ್ಯಾಂಕುಗಳಿಗೆ ಹೋಗಿ ಬಂದಿದ್ದು ಗೊತ್ತಿರಬೇಕು. "ಜೈಲಿಗೆ ಹೋಗೋದು ನಾನೊಬ್ಬನೇ ಅಲ್ಲ, ನನ್ನ ಜೊತೆ ನೀನೂ ಜೈಲಿಗೆ ಬರಲೇಬೇಕು. ಈಗ ಮನೆ ಒತ್ತೆ ಇಟ್ಟು 25 ಲಕ್ಷ ಸಾಲ ಎತ್ತಿ ಅದನ್ನು ಮಂಜುಳಾಗೆ ಕೊಟ್ಟು ಹಾಕಿದ ಕೇಸು ವಾಪಸ್ಸಾಗುವಂತೆ ನೋಡಿಕೊಂಡರೆ, ಬೀಸೋ ದೊಣ್ಣೆ ತಪ್ಪಿದಂತೆಯೆ. ಸದ್ಯ ನನ್ನ ಬಳಿ ದುಡ್ಡಿಲ್ಲವಾದ್ದರಿಂದ ನನ್ನ ಜೊತೆ ನಿನ್ನನ್ನು ಜೈಲಿಗೆ ಕರೆದೊಯ್ಯಬಾರದು ಅಂತಲೇ ಈ ಏರ್ಪಾಟು" ಎಂದು ಶೃತಿಯನ್ನು ಪೀಡಿಸಲಾರಂಭಿಸಿದ್ದಾನೆ.


ಆದರೆ ಶೃತಿಗಿದು ಸರಿ ಬಂದಂತಿಲ್ಲ. "ಡೈವೋರ್ಸ್ ಆಗಿದೆ ಅಂತ ನೀನು ಹೇಳಿದ್ದನ್ನು ನಂಬಿ ನಾನು ಮೋಸ ಹೋದೆ. ಈಗ ನನ್ನ ಮನೆಯನ್ನೇ ಒತ್ತೆ ಇಟ್ಟು ನೀನು ಬಚಾವಾಗಲು ಯತ್ನಿಸುತ್ತಿದ್ದೀಯಾ? 25 ಲಕ್ಷ ಹೊಂಚೋ ಯೋಗ್ಯತೆ ನಿನಗಿಲ್ಲ ಅಂದರೆ ಅದಕ್ಕೆ ನನ್ನ ಮನೆ ಏಕೆ ಒತ್ತೆ ಇಡಬೇಕು?"

- ಇದು ಶೃತಿಯ ಸಿಟ್ಟಿನ ಮೂಲ.

ಇದಲ್ಲದೆ ಚಂದ್ರಾಚಾರಿಯಿಂದ ಮೋಸ ಹೋದವರು, ಕೆಪಿಎಸ್‌ಸಿಯಲ್ಲಿ ಕೆಲಸ ಕೊಡಿಸ್ತೀನಿ ಎಂದು ಚಂದ್ರಾಚಾರಿ ದುಡ್ಡು ಕಿತ್ತು ವಂಚನೆಗೀಡಾದವರೆಲ್ಲ ಆತನನ್ನು ಹುಡುಕಿಕೊಂಡು ಶೃತಿ ಮನೆ ಬಾಗಿಲು ಕಾಯಲಾರಂಭಿಸಿದ್ದಾರೆ. ಮಂಗಳಾ ಶ್ರೀಧರ್ ಎಂಬ ಬಿಜೆಪಿ



ಅಸಲೀ ಪತ್ನಿ ಜೊತೆ ಚಂದ್ರಾಚಾರಿ



ಬಸವೇಶ್ವರನಗರದ ಶೃತಿ ಬಂಗಲೆ

ನಾಯಕಿಗೆ ಪೂಸಿ ಹೊಡೆದು ಆಕೆಯ ಕೆಪಿಎಸ್‌ಸಿ ಕೋಟಾ ಅಡಿ ಕೆಲಸ ಕೊಡಿಸ್ತೀನಿ ಎಂದು ಚಂದ್ರಾಚಾರಿ ಆರು ಮಂದಿ ನಿರುದ್ಯೋಗಿಗಳಿಂದ ದುಡ್ಡು ಕಿತ್ತಿದ್ದ. ಲೋಕಸೇವಾ ಆಯೋಗದ ಹಗರಣದಲ್ಲಿ ಮಂಗಳಾ ಶ್ರೀಧರ್ ಹೆಸರು ಪ್ರಸ್ತಾಪವಾಗುತ್ತಿದ್ದಂತೆ ಆಕೆಯ ಪರವಾಗಿ 'ಡಾಲ್ಡಾ' ವರದಿಗಳು ಬರುವಂತೆ ನೋಡಿಕೊಂಡ.

ಇದು ಶೃತಿಗೆ ಗೊತ್ತಾಗಿದ್ದೇ ಮಂಗಳಾ ಶ್ರೀಧರ್‌ಗೂ ನಿನಗೂ ಎಂಥ ಸಂಬಂಧ? ಆಕೆಯ ಹೆಸರಲ್ಲಿ ಇಷ್ಟೊಂದು ಜನಕ್ಕೆ ಮೋಸ ಮಾಡಿದ್ದೀಯಲ್ಲ; ಆ ದುಡ್ಡನ್ನೇ ನಿನ್ನ ಮೊದಲ ಪತ್ನಿಗೆ ಕೊಟ್ಟು ಡೈವೋರ್ಸ್ ಪಡೆಯಬಹುದಲ್ಲ, ಅಷ್ಟೆಲ್ಲಾ ದುಡ್ಡು ಏನಾಯ್ತು? ಅದನ್ನು ಬಿಟ್ಟು ನನ್ನ ಮನೆ ಮೇಲೆ ಸಾಲ ಪಡೆಯೋ ನೀನು ಗಂಡಸಾ...? ಎಂದೆಲ್ಲಾ ಜಗಳವಾಗಿದೆ. ಇದು ವಿಕೋಪಕ್ಕೆ ಹೋಗಿದ್ದು ಜುಲೈ 11ರ ಗುರುವಾರ.

ಹಿಡಿ ತುಂಬ ನಿದ್ರೆ ಮಾತ್ರೆ ಹಿಡಕೊಂಡೇ ಬೆಡ್ ರೂಮ್ ಹೊಕ್ಕ ಶೃತಿ ಕಣ್ಣು ಬಿಡುವ ಹೊತ್ತಿಗೆ ಪುಣ್ಯ ಆಸ್ಪತ್ರೆಯಲ್ಲಿದ್ದಳು. ಯಾರ ಪುಣ್ಯವೋ ಗೊತ್ತಿಲ್ಲ, ಪ್ರಾಣಕ್ಕಂತೂ ಸದ್ಯ ಅಪಾಯವಿಲ್ಲ. ತಿಂದದ್ದು ಆಹಾರವಾದರೇನು ಚಂದ್ರಾಚಾರಿಯಂಥ ಆಸಾಮಿಯಾದರೇನು? ಅಲ್ಪನ ಸಂಗ ಯಾವತ್ತಿದ್ದರೂ ಅಭಿಮಾನ ಭಂಗವೆ!

ಅಂದ ಹಾಗೆ ಚೋರ ಚಂದ್ರಾಚಾರಿಗೆ ಇತ್ತೀಚೆಗೆ ಜೈಲಲ್ಲಿ ತಾನು ಮುದ್ದೆ ಮುರಿದಂತೆ, ಕಂಬಿ ಎಣಿಸಿದಂತೆ ಕನಸು ಬೀಳುತ್ತಿದೆಯಂತೆ. ಶೃತಿಯಂಥ ಮುಗ್ಧ ನಟಿಯನ್ನು ಬ್ಲ್ಯಾಕ್‌ಮೇಲ್ ಮಾಡಿಯೇ ಪಳಗಿಸಿಕೊಂಡ ಆತನ ಚಲನವಲನಗಳ ಮೇಲೆ ಕನಿಷ್ಠ ಮಹಿಳಾ ಆಯೋಗವಾದರೂ ಕಣ್ಣಿಡದಿದ್ದರೆ ಹೇಗೆ?

ಏಕೆಂದರೆ ಶೃತಿಯಂತ ನೂರೊಬ್ಬರ ಪಾಲಿಗೆ ಎಷ್ಟು ಮುಚ್ಚಿದ್ದರೂ ಚಂದ್ರಚೂಡನ ಬಲೆಗೆ ಬಿದ್ದ ಅಸಂಖ್ಯಾತ ಹೆಂಗಸರ ಮಾನವೂ ಅಷ್ಟೇ ಮುಖ್ಯ.

● ರಾ. ಸೋಮನಾಥ್

ಪುಣ್ಯ ಆಸ್ಪತ್ರೆಯ ಪುಣ್ಯಾತಗಿತ್ತಿಯ ವರಸೆ




ಡಾ. ಪುಣ್ಯವತಿ ನಾಗರಾಜ್

...ಎಂತೆಂಥದೋ ಆಸ್ಪತ್ರೆಗಳಿರುವಾಗ ಶೃತಿ ಅದನ್ನೆಲ್ಲ ಬಿಟ್ಟು 'ಪುಣ್ಯ'ದಂಥ ಡುಬಾಕೋರ್ ...ಖಾನೆಯನ್ನೇ ಆಯ್ಕೆ ಮಾಡಿಕೊಂಡಿದ್ದೇಕೆ? ಇದರರ್ಥ ಪುಣ್ಯ ಆಸ್ಪತ್ರೆಯ ಅಧಿನಾಯಕಿ ...ಪುಣ್ಯವತಿ ನಾಗರಾಜ್‌ಗೂ ಪಾಖಂಡಿ ಚಂದ್ರಾಚಾರಿಗೂ ...ದಲೇ ಮ್ಯಾಚ್ ಫಿಕ್ಸಿಂಗ್ ನಡೆದಿತ್ತೆ?



...ಡಾ. ಪುಣ್ಯವತಿ ನಾಗರಾಜ್ ಹಿನ್ನೆಲೆ, ಆಕೆ ...ರುಬರಹಳ್ಳಿಯಲ್ಲಿ ನಡೆಸುತ್ತಿದ್ದ ಪುಣ್ಯ ಹೆಸರಿನದ್ದೇ ಆಸ್ಪತ್ರೆಯ ...ದ್ದ ಕೇಳಿ ಬರುವ ಆರೋಪಗಳು, ಈ ಬಗ್ಗೆ ಪೊಲೀಸ್ ...ಣೆಗಳಲ್ಲಿ ದಾಖಲಾದ ದೂರುಗಳು ಇತ್ಯಾದಿಗಳನ್ನೆಲ್ಲ ...ಲಿಸಿದರೆ ಶೃತಿಯಂಥ ನಟಿಯೊಬ್ಬಳು ದಾಖಲಾಗುವಂಥ ...ಮ ಆಸ್ಪತ್ರೆಯಂತೂ ಅದಾಗಿರಲಿಲ್ಲ. ರೋಗ ವಾಸಿ ...ಬಿದ್ದಕ್ಕಿಂತಲೂ ರೋಗಿಯ ಜೇಬು ತೂಕ ಕಮ್ಮಿ ...ಮಾಡುವುದರಲ್ಲೇ ಪುಣ್ಯದ ವೈದ್ಯದ್ದು ಪಳಗಿದ ಕೈ. ಇಂತಿಂಥಾ ...ೋಗೆ ಇಂಥದ್ದೇ ಸಿದ್ಧಹಸ್ತ ವೈದ್ಯರಿರಬೇಕೆಂಬುದು ಬೇರಿಲ್ಲ. ಆಸ್ಪತ್ರೆಗಳ ವಾಡಿಕೆಯಾದರೆ ... ಪಾತ, ಎಲ್ಲಾ ವ್ಯಾಧಿಗೂ ಎಲ್ಲಾ ಥರದ ರೋಗಿಗಳಿಗೂ ಊರಿಗೊಬ್ಬಳೇ ಪುಣ್ಯವತಿ!

...ರೋಗ ವಾಸಿಯಾಗುವುದು ಹಾಗಿರಲಿ ಜೇಬು-ತಲೆ ಎರಡನ್ನೂ ಒಟ್ಟೊಟ್ಟಿಗೆ ...ಳಿಸಿಕೊಂಡ ರೋಗಿಗೆ ಹೊಸ ವ್ಯಾಧಿ ಬಡಿಯದಿದ್ದರೆ ಆತನ ಪುಣ್ಯ ಎಂಬ ...ಮಾತು ಸಾಕಷ್ಟು ಪ್ರಚಲಿತ. ಡಾ. ಪುಣ್ಯವತಿಯ ಅಣ್ಣನೊಬ್ಬ ಕೇಬಲ್ ದೊರೆ. ...ಅಣ್ಣ ಬಿಜೆಪಿ ಪುಢಾರಿ. ಏನೇ ಗಲಾಟೆಯಾದರೂ ಪೊಲೀಸರು ಲಾಡಿಗಳು ಒಟ್ಟೊಟ್ಟಿಗೆ ಪುಣ್ಯದ ಕಾವಲಿಗಿಳಿಯುತ್ತಾರೆ. ಅದು ಡಾ. ಪುಣ್ಯವತಿಯ ಪುಣ್ಯ. ಕುರುಬರಹಳ್ಳಿಯಲ್ಲಿ ಆಸ್ಪತ್ರೆಯಿದ್ದೂ ಇತ್ತೀಚೆಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹೊಸದೊಂದು ಶಾಖೆ ತೆರೆದು ಅದಕ್ಕೆ ಶೃತಿಯಂಥ ನಟಿ ಬರುವಂತೆ ನೋಡಿಕೊಂಡ 'ಪುಣ್ಯಾತಗಿತ್ತಿ' ಮಾತಿಗೆ ಮೊದಲೇ ಟಿವಿ ಕ್ಯಾಮರಾಗಳಿಗೆ ಪೋಸು ಕೊಟ್ಟು 'ಅಂಥಾದ್ದೇನೂ ಇಲ್ಲ, ಅದು ಕೇವಲ ಫುಡ್ ಪಾಯ್ಸನ್ನು' ಎಂದು ಆಣೆ ಪ್ರಮಾಣ ಮಾಡುತ್ತಿದ್ದಾರೆಂದರೆ ಅದರರ್ಥ ಏನು?



ಬಾರ್ ಕೃಷ್ಣಪ್ಪ

ದುಡ್ಡು, ರೇಸ್‌ಕಾರು, ಡ್ರಿಂಕು, ರಕ್ತ!

ಬಾರ್ ಕೃಷ್ಣಪ್ಪನ ಕಾರ್ ನರಮೇಧ

ಒಂದಲ್ಲ ಎರಡಲ್ಲ ಬಲಿಯಾದ ಜೀವಿಗಳ ಒಟ್ಟೂ ಸಂಖ್ಯೆ ನಾಲ್ಕು. ಸಾಯದೆ ಆಸ್ಪತ್ರೆಯಲ್ಲಿ ನರಳುತ್ತಿರುವವರ ಪಾಡಿದೆಯಲ್ಲ ಅದು ಬರಬಾರದ ನರಕಯಾತನೆ. ಒಬ್ಬನಿಗೆ ಒಂದು ಕಾಲೇ ಇಲ್ಲ, ಮತ್ತೊಬ್ಬನಿಗೆ ಮುರಿದ ಬೆನ್ನು ಮೂಳೆಯಿಂದಾಗಿ ಜೀವನ ಪರ್ಯಂತಹಾಸಿಗೆ ಬಿಟ್ಟೇಳುವಂತಿಲ್ಲ, ಇನ್ನೊಬ್ಬಾಕೆಯ ಪಕ್ಕೆಲುಬೇ ಮುರಿದು ಹೋಗಿದೆ. ಮಗದೊಬ್ಬನ ತಲೆಗೆ ಬಿದ್ದ ಪೆಟ್ಟಿನಿಂದಾಗಿ ಪ್ರಜ್ಞೆ ಬರುವ ಯಾವುದೇ ಲಕ್ಷಣವಿಲ್ಲ, ಅಂದರೆ ಕೋಮಾಸ್ಥಿತಿಯಿಂದ ಆತ ಸದ್ಯ ಹೊರಬರಲಾರ.

ಹೀಗೆ ಒಂದೇ ಏಟಿಗೆ ಬರೋಬ್ಬರಿ ನಾಲ್ಕು ಹೆಣಗಳನ್ನು ಬೀಳಿಸಿ ಎಂಟು ಮಂದಿಯನ್ನು ತಿಂಗಳಾನುಗಟ್ಟಲೆ ಆಸ್ಪತ್ರೆಯಲ್ಲಿ ನರಳುವಂತೆ ಮಾಡಿರುವುದು ಯಾವುದೇ ಗ್ಯಾಂಗ್‌ವಾರ್, ಭೂಕಂಪ, ಕಟ್ಟಡ ಕುಸಿತ, ಕಾಲ್ತುಳಿತವಾಗಲಿ ಅಲ್ಲ, ಅದು ಬೊಮ್ಮನಹಳ್ಳಿ ಸಿಎಂಸಿಯ ಮಾಜಿ ಅಧ್ಯಕ್ಷ, ಹಾಲಿ ಶಾಸಕ ಸತೀಶ್ ರೆಡ್ಡಿಯ ಕಟ್ಟಾ ಬೆಂಬಲಿಗ ಮತ್ತು ಮಾಜಿ ಡಿಸಿಎಂ ಆರ್.ಅಶೋಕ್‌ರ ನಂಬಿಕಸ್ತ ಅನುಯಾಯಿ ಬಾರ್ ಕೃಷ್ಣಪ್ಪನ ಐಷಾರಾಮೀ ಲ್ಯಾಂಡ್ ರೋವರ್ ಕಾರು!

ಒಂದು ಸಣ್ಣ ಯಡವಟ್ಟು ಎಷ್ಟೆಲ್ಲಾ ಮನೆ ದೀಪಗಳನ್ನು ಶಾಶ್ವತವಾಗಿ ನಂದಿಸಿ ಬಿಡುತ್ತದೆ ಎಂಬುದಕ್ಕೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಭಯಾನಕ ಆಕ್ಸಿಡೆಂಟುಗಳೇ ಬೇಕಾಬಿಟ್ಟಿ ಪುರಾವೆ ಕಲ್ಪಿಸುತ್ತವೆ. ಹೆದ್ದಾರಿಗಳಲ್ಲಿನ ಅಪಘಾತದ ಪರಿಣಾಮವಾಗಿ ಇಡೀ ಕುಟುಂಬ ಮಸಣದ ಪಾಲಾದ ಅದೆಷ್ಟು ನಿದರ್ಶನಗಳಿಲ್ಲ, ಬಸ್ಸಿಗೆ ಬಸ್ಸೇ ಕೆರೆಗೆ ಬಿದ್ದು ಡಜನ್ನುಗಟ್ಟಲೇ ಪ್ರಯಾಣಿಕರು ನೀರು ಪಾಲಾದದ್ದೂ ಇದೆ. ಲಾರಿ ಮುಗುಚಿ ಬಿದ್ದು ಹತ್ತಾರು ಹೆಣ ಬಿದ್ದದ್ದೂ ಇದೆ. ಆದರೆ ರೊಕ್ಕಸ್ಥ ಶೋಕಿಲಾಲರು ಮತ್ತವರ ಲಂಪಟ ಮಕ್ಕಳ ರೇಸ್ ಕಾರುಗಳ; ಖಯಾಲಿಯಿಂದಾಗಿ ಬೆಂಗಳೂರಿನಲ್ಲಿ ಹೊಸದೊಂದು ಪಿಡುಗು ತಲೆ ಎತ್ತಿದೆ.

ರೇಸ್‌ಕಾರ್ ಶೋಕಿ

ಅದು ರೇಸ್ ಕಾರುಗಳ ಹುಚ್ಚು ಮತ್ತು ಕಂಠಮಟ್ಟ ಕುಡಿದು ಕಾರ್ ಓಡಿಸಲು ಹೋಗಿ ಮುಗ್ಧ ದಾರಿ ಹೋಕರನ್ನು ಬಲಿಪಶುವಾಗಿಸುವ ವಿಕೃತಿ. ಇಲ್ಲಿಗೆ ತಿಂಗಳ ಹಿಂದಷ್ಟೇ ಅಂದರೆ 2013ರ ಜೂನ್ 2 ರಂದು ಇಂದಿರಾನಗರದ ರಿಯಲ್ ಎಸ್ಟೇಟ್ ದೊರೆ ಲೋಕೇಶ್ ರೆಡ್ಡಿ ಎಂಬಾತನ ಮಗ ರಾಜೇಶ್ ರೆಡ್ಡಿ ತನ್ನ ಆಡಿ ಕಾರಿನಲ್ಲಿ ಕೂತು ವೇಗವಾಗಿ ಎಂ.ಜಿ. ರಸ್ತೆಗೆ ಕಾರು ನುಗ್ಗಿಸಿದ್ದೇ ನಿಷ್ಪಾಪಿ ಆಟೋ ಚಾಲಕನೊಬ್ಬನನ್ನು ಬಲಿಪಡೆದು ಇನ್ನಿಬ್ಬರನ್ನು ಅರೆಜೀವ ಮಾಡಿದ್ದ. ಇದಾದ ನಂತರ ಅಂದರೆ ಜೂನ್ 7 ರಂದು ಆರು ಮಂದಿ ಪುಂಡರ ಗುಂಪೊಂದು ರಾತ್ರಿ ಗಸ್ತಿನಲ್ಲಿದ್ದ ಪೊಲೀಸರನ್ನು ಕಂಡಿದ್ದೇ ತಾವು ಕುಡಿದು ಕಾರ್ ಓಡಿಸುತ್ತಿದ್ದದ್ದು ಎಲ್ಲಿ ಬಯಲಾಗುತ್ತೋ ಎಂದು ವೇಗವಾಗಿ ಲಾಲ್‌ಬಾಗ್‌ನೊಳಕ್ಕೇ ಕಾರು ನುಗ್ಗಿಸಿತು. ಐತಿಹಾಸಿಕ ಗಾಜಿನ ಮನೆಗೇ ನುಗ್ಗಿದ ಕಾರು ಮಾಡಿದ ಅನಾಹುತವೇನೂ ಕಮ್ಮಿಯಿರಲಿಲ್ಲ.

ಇದಕ್ಕೂ ತಿಂಗಳ ಮುನ್ನ ಅಂದರೆ 2013ರ ಮೇ 5 ರಂದು 25ರ ಶ್ರೀಮಂತ ಯುವಕನೊಬ್ಬ ಹೊಸೂರು ರಸ್ತೆಯ ಬೇಗೂರು ಜಂಕ್ಷನ್‌ನ ಫ್ಲೈ ಓವರ್ ಮೇಲೆಯೇ ತನ್ನ ರೇಸ್ ಕಾರನ್ನು ನುಗ್ಗಿಸಿ ಇಬ್ಬರು ದಾರಿಹೋಕರನ್ನು ಕೊಂದು ಮೂವರು ಅಮಾಯಕರನ್ನು ಗಾಯಗೊಳಿಸಿದ್ದ. ಇದಕ್ಕೂ ತಿಂಗಳ ಹಿಂದೆ ಮೂವರು ವಿದ್ಯಾರ್ಥಿಗಳು ಅದೇ ಹೊಸೂರು ರಸ್ತೆಯಲ್ಲಿ ಸ್ಕಾರ್ಪಿಯೋ ಗಾಡಿಯಲ್ಲಿ ಹೋಗುತ್ತಿದ್ದಾಗ ಲಾರಿಗೆ ಗುದ್ದಿದ ಫಲವಾಗಿ ಮೂವರೂ ಸ್ಥಳದಲ್ಲೇ ಹೆಣವಾದರು.

ಪ್ರತಿನಿತ್ಯ ಇಂಥ ಕಾರ್ ಶೋಕಿಯ ಆಕ್ಸಿಡೆಂಟುಗಳೂ, ಅಸಂಬಂಧ ಸಾವುಗಳು ಬೇಕಾಬಿಟ್ಟಿ ಸುದ್ದಿಯಾಗುತ್ತಿರುವಾಗಲೇ ಇದೆಲ್ಲದರ ಪರಮಾವಧಿಯಂತೆ ಇದೇ ಜುಲೈ 15ರ ದುರಂತ ಸಂಭವಿಸಿದೆ. ಈ ಬಾರಿ ನಾಲ್ಕು ಹೆಣ ಕೆಡವಿ ಎಂಟು ಮಂದಿ ದಾರಿ ಹೋಕರನ್ನು ಆಸ್ಪತ್ರೆ ಪಾಲು ಮಾಡಿದವನು ಬೊಮ್ಮನಹಳ್ಳಿ ಸಿಎಂಸಿಯ ಮಾಜಿ ಅಧ್ಯಕ್ಷ ಕೃಷ್ಣಪ್ಪ, ವಯಸ್ಸು ಐವತ್ತು ದಾಟಿದ್ದರೂ ಈತನಿಗೆ ರೇಸ್ ಕಾರಿನ ಹುಚ್ಚು!

ಜುಲೈ 15 ರ ಸೋಮವಾರ ರಾತ್ರಿಯ ಆಕ್ಸಿಡೆಂಟ್‌ನ ವಿವರಗಳು ನಿಜಕ್ಕೂ ಭಯಾನಕ. ರಾತ್ರಿ 10 ಗಂಟೆ ಸುಮಾರಿಗೆ ಪರಪ್ಪನ ಅಗ್ರಹಾರ ಸಮೀಪದ ಚನ್ನಕೇಶವ ನಗರದ ತನ್ನ ಮನೆಯಿಂದ ಐಷಾರಾಮಿ ಲ್ಯಾಂಡ್ ರೋವರ್







ಕಾರಿನಲ್ಲಿ ಪರಪ್ಪನ ಅಗ್ರಹಾರದ ಹೊಸ ರೋಡಿನತ್ತ ಬಂದ ಮಾಜಿ ಸಿಎಂಸಿ ಅಧ್ಯಕ್ಷ ಬಾರ್ ಕೃಷ್ಣಪ್ಪ ಇನ್ನೇನು ಪರಪ್ಪನ ಅಗ್ರಹಾರ ಜಂಕ್ಷನ್ನಿನತ್ತ ಕಾರನ್ನು ನುಗ್ಗಿಸಬೇಕು. ಅಷ್ಟೇ, ಇದ್ದಕ್ಕಿದ್ದಂತೆ ಯಮವೇಗದಿಂದ ಕಾರು ಆರ್ಭಟಿಸಿದೆ. ಅದೇನಾಯಿತೋ, ಏಕಾಏಕಿ ಫುಟ್‌ಪಾತಿಗೆ ನುಗ್ಗಿದ ಲ್ಯಾಂಡ್‌ರೋವರ್ ತಳ್ಳು ಗಾಡಿಗಳು, ತರಕಾರಿ ಅಂಗಡಿಗಳು, ದಾರಿ ಹೋಕರು, ತರಕಾರಿ ಕೊಳ್ಳುತ್ತಿದ್ದವರು, ತಳ್ಳು ಗಾಡಿ ವರ್ತಕರನ್ನೆಲ್ಲ ತರಗೆಲೆಗಳಂತೆ ತೂರಾಡಿಕೊಂಡು ನುಗ್ಗಿದೆ.

ಬಿದ್ದ ಹೆಣಗಳು

ಪರಪ್ಪನ ಅಗ್ರಹಾರದ ಹೊಸ ರೋಡ್ ಜಂಕ್ಷನ್ನಿನಲ್ಲಿ ಸೋಮವಾರ ರಾತ್ರಿ ನಡೆದ ಆಕ್ಸಿಡೆಂಟ್ ಅದೆಷ್ಟು ಭಯಾನಕವಾಗಿತ್ತೆಂದರೆ; ಇದ್ದಕ್ಕಿದ್ದಂತೆ ಫುಟ್‌ಪಾತಿಗೆ ನುಗ್ಗಿದ ಲ್ಯಾಂಡ್‌ರೋವರ್ ಬರೋಬ್ಬರಿ 100 ಕಿ.ಮೀ. ವೇಗದಲ್ಲಿ ನುಗ್ಗಿ ಬಂದಿತ್ತು, ಮಗನ ಮದುವೆಯ ಆಮಂತ್ರಣ ನೀಡಲೆಂದು ಸೇಲಂನಿಂದ ಬಂದಿದ್ದ ಜನಕರಾಜು ಮತ್ತಾತನ ಪತ್ನಿ ಪುಷ್ಪರಾಣಿ ಜೊತೆಗೆ ಇಂದ್ರಾಣಿ ಎಂಬ 40 ರ ಹೆಂಗಸೂ ನಡೆದು ಬರುತ್ತಿದ್ದರೆ ನುಗ್ಗಿ ಬಂದ ಲ್ಯಾಂಡ್‌ರೋವರ್ ಗುದ್ದಿದ ಫಲವಾಗಿ ಇಂದ್ರಾಣಿ ದೇಹ ಮೇಲಕ್ಕೆ ಹಾರಿ ಬಿದ್ದಿತ್ತು, ಜೊತೆಗಿದ್ದ ಪುಷ್ಪರಾಣಿಯ ಮೇಲೆಯೇ ಕಾರು ಹರಿದಿತ್ತು, ಇಂದ್ರಾಣಿ ಮತ್ತು ಪುಷ್ಪರಾಣಿ ಸ್ಥಳದಲ್ಲೇ ಮಾಂಸದ ಮುದ್ದೆಯಂತಾದರೆ, ಜೊತೆಗಿದ್ದ ಜನಕರಾಜ್‌ನ ಬೆನ್ನು ಮೂಳೆಯೇ ಮುರಿದು ಹೋಗಿತ್ತು.

ಹಾಗೇ ನುಗ್ಗಿದ ಲ್ಯಾಂಡ್‌ರೋವರ್ ಫುಟ್‌ಪಾತ್‌ನ ಐದಕ್ಕೂ ಅಧಿಕ ತಳ್ಳುಗಾಡಿಗಳನ್ನು ಚಿಂದಿಯೆಬ್ಬಿಸುತ್ತಿದ್ದಂತೆಯೇ ತಳ್ಳುಗಾಡಿಯಲ್ಲಿ ತರಕಾರಿ ಮಾರಿಕೊಂಡಿದ್ದ ವಿಜಯ್‌ಕುಮಾರ್‌ಗೆ ಗುದ್ದಿದೆ. ಆ ನಂತರ ಮತ್ತೊಬ್ಬ ತರಕಾರಿ ವ್ಯಾಪಾರಿ ರಾಜಾ ನಾಯಕ್‌ನ ಮೇಲೆ ಹರಿದಿದೆ. ವಿಜಯ್‌ಕುಮಾರ್ ಅಲ್ಲೇ ಹೆಣವಾದರೆ ರಾಜಾನಾಯಕ್ ಆಸ್ಪತ್ರೆಗೆ ಸಾಗಿಸುವ ಮಧ್ಯೆಯೇ ಶವವಾಗಿದ್ದ.

ಕಾರಿನ ವೇಗಕ್ಕೆ ಪಕ್ಕದ ಚನ್ನಕೇಶವ ಇಂಗ್ಲೀಷ್ ಕಾನ್ವೆಂಟ್‌ನ ಕಾಂಪೌಂಡ್ ಗೋಡೆಯೇ ಚಿಂದಿಯಾಗಿತ್ತು, ಕಾರಿಗೆ ಸಿಕ್ಕಿದ ತಳ್ಳುಗಾಡಿಗಳೆಲ್ಲ ಪುಡಿಯಾಗಿದ್ದವು. ರಸ್ತೆಯುದ್ದಕ್ಕೂ ಚೆಲ್ಲಾಪಿಲ್ಲಿಯಾಗಿ ಬಿದ್ದ ತರಕಾರಿಗಳ ರಾಶಿ, ಅವುಗಳ ಮಧ್ಯೆ ಮನುಷ್ಯರ ರಕ್ತ ಗುದ್ದಿದ ರಭಸಕ್ಕೆ ಮರದ ತೊಗಟೆಗಳೇ ಚಿಪ್ಪಿನಂತೆ ಕಿತ್ತು ಬಂದಿದ್ದ ಭೀಕರ; ಇತ್ಯಾದಿಗಳೆಲ್ಲ ದೃಶ್ಯ ಯುದ್ಧದ ಸನ್ನಿವೇಶವನ್ನೇ ಸೃಷ್ಟಿಸಿತ್ತು.

ಕಾರಿಗೆ ಸಿಲುಕಿದ ಇಂದ್ರಾಣಿಯ ಸಂಬಂಧಿ ಗೋವಿಂದರಾಜುವಿನ ಒಂದು ಕಾಲೇ ತುಂಡಾಗಿತ್ತು, ರಾಜಾನಾಯಕ್‌ನ ಸಂಬಂಧಿ ಹರೀಶ್‌ನ ತಲೆಗೆ ಬಿದ್ದ ಏಟಿನಿಂದಾಗಿ ರಸ್ತೆಯಲ್ಲಿ ಅರೆಜೀವವಾಗಿ ಬಿದ್ದಿದ್ದ. ಚಿತ್ರಾ ಎಂಬ ಹೆಂಗಸಿನ ಪಕ್ಕೆಲುಬು ಮುರಿದರೆ ಪವನ್ ಎಂಬ ಆಕೆಯ ಆರರ ಮಗುವಿನ ಕೈ ಮುರಿದು ಹೋಗಿತ್ತು, ಮಾನ್ಯ ಎಂಬ ಮೂರು ವರ್ಷದ ಹಸುಳೆಯ ಬೆನ್ನಿನ ಚರ್ಮ ಕಿತ್ತು ಬಂದರೆ 44ರ ಲಲಿತಮ್ಮ, 45ರ ಮಲ್ಲೇಶ್, 26ರ ರೇಖಾ, 26ರ ರಾಜೇಶ್. ಹೀಗೆ ಕಾರಿಗೆ ಸಿಲುಕಿ ಗಾಯಗೊಂಡವರು, ಸತ್ತವರ ಸಂಬಂಧಿಗಳು, ಅವರ ರಕ್ತಸಿಕ್ತ ದೇಹ, ಸಂಬಂಧಿಗಳ ಆರ್ತನಾದ ಎಲ್ಲವೂ ಸೇರಿಕೊಂಡು ಅರೆಕ್ಷಣದಲ್ಲೇ ಹೊಸರೋಡ್ ಜಂಕ್ಷನ್‌ನನ್ನು ಸ್ಮಶಾನ ಸದೃಶವಾಗಿಸಿತ್ತು.

ಆರಾಮ ನಡೆದು ಹೋದ

ಇಷ್ಟೆಲ್ಲ ಅನಾಹುತ ಮಾಡಿದ ತಿಳಿಹಸಿರು ಬಣ್ಣದ ಲ್ಯಾಂಡ್‌ರೋವರ್ SUV ಅಂದರೆ Sports Utility Vehicle ಶಾಲೆಯ ಕಾಂಪೌಂಡ್ ಗೋಡೆ ಚಿಂದಿಯೆಬ್ಬಿಸಿದ್ದೇ ಆನಂತರ ಮರವೊಂದಕ್ಕೆ ಡಿಕ್ಕಿ ಹೊಡೆದು ನಿಂತಿತ್ತು, ಕಾರಿನ ಎಡಭಾಗದ ಮುಂಭಾಗ ಪೂರ್ತಿ ನುಜ್ಜಾಗಿತ್ತು, ಹಾಗೆ ನಿಂತ ಕಾರಿನಿಂದ ಬಿಳಿ ಶರ್ಟು ಕರಿಪ್ಯಾಂಟು ಹಾಕಿದ್ದ ಕುಡಿದು ತೂರಾಡುತ್ತಿದ್ದ ಐವತ್ತರ ಆಸುಪಾಸಿನ ವ್ಯಕ್ತಿಯೊಬ್ಬ ಅಂಥಾದ್ದೇನೂ ನಡೆದೇ ಇಲ್ಲ ಎಂಬಂತೆ ಬ್ರೀಫ್‌ಕೇಸೊಂದನ್ನು ಹಿಡಿದು ಆರಾಮವಾಗಿ ನಡೆದು ಹೋಗುತ್ತಿದ್ದರೆ ಇತ್ತ ಫುಟ್‌ಪಾತಿನಲ್ಲಿ ಬಿದ್ದ ಹೆಣಗಳ ಮುಂದೆ ಸತ್ತವರ ಸಂಬಂಧಿಗಳ ಆಕ್ರಂಧನ, ಆರ್ತನಾದ ಮುಗಿಲು ಮುಟ್ಟಿತ್ತು.

ಅದು KA-05 MD-9394 ನಂಬರಿನ ಹೊಚ್ಚ ಹೊಸ ಲ್ಯಾಂಡ್‌ರೋವರ್. ಅದರ ಮೇಲೆ ಮಾಜಿ ಅಧ್ಯಕ್ಷರು ಬೊಮ್ಮನಹಳ್ಳಿ ನಗರಸಭೆ ಎಂಬ ಹಸಿರು ಬಣ್ಣದ ಫಲಕವಿತ್ತು, ಹಾಗೇ ಏನೂ ನಡೆದೇ ಇಲ್ಲ ಎಂಬಂತೆ ಆರಾಮವಾಗಿ ನಡೆದು ಹೋದವನೇ ಹೊಸೂರು ರಸ್ತೆಯ ನಟೋರಿಯಸ್ ರಿಯಲ್ ಎಸ್ಟೇಟ್ ದೊರೆ ಬೊಮ್ಮನಹಳ್ಳಿ ಮಾಜಿ ಸಿಎಂಸಿ ಅಧ್ಯಕ್ಷ ಬಾರ್ ಕೃಷ್ಣಪ್ಪ!

ಪಾಪದ ದುಡ್ಡು ಅಪಾತ್ರ ಅಧಿಕಾರ, ಶೋಕಿ, ಮೋಜು ಮಸ್ತಿಗೆ ತಕ್ಕಂಥ ಕಾರ್ ಶೋಕಿ ಇತ್ಯಾದಿಗಳೆಲ್ಲ ಹೇಗೆ ಬೆಂಗಳೂರಿನ ರಸ್ತೆಗಳಲ್ಲಿ ರಕ್ತ ಹರಿಸುತ್ತವೆ ಎಂಬುದಕ್ಕೆ ಬಾರ್ ಕೃಷ್ಣಪ್ಪನಿಗಿಂತ ಬೇರೆ ಉದಾಹರಣೆ ಬೇಕಿಲ್ಲ.

2002ರಲ್ಲಿ ಬೊಮ್ಮನಹಳ್ಳಿ ಸಿಎಂಸಿಗೆ ಅಧ್ಯಕ್ಷನಾಗಿದ್ದ ಬಾರ್ ಕೃಷ್ಣಪ್ಪ ಬೆಳೆದು ಬಂದ ರೀತಿ, ಮಾಡಿದ ಅನಾಚಾರ ಈತನ ವಿಕೃತಿಗಳೇ ನಡೆದ ಆಕ್ಸಿಡೆಂಟಿಗೆ ಕಾರಣಗಳಾಗಿದ್ದವು. 1990ರ ಹೊತ್ತಿಗೆ ಯಕಃಶ್ಚಿತ್ ಕೂಲಿಯಾಗಿದ್ದ ಕೃಷ್ಣಪ್ಪ ಕ್ರಮೇಣ ಕೂಡ್ಲುಗೇಟ್‌ನ ನರಸಿಂಹ ಟಾಕೀಸ್‌ನಲ್ಲಿ ಪಾರ್ಕಿಂಗ್ ಟೋಕನ್ ಹರಿಯಲು ನಿಂತ. ಅಂದು ಸಿನಿಮಾಕ್ಕೆಂದು ಬಂದವರ ವಾಹನ ಕಾಯುವುದು 1993ರಲ್ಲಿ ಲ್ಯಾಂಡ್ ಬೂಮ್ ಶುರುವಾಗಿದ್ದೇ ಕೃ

ಮೊದಲ ಪತ್ನಿಯ ಮಗನೂ ಹೆಣವಾದನೆ?

ಬಾರ್ ಕೃಷ್ಣಪ್ಪನ ವಿಕೃತಿ ಮತ್ತು ಶೋಕಿ ಬಲ್ಲವರೇ ಹೇಳುವಂತೆ ನಾರಾಯಣಮ್ಮ ಎಂಬಾಕೆಗೂ ಮೊದಲು ಆತನಿಗೆ ಮುನಿಯಮ್ಮ ಎಂಬ ಹೆಂಡತಿಯಿದ್ದಳು. ಆಕೆಗೊಬ್ಬ ಮಗನೂ ಇದ್ದ. ಇಷ್ಟೆಲ್ಲ ದುಡ್ಡು ದುಡಿದು, ಸಿಎಂಸಿ ಅಧ್ಯಕ್ಷನಾದರೂ ಕೃಷ್ಣಪ್ಪ ತನ್ನ ಹೆತ್ತ ತಾಯಿಗೆ ನಯಾ ಪೈಸೆ ನೆರವಾದವನಲ್ಲ, ಆತನ ತಾಯಿ ಇವತ್ತಿಗೂ ಪರಪ್ಪನ ಅಗ್ರಹಾರದ ಸುತ್ತಮುತ್ತ ಕೂಲಿ ನಾಲಿಯಲ್ಲೇ ಬದುಕುತ್ತಿದ್ದಾಳೆ!


ಕೃಷ್ಣಪ್ಪನ ಇಬ್ಬರು ತಮ್ಮಂದಿರ ಪೈಕಿ ಒಬ್ಬ ಸಂಭಾವಿತ. ತಾನಾಯಿತು ತನ್ನ ಪಾಡಾಯಿತು ಎಂಬಂತಿದ್ದಾನೆ. ಆದರೆ ಕೊನೆಯ ತಮ್ಮನಿಗೆ ಅಣ್ಣ ಮಾಡಿದ ವಂಚನೆಯಿಂದಾಗಿಯೇ ಹುಚ್ಚು ಹಿಡಿದಿದೆ. ಇದ್ದಬದ್ದ ಆಸ್ತಿಯನ್ನೆಲ್ಲ ತಾನೇ ನುಂಗಿ ಹಾಕಿದ ಕೃಷ್ಣಪ್ಪನಿಂದಾಗಿ ಆತನ ತಮ್ಮ ಇವತ್ತಿಗೂ ಅರೆ ಹುಚ್ಚನಂತೆ ಬೀದಿ ಬೀದಿ ಅಲೆಯುತ್ತಿದ್ದಾನೆ.

ಸದ್ಯ ನಾರಾಯಣಮ್ಮನನ್ನು ತನ್ನ ಪತ್ನಿ ಎಂದು ಕೃಷ್ಣಪ್ಪ ಹೇಳಿಕೊಳ್ಳುತ್ತಾನಾದರೂ ಆತನ ಸಂಬಂಧಿಕರೇ ಹೇಳುವಂತೆ ಆಕೆ ಅಧಿಕೃತವಾಗಿ ಮದುವೆಯಾದವಳಲ್ಲ, ಕೃಷ್ಣಪ್ಪನ ವಿಕೃತಿ, ಹಿಂಸೆ ಕಂಡೆ ಮೊದಲ ಪತ್ನಿ ಮುನಿಯಮ್ಮ ಪರಾರಿಯಾಗಿ ಸದ್ಯ ಬೇರೆ ಯಾರನ್ನೋ ಮದುವೆಯಾಗಿ ಮಡಿವಾಳದಲ್ಲಿದ್ದಾಳೆ. ಆದರೆ ಆಕೆಗೊಬ್ಬ ಮಗನಿದ್ದನಲ್ಲ; ಆತ ಎಲ್ಲಿದ್ದಾನೆ ವಿಷಾದ- ಯಾರಿಗೂ ಗೊತ್ತಿಲ್ಲ.

ಕೃಷ್ಣಪ್ಪನ ಸಂಬಂಧಿಗಳು ಈ ಬಗ್ಗೆ ಧಾರುಣ ವೃತ್ತಾಂತವೊಂದನ್ನು ತೆರೆದಿಡುತ್ತಾರೆ. 1990ರ ಸುಮಾರಿಗೆ ಕುಡಿತ, ದುಶ್ಚಟಕ್ಕಿಳಿದ ಕೃಷ್ಣಪ್ಪ ಒಂದು ಹಂತದಲ್ಲಿ ಪತ್ನಿಯ ಮೇಲೆ ಭಯಾನಕ ಹಿಂಸೆಗಿಳಿದಿದ್ದಾನೆ. ಆ ಹೊತ್ತಿಗೆ ಪಿಯುಸಿ ಮಟ್ಟದಲ್ಲಿದ್ದ ಮಗ ತನ್ನ ತಾಯಿಯನ್ನು ಕೊಲ್ಲಲೆತ್ನಿಸಿದ ಅಪ್ಪನ ವಿರುದ್ಧ ತಿರುಗಿ ಬಿದ್ದಿದ್ದಾನೆ. ಅದೊಮ್ಮೆ ಇನ್ನೇನು ಮುನಿಯಮ್ಮನನ್ನು ಕೃಷ್ಣಪ್ಪ ಕೊಂದೇ ಹಾಕುತ್ತಾನೆಎಂಬಂಥ ಮಾರಾಮಾರಿಯಲ್ಲಿ ಮಗ ತಾಯಿಯ ಪ್ರಾಣ ಉಳಿಸಲು ತಂದೆಯ ಜೊತೆ ಕಾಳಗಕ್ಕಿಳಿದಿದ್ದಾನೆ. ನಡೆದ ಭೀಕರ ಮಾರಾಮಾರಿಯಲ್ಲಿ ತಾಯಿಯ ಪ್ರಾಣ ಉಳಿಯಿತಾದರೂ ಮಗ ಬಡಿದಾಟದಲ್ಲೇ ಹೆಣವಾಗಿದ್ದ.

ಪ್ರಾಣ ಉಳಿದರೆ ಸಾಕು; ಕೃಷ್ಣಪ್ಪನಿಂದ ಮುಕ್ತ ಸಿಕ್ಕರೆ ಸಾಕು ಎಂಬಂತಿದ್ದ ಮುನಿಯಮ್ಮನ ಪಾಲಿಗೆ ತಂದೆ ವಿರುದ್ಧ ಪ್ರಾಣದ ಹಂಗು ತೊರೆದು ಹೋರಾಡಿದ ಮಗನೇ ಬಿಡುಗಡೆಯ ಅಸ್ತ್ರವಾದನೆ?

ಕೃಷ್ಣಪ್ಪನಿಂದ ಬಚಾವಾದರೆ ಸಾಕು ಅಂತಿದ್ದ ಮುನಿಯಮ್ಮ ಭೀತಿಗೆ ಬಿದ್ದೇ ಮಗನ ಸಾವಿನ ವಿರುದ್ಧ ದೂರು ದಾಖಲಿಸಲಿಲ್ಲವೆ? ಕೃಷ್ಣಪ್ಪನ ಬದುಕಲ್ಲಿ ಇಂಥ ಕೌರ್ಯಗಳು ಅದೆಷ್ಟೋ?



ಸಾವನ್ನಪ್ಪಿದ ಇಂದ್ರಾಣಿ, ಪುಷ್ಪರಾಣಿ, ರಾಜನಾಯಕ್ ಮತ್ತು ವಿಜಯ್ ಕುಮಾರ್

...ಕರಾದ. ಅದು ಆತನನ್ನು ಯಾವ ಮಟ್ಟಕ್ಕೆ ಬೆಳೆಸಿತೆಂದರೆ ಕಾಲ ಕ್ರಮೇಣ ...ರದೋ ಸೈಟಿಗೆ ಬೇಲಿ ಸುತ್ತುವುದು, ಯಾರದೋ ಜಮೀನಿಗೆ ನಕಲಿ ...ಲೆ ಸೃಷ್ಟಿಸುವುದು, ಯಾರದೊ ಆಸ್ತಿಯನ್ನು ತೋರಿಸಿ ಇನ್ಯಾರಿಗೋ ...ವುದು ಕೃಷ್ಣಪ್ಪನಿಗೆ ಕರಗತವಾಯಿತು.


...ೀಗೆ ಯಾರದೋ ಆಸ್ತಿಯನ್ನು ಇನ್ಯಾರಿಗೋ ಮಾರುವ ಕೃಷ್ಣಪ್ಪನ ...ಚಾರಕ್ಕೂ ಕಾರಣವಿತ್ತು. ಕೃಷ್ಣಪ್ಪ ಜಾತಿಯಿಂದ ಬೋವಿ. ಪರಪ್ಪನ ಅಗ್ರಹಾರ, ...-ಸಿಂಗಸಂದ್ರ, ಕೂಡ್ಲು, ಕೊನೇನ ಅಗ್ರಹಾರ ಇತ್ಯಾದಿ ಹೊಸೂರು ರಸ್ತೆ ಸುತ್ತಮುತ್ತಲ ...ವಿ, ವಡ್ಡರದ್ದೇ ಊರುಗಳಲ್ಲಿ ಕೃಷ್ಣಪ್ಪ ರಿಯಲ್ ಎಸ್ಟೇಟ್ ಧಂದೆಗಿಳಿದದ್ದು ...ಗದ ಬೋವಿಗಳೆಲ್ಲ ಆತನನ್ನು ಜಾತಿಕಾರಣದಿಂದಾಗಿ ನಂಬುವಂತಿತ್ತು.


ಸಿಎಂಸಿಗೆ ಅಧ್ಯಕ್ಷ

...ಮೊದಮೊದಲು ಸತೀಶ್ ರೆಡ್ಡಿ, ಲೇಔಟ್ ಕೃಷ್ಣಪ್ಪ ಯಲಹಂಕದ ವಿಶ್ವನಾಥ್ ...ತಾದ ರಿಯಲ್ ಎಸ್ಟೇಟ್ ದೈತ್ಯರಿಗೆ ಬ್ರೋಕರಿಕೆ ಮಾಡಿಕೊಂಡಿದ್ದ

ಹಡೆಯಿತ್ತತೊಡಗಿದವು. ಸೊಸೆಯ ಮೇಲೆಯೇ ಕಣ್ಣು ಹಾಕಿದ. ಬೆಳ್ಳಂಬೆಳಿಗ್ಗೆಯೇ ಕುಡಿದು ಮನೆಯಲ್ಲಿ ಅಡ್ಡೆ ಹಾಕುತ್ತಿದ್ದ. ಸೊಸೆ ಸ್ನಾನಕ್ಕೆ ಹೋಗುವುದನ್ನೇ ಕಾದಿದ್ದು ಇಲ್ಲದ ನೆಪವೊಡ್ಡಿ ಮಗನನ್ನು ಹೊರಕ್ಕೆ ಕಳಿಸುತ್ತಿದ್ದ. ಸ್ನಾನದ ಮನೆಯ ಎಕ್ಸಾಸ್ಟ್ ಫ್ಯಾನಿನ ಕಿಂಡಿಯಿಂದ ಸೊಸೆ ಸ್ನಾನ ಮಾಡುವುದನ್ನು ಕದ್ದು ನೋಡಲಾರಂಭಿಸಿದ. ಬರಬರುತ್ತ ಮಗನ ಬೆಡ್‌ರೂಮನ್ನೇ ಇಣುಕತೊಡಗಿದ. ಈ ಬಗ್ಗೆ ಪದೇಪದೇ ಜಗಳಗಳಾದವು. ಇದ್ಯಾವುದಕ್ಕೂ ಜಗ್ಗದೇ ಸೊಸೆಯನ್ನೇ ಹಿಡಿದುಕೊಳ್ಳಲು ಹೋದ. ಪ್ರತಿಭಟಿಸಿದ ಸೊಸೆಗೆ ಸಿಕ್ಕಾಪಟ್ಟೆ ವರದಕ್ಷಿಣೆ ಕೊಡುವಂತೆ ಪೀಡಿಸಲಾರಂಭಿಸಿದ.

ಅಂತಿಮವಾಗಿ ಸೊಸೆ ಅರ್ಚನಾ ಮಾವನ ವಿಕೃತಿಗೆ ರೋಸತ್ತು ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಇದಾಗಿದ್ದು 2007ರಲ್ಲಿ. ಅರ್ಚನಾ ಆತ್ಮಹತ್ಯೆ ಮಾಡಿಕೊಂಡಳೋ ಅಥವಾ ಅದೊಂದು ಕೊಲೆಯೋ ಇವತ್ತಿಗೂ ನಿಗೂಢ. ಮಗಳ ಸಾವಿನಿಂದಾಗಿ ರೊಚ್ಚಿಗೆದ್ದ ಅರ್ಚನಾ ತಂದೆಯ





...ಕ್ರಮೇಣ ತಾನೇ ನೇರವಾಗಿ ಲ್ಯಾಂಡ್ ಡೀಲಿಗೆ ಕೈಯಿಟ್ಟ. ಪರಪ್ಪನ ...ರದ ಅನೇಕ ವಡ್ಡರ ಕುಟುಂಬಗಳನ್ನು ಯಾಮಾರಿಸಿ ಅವರ ಆಸ್ತಿಯನ್ನೆಲ್ಲ ...ಸಿದ. ಬಂದ ದುಡ್ಡಲ್ಲಿ ಹೊಸ ರೋಡಿನಲ್ಲೊಂದು ಬಾರ್ ಆರಂಭಿಸಿ ... ರೇಣುಕಾ ಬಾರ್ ಎಂದು ಹೆಸರಿಟ್ಟ. ರೇಣುಕಾ ಆತನ ಮಗಳ ...!

...ಸವಿ 2000ರ ಹೊತ್ತಿಗೆ ನಾಗನಾಥಪುರ ವಾರ್ಡಿನಿಂದ ಬೊಮ್ಮನಹಳ್ಳಿ ... ಎಲೆಕ್ಷನ್ನಿಗೆ ನಿಂತ. ಬೇಕಾಬಿಟ್ಟಿ ದುಡ್ಡು ಸುರಿದು ಗೆದ್ದೂ ಬಿಟ್ಟ. ... ಗೆಲುವಿಗೆ ನೆರವಾಗಿದ್ದು ಹಾಲೀ ಬಿಜೆಪಿ ಶಾಸಕ ಸತೀಶ್ ರೆಡ್ಡಿ. ...ವರೆ 2002ರ ಹೊತ್ತಿಗೆ ಕೃಷ್ಣಪ್ಪ ಕೋಟ್ಯಾಧಿಪತಿಯಾಗಿದ್ದ. ಈತನ ದುಡ್ಡು ... ದೌಲತ್ತು ನೋಡಿಯೇ ಆರ್. ಅಶೋಕ್ ಬಿಜೆಪಿಗೆ ಬರಮಾಡಿಕೊಂಡು ...ಪಕ್ಕಾ ಥೈಲಾ ಸತೀಶ್ ರೆಡ್ಡಿ ಜೊತೆ ಹಾಕಿದ್ದರು. ಗೆದ್ದ ಮೊದಲ ...ಗೇ ಬೊಮ್ಮನಹಳ್ಳಿ ಸಿಎಂಸಿಗೆ ಅಧ್ಯಕ್ಷನಾದ. ಏಕೆಂದರೆ ಮೀಸಲಾತಿ ... ಪರಿಶಿಷ್ಟ ಜಾತಿಯವರೇ ಅಧ್ಯಕ್ಷರಾಗಬೇಕಿತ್ತು. ಅದರ ಲಾಭ ಪಡೆದ ... ಬೊಮ್ಮನಹಳ್ಳಿ ಸಿಎಂಸಿಗೆ ಸೇರಿದ ಹೊಸೂರು ರಸ್ತೆಯಲ್ಲಿದ್ದ ಮೂರು ...ರಿ ಸಿಎ ಸೈಟುಗಳನ್ನು ದೋಚಿದ.

...ಅದೇನು ಕೈಚಳಕವೋ ಗೊತ್ತಿಲ್ಲ, 2006ರ ಹೊತ್ತಿಗೆ ಕೃಷ್ಣಪ್ಪ ಹೆಚ್ಚೂ ... ಮುನ್ನೂರು ಕೋಟಿ ಬೆಲೆ ಬಾಳುವಷ್ಟು ಆಸ್ತಿ ಲಪಟಾಯಿಸಿದ್ದ. ಹೊಸೂರು ...ಲ್ಲೊಂದು ಭರ್ಜರಿ ಕಾಂಪ್ಲೆಕ್ಸ್, ಪಕ್ಕದಲ್ಲೇ ಆರ್‌ಟಿಓ ಕಚೇರಿಗೆಂದು ...ಗೆ ಕೊಟ್ಟಿದ್ದ ಕಟ್ಟಡ, ಅದಕ್ಕೆ ಹೊಂದಿಕೊಂಡಂತೆ ಇನ್ನೆರಡು ಕಾಂಪ್ಲೆಕ್ಸ್‌ಗಳು, ...ರೋಡ್ ಜಂಕ್ಷನ್ನಿನಲ್ಲಿ ನಾಲ್ಕೆಕರೆ ವ್ಯಾಪ್ತಿಯಲ್ಲಿ ಗಣೇಶನ ದೇವಸ್ಥಾನ, ... ಅಗ್ರಹಾರ ಜೈಲು ಸುತ್ತಮುತ್ತ ಎಕರೆಗಟ್ಟಲೆ ಭೂಮಿ, ರೇಣುಕಾ ... ಮಾತ್ರವಲ್ಲದೆ ಇನ್ನೊಂದು ಬಾರು; ಹೀಗೆ ಕೃಷ್ಣಪ್ಪನ ಆಸ್ತಿ ...ಯಾಗುವುದಕ್ಕೂ, ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೂ ಒಂದೇ ಆಗಿಹೋಗಿತ್ತು.

...ಿದಲೇ ವಿದ್ಯೆಯಿಲ್ಲ, ಜೊತೆಗೆ ಪಾಪ-ಪುಣ್ಯಗಳ ಭೇದ ಗೊತ್ತಿಲ್ಲ, ...ಕೆ, ನಯ ನಾಜೂಕುಗಳ ಹಂಗಿಲ್ಲ, ದುಡ್ಡು ಬರುತ್ತಿದ್ದಂತೆಯೇ ಕೃಷ್ಣಪ್ಪನ ...ಜು-ಮಸ್ತಿಯೂ ಬೆಳೆಯಲಾರಂಭಿಸಿತ್ತು. ಆ ಹೊತ್ತಿಗೆ ಕೃಷ್ಣಪ್ಪನ ಪತ್ನಿ ... ಇದ್ದವಳು ಎರಡನೆ ಪತ್ನಿ ನಾರಾಯಣಮ್ಮ. ಆಕೆಗೆ ವಿಜಯ್ ಕುಮಾರ್ ... ಮಗನಿದ್ದ, ಮಗಳು ರೇಣುಕಾಳನ್ನು ಯಾರೋ ಕಂಟ್ರಾಕ್ಟರ್ ಓರ್ವನಿಗೆ ... ಮದುವೆ ಮಾಡಿದ. ಆದರೆ ಮಗನಿಗೆ ಮಾತ್ರ ಕೋಟ್ಯಾಧಿಕಪತಿಗಳ ...ದಲೇ ಹೆಣ್ಣು ತರಲು ಪ್ಲಾನ್ ಮಾಡಿ ಅದಕ್ಕೆ ತಾನು ಸಿಎಂಸಿ ...ನಾಗಿದ್ದಕ್ಕೇ ಸಿದ್ಧ ಮಾಡಿಕೊಂಡ.

ಸೊಸೆಯ ಆತ್ಮಹತ್ಯೆ?

...ಿದಲೇ ಕೋಟ್ಯಾಧೀಶ, ಜೊತೆಗೆ ಸಿಎಂಸಿ ಅಧ್ಯಕ್ಷ. ಇನ್ನು ಈತನ ...ಗೆ ಹೆಣ್ಣು ಕೊಟ್ಟರೆ ತಮ್ಮ ಮಗಳ ಬದುಕೇ ಬಂಗಾರವಾದಂತೆ ಎಂದು ...ಯಲಹಂಕದ ಅನುಕೂಲಸ್ಥ ಬೋವಿ ಜಮೀನ್ದಾರರೊಬ್ಬರು ...ಮಗಳು ಅರ್ಚನಾಳನ್ನು ಕೊಟ್ಟು, ಮಗ ವಿಜಯಕುಮಾರ್‌ನ ಜೊತೆ ...ದೆ ಮುಗಿಸಿದ್ದರು.

...ದರೆ ಬರಬರುತ್ತ, ಕೃಷ್ಣಪ್ಪನ ವಿಕೃತಿಗಳೆಲ್ಲ ಒಂದೊಂದಾಗಿ

ಕಡೆಯ ಸರಿಸುಮಾರು ಎರಡು ಸಾವಿರಕ್ಕೂ ಅಧಿಕ ಬೆಂಬಲಿಗರು ಕೃಷ್ಣಪ್ಪನ ಮನೆ ಮೇಲೆ ದಾಳಿಯಿಟ್ಟರು. ಮಗಳ ಹತ್ಯೆಯ ಆಕ್ರೋಶಕ್ಕೆ ಸಿಲುಕಿದ ಕೃಷ್ಣಪ್ಪನ ಮನೆಗೇ ಬೆಂಕಿ ಬಿತ್ತು, ಆತನ ಕಾರು ಸುಟ್ಟು ಬೂದಿಯಾಗಿತ್ತು.

ಮನೆಗೆ ಬಿದ್ದ ಬೆಂಕಿಯಿಂದ ಪಾರಾಗಿ ಹೇಗೋ ಬಚಾವಾದ ಕೃಷ್ಣಪ್ಪ ಪತ್ನಿ ನಾರಾಯಣಮ್ಮ ಮತ್ತು ಮಗ ವಿಜಯ್‌ಕುಮಾರ್ ಸಮೇತ ಸೊಸೆಯನ್ನು ಕೊಂದ ಕೇಸಲ್ಲಿ ಜೈಲು ಪಾಲಾದ. ಆಧರೆ ಹಡಬೆ ದುಡ್ಡಿತ್ತಲ್ಲ, ಜೈಲಲ್ಲಿದ್ದುಕೊಂಡೇ ತನಗೆ ಮೆಂಟಲ್ ಎಫೆಕ್ಟು, ತಲೆ ಕೆಟ್ಟಿದೆ ಅಂತೆಲ್ಲ ನಾಟಕವಾಡಿದ. ನಿಮ್ಹಾನ್ಸ್ ಆಸ್ಪತ್ರೆಗೂ ದಾಖಲಾದ. ಜೊತೆಗೆ ಪತ್ನಿಯೂ ನಿಮ್ಹಾನ್ಸ್‌ಗೆ ದಾಖಲಾಗುವಂತೆ ನೋಡಿಕೊಂಡ. ಗಂಡ ಹೆಂಡತಿ ಇಬ್ಬರೂ ಮನೋರೋಗಿಗಳೆಂದು ಕೋರ್ಟು ಜಾಮೀನು ನೀಡಿತು. ಮುಂದೆ ಇದ್ದೊಬ್ಬ ಮಗನೂ ನಿಗೂಢವಾಗಿ ಸತ್ತ. ಅದು ಆತ್ಮಹತ್ಯೆಯೋ ಕೊಲೆಯೋ ಇವತ್ತಿಗೂ ರಹಸ್ಯವೇ!

ಮತ್ತೊಂದು ಮದುವೆ?

ಕೆಲವರ ಪ್ರಕಾರ ಸೊಸೆಯ ಕೊಲೆ ಕೇಸಿನಿಂದ ಬಚಾವಾಗಲೆಂದೇ ಕೃಷ್ಣಪ್ಪ ತನ್ನ ಮಗನನ್ನೇ ಮುಗಿಸಿ ಹಾಕಿದ್ದ!

ಏಕೆಂದರೆ ಸೊಸೆ ಕೊಲೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದದ್ದು ಮಗನೆ. ಮಗನೇ ಇಲ್ಲವೆಂದ ಮೇಲೆ ತಾನು ಸುಲಭವಾಗಿ ಬಚಾವಾಗಬಹುದೆಂಬುದು ಆತನ ಹುನ್ನಾರವಾಗಿತ್ತೇನೊ.

ಹೀಗೆ ಸೊಸೆ ಮತ್ತು ಮಗ ಇಬ್ಬರ ಸಾವಿಗೂ ಕೃಷ್ಣಪ್ಪನೇ ಕಾರಣನಾಗಿದ್ದ. ಈ ಮಧ್ಯೆ ಶಾಸಕ ಸತೀಶ್ ರೆಡ್ಡಿ ಬೆಂಬಲದಿಂದಾಗಿ ತನ್ನ ಮೇಲಿದ್ದ ಕೇಸುಗಳಿಂದಲೂ ಮುಕ್ತನಾದ. ಪರಪ್ಪನ ಅಗ್ರಹಾರ ಸುತ್ತಮುತ್ತ ಇನ್ನಷ್ಟು ಜಮೀನು ದೋಚಿದ. ಆದರೆ ಮಾಡಿದ ಪಾಪವಿತ್ತಲ್ಲ. ಅದೇನು ಮನೋವಿಕೃತಿಯೋ- ಬೆಳ್ಳಂಬೆಳಿಗ್ಗೆಯೇ ಚಿತ್ತಾಗುವಂತೆ ಕುಡಿಯುತ್ತಿದ್ದ. ಪ್ರತಿ ಅರ್ಧ ಗಂಟೆಗೊಮ್ಮೆ 'ಹನ್ಸ್' ಬ್ರಾಂಡಿನ ಕಡು ತಂಬಾಕನ್ನು ಬಾಯಿಗೆ ಹಾಕಿಕೊಂಡಿದ್ದೇ ಎಲ್ಲೆಂದರಲ್ಲಿ ಉಗಿಯುತ್ತಿದ್ದ. ಪದೇ ಪದೇ ಸಿಗರೇಟು ಸೇದಿ ಹೊಗೆ ಉಗುಳುತ್ತಿದ್ದ. ಪ್ರತಿ ಆರು ತಿಂಗಳಿಗೊಂದು ಹೊಚ್ಚ ಹೊಸ ಕಾರ್ ಖರೀದಿಸಿ ಕಂಡ ಕಂಡ ಬಾರುಗಳಿಗೆ ಹೋಗಿ ಪೋಜು ಕೊಡುತ್ತಿದ್ದ.


ಈ ಮಧ್ಯೆ ಕೃಷ್ಣಪ್ಪ ಮತ್ತೊಂದು ಯಡವಟ್ಟಿಗೆ ಕೈಯಿಟ್ಟ. ಅದು ಮೂರನೆ ಮದುವೆ. ಎರಡನೆ ಪತ್ನಿ ನಾರಾಯಣಮ್ಮನನ್ನು ಓಡಿಸಿದ್ದೇ ಜಯಲಕ್ಷ್ಮಿ (ಹೆಸರು ಬದಲಿಸಿದೆ) ಎಂಬ ಬ್ರಾಹ್ಮಣರ ಹೆಂಗಸೊಬ್ಬಳನ್ನು ಕರೆತಂದು ಚನ್ನಕೇಶವನಗರದ ಸ್ಮಶಾನದ ಎದುರು ಮೂರಂತಸ್ತಿನ ಮನೆ ಮಾಡಿ ಇಟ್ಟ. ಆಕೆಗೆ ಇಬ್ಬರು ಮಕ್ಕಳನ್ನು ಕೊಟ್ಟ. ಅದೂ ಸಾಲದೆಂಬಂತೆ ಆಗಾಗ ಬ್ರಿಗೇಡ್ ರಸ್ತೆಯ ಡ್ಯಾನ್ಸ್ ಬಾರ್‌ಗಳಿಗೆ ಹೋಗುತ್ತಿದ್ದ. ಬೇಕಾಬಿಟ್ಟಿ ದುಡ್ಡು, ಸಿಕ್ಕಾಪಟ್ಟೆ ಶೋಕಿ, ಮಾಡಿದ ಪಾಪಗಳ ರಾಶಿ ರಾಶಿ; ಇತ್ಯಾದಿಗಳೆಲ್ಲದರಿಂದ ಹೇಗೋ ಬಚಾವಾದ ಬಾರ್ ಕೃಷ್ಣಪ್ಪನ ಪಾಪದ ಕೊಡವೇ ತುಂಬಿತ್ತೋ ಅಥವಾ ಆತನ ದುಷ್ಕೃತ್ಯ ತನ್ನ ಪರಮಾವಧಿ ಮುಟ್ಟಿತೋ ಗೊತ್ತಿಲ್ಲ.

ಅದೀಗ ಅನ್ಯಾಯವಾಗಿ ನಾಲ್ಕು ಜೀವಗಳನ್ನು ಬಲಿಪಡೆದಿದೆ, ಎಂಟು ಮಂದಿಯ ಬದುಕು ನರಕವಾಗಿದೆ.

● ಡಾ. ಸೋಮನಾಥ್

ಚೆಡ್ಡಿ ರೋಗಿ ರಾಘವಜೀ

ಆರೆಸ್ಸೆಸ್ ಸಲಿಂಗಿಗಳ ಅಡ್ಡೆಯೆಂಬ ಅನುಮಾನ ತುಂಬ ಹಿಂದಿನದು. ಬಹುಶಃ ಚೆಡ್ಡಿ ಗ್ಯಾಂಗ್ ರಚನೆಯಾದ ಸಂದರ್ಭದ್ದು! ಇದೀಗ ಖಾತ್ರಿಯಾಗಿದೆ. ಆರೆಸ್ಸೆಸ್‌ನ ವಯೋವೃದ್ಧ ಮುಂದಾಳು, ಹಿಂದೂವಾದಿಗಳ ಜನ ಸಂಘದ ಸಂಸ್ಥಾಪಕ ಸದಸ್ಯ ಮಧ್ಯಪ್ರದೇಶದ ಹಣಕಾಸು ಮಂತ್ರಿ ರಾಘವಜೀ ಅಖಿಮ್ಲಿ ಸವಾಲ್ ಹಠ ಗುದ ಮೈಥುನ ಕೇಸ್‌ನಲ್ಲಿ ಸಿಕ್ಕಿಬಿದ್ದಿದ್ದಾನೆ. ಅಲ್ಲಿಗೆ ಆರೆಸ್ಸೆಸ್-ಬಿಜೆಪಿಯ ಶೀಲ-ಶಿಸ್ತು-ಸಂಸ್ಕೃತಿ-ಸಂಭಾವಿತನಗಳ ಮುಖವಾಡ ಒಂದೊಂದಾಗಿ ಕಳಚಿ ಬಿದ್ದಿದೆ!



ಪರಿಶುದ್ಧ ಚಾಲ್-ಚಲನ್-ಚರಿತ್ರದವರೆಂದು ಹೇಳಿಕೊಳ್ಳುವ ಬಿಜೆಪಿಗರ ಅಂತರಂಗದ ಬಾಹ್ಯ ಸಂಕೇತದಂತಾಗಿದ್ದಾನೆ ಈ 79 ವರ್ಷದ ಪೋಲಿ ಮುದುಕ ರಾಘವಜೀ! ಮಧ್ಯ ಪ್ರದೇಶದ ಬಿಜೆಪಿ ಸರ್ಕಾರದ ಹಣಕಾಸು ಮಂತ್ರಿಯಾಗಿ ಬರೋಬ್ಬರಿ ಹತ್ತು ಬಜೆಟ್ ಮಂಡಿಸಿರುವ ರಾಘವಜೀ ಸಿಎಂ ಶಿವರಾಜ್ ಸಿಂಗ್ ಚೌಹಾಣ್‌ಗೆ ಒಂದರ್ಥದಲ್ಲಿ ಗುರುದೇವ; ಸರ್ಕಾರಿ ನೌಕರಿ ಕೊಡಿಸುವ ಆಮಿಷವೊಡ್ಡಿ ಮೂರು ವರ್ಷದಿಂದ ತನ್ನ ಮೇಲೆ ಮಂತ್ರಿ ರಾಘವಜೀ ಲೈಂಗಿಕ ದಾಳಿ ಮಾಡುತ್ತಿದ್ದ-ಬಲವಂತದಿಂದ ಗುದ ಮೈಥುನಕ್ಕೆ ಇಳಿಯುತ್ತಿದನೆಂದು ಪೊಲೀಸ್ ಕಂಪ್ಲೇಂಟು ಕೊಟ್ಟಿರುವ ರಾಜಕುಮಾರ್ ಡಾಂಗೆ ಮಂತ್ರಿಯ ಮನೆ ಸೇವಕ. ಸಿಎಂ ಚೌಹಾಣ್ ಮತ್ತು ಬಿಜೆಪಿ-ಆರೆಸ್ಸೆಸ್ ಎಲ್ಲ ಸೇರಿ ಈ ಕೇಸು ಖತಮ್ ಮಾಡಲು ಆರಂಭದಲ್ಲೇ ಹವಣಿಸಿದ್ದರು.

ಆದರೆ ರಾಘವಜೀನ ಲೀಲಾ ವಿನೋದನ ಸಿಡಿಗಳು ಹೊರಬಂದು ದೃಶ್ಯ ಮಾಧ್ಯಮಗಳಲ್ಲಿ ಅನಾವರಣಗೊಂಡಾಗ ಬಿಜೆಪಿ-ಆರೆಸ್ಸೆಸ್‌ನಲ್ಲಿ ದೊಡ್ಡ ಬಿರುಗಾಳಿಯೇ ಎದ್ದಿತು. ಮುಚ್ಚಿ ಹಾಕಲು ಅದೆಷ್ಟೇ ಪ್ರಯತ್ನಿಸಿದರೂ ಪ್ರಕರಣ ಎದ್ದೆದ್ದು ಸಿಎಂ ಮತ್ತಿತರ ಬಿಜೆಪಿ ಮಹಾಮಹಿಮರ ಮುಸುಡಿಗೇ ಒದೆಯತೊಡಗಿತು. ಆರಂಭದಲ್ಲಿ ಪ್ರಕರಣ ಕಾಂಗ್ರೆಸ್ ಸೃಷ್ಟಿಯೆಂದು ಆತ್ಮವಂಚನೆ ಮಾಡಿಕೊಂಡಿದ್ದ ಬಿಜೆಪಿಗರಿಗೆ ದೊಡ್ಡ ಆಘಾತವಾಗಿದ್ದು ಅವರದೇ ಪಾರ್ಟಿಯ ಪುಢಾರಿ ಶಿವಶಂಕರ ಪಟೇರಿಯಾ "ನಾನೇ ಈ ಪ್ರಕರಣ ಹೊರತಂದಿದ್ದು... ಬಿಜೆಪಿಯನ್ನು ಶುದ್ಧ ಮಾಡಲೆಂದು ಶ್ರಮಪಟ್ಟು ರಾಘವಜೀ ಅಸಲಿಯತ್ತು ಬಯಲಿಗೆ ತಂದಿದ್ದೇವೆ... ಇನ್ನಷ್ಟು ಇಂಥ ಕೊಳಕು ನಾಯಕರು ಬಿಜೆಪಿಯಲ್ಲಿದ್ದಾರೆ..." ಎಂದು ಧೀರೋದಾತ್ತನಂತೆ ಪತ್ರಿಕಾಗೋಷ್ಠಿ ಕರೆದೇ ಕೂಗಾಡಿಬಿಟ್ಟಿದ್ದ.

ಆಗ ಗತಿಯಿಲ್ಲದೆ ರಾಘವಜೀ ಮಂತ್ರಿಗಿರಿಗೆ ರಾಜೀನಾಮೆ ಕೊಟ್ಟು ತಲೆ ಮರೆಸಿಕೊಳ್ಳಬೇಕಾಗಿ ಬಂತು. ಆದರೂ ಪೊಲೀಸರು ವೃದ್ಧ ಆರೋಪಿಯನ್ನು ಬಂಧಿಸಿದರು. ಈಗ "ಯಾರು ಈ ಪಟೇರಿಯಾ...?" ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗ್ವತ್, ಬಿಜೆಪಿ ಬಾಸ್ ರಾಜನಾಥಸಿಂಗ್ ತಲೆ ಕೆಡಿಸಿಕೊಳ್ಳುವಂತಾಗಿದೆ. ಹಾಗೆ ನೋಡಿದರೆ ಈ ಪಟೇರಿಯಾ ರಾಘವಜೀನ ಗರಡಿಯಲ್ಲಿ ಪಳಗಿದ ಶಿಷ್ಯನೇ. ಅಧಿಕಾರ ಸ್ಥಾನಕ್ಕಾಗಿ ರಾಘವಜೀ ಬೆನ್ನಿಗೆ ಬಿದ್ದಿದ್ದ ಪಟೇರಿಯಾಗೆ 'ಗುರು' ಕರುಣಿಸಲೇ ಇಲ್ಲ. ಆಗ ಕೆರಳಿದ ಪಟೇರಿಯಾ ತಾನೇ ರಾಘವಜೀ ಮನೆ ಕೆಲಸಕ್ಕೆಂದು ಕಳಿಸಿದ್ದ ರಾಜಕುಮಾರ್ ಡಾಂಗೆಯ ಕೈಗೊಂದು ಪೆನ್ ಕ್ಯಾಮರಾ ಕೊಟ್ಟಿದ್ದ ರಾಘವನ ರಾಸಲೀಲೆ ಶೂಟ್ ಮಾಡುವಂತೆ ಪ್ರಚೋದಿಸಿದ್ದ. ಮೊದಲು ರಾಜಕುಮಾರ್ ಮಂತ್ರಿಯ ಡಿಸ್ಟಲರಿಯಲ್ಲಿ ಕೆಲಸಕ್ಕಿದ್ದ. ಬಳಿಕ ಆತನಿಗೆ ಸರ್ಕಾರಿ ನೌಕರಿ ಕೊಡಿಸುವ ಆಸೆ ತೋರಿಸಿ ತನ್ನ ಮನೆಗೆಲಸಕ್ಕೆ ತಂದುಕೊಂಡಿದ್ದ ರಾಘವಜೀ.

ರಾಘವಜೀ ರಾಸಲೀಲಾ ಪ್ರವೀಣ. ಸಲಿಂಗಿಯಷ್ಟೇ ಅಲ್ಲ, ಹಲವು ಹೆಂಗಸರ ಸಂಘವೂ ಆತನಿಗಿದೆ. ಮನೆಗೆಲಸದ ದಂಪತಿಗಳ ಜತೆ ಚಕ್ಕಂದ ಆಡುವ ಖಯಾಲಿ ಈತನಿಗೆ. ಗಂಡ-ಹೆಂಡತಿ ಇಬ್ಬರೂ ಈತನ ಹಾಸಿಗೆ ಸಂಗಾತಿಗಳು. ಹಿಂದೆ ಈ ಕೊಳಕ ಹೆಂಗಸೊಬ್ಬಳೊಂದಿಗೆ ರಮಿಸುತ್ತಿದ್ದ ಸಿಡಿ ಬಹಿರಂಗಗೊಂಡಿತ್ತು. ಆ ಪ್ರಕರಣವನ್ನು ಆಡಳಿತಾರೂಢ ಬಿಜೆಪಿ ಪಕ್ಷ ಮತ್ತು ಶಿವರಾಜ್‌ಸಿಂಗ್ ಚೌಹಾಣ್ ಸರ್ಕಾರ ಜಂಟಿ ಕಾರ್ಯಾಚರಣೆಯಲ್ಲಿ ಸಮಾಧಿ ಸೇರಿಸಿತ್ತು. ಬಳಿಕ 40 ಸಾವಿರ ಸರ್ಕಾರಿ ಹಣದಲ್ಲಿ ಕನ್ನಡಕ ಖರೀದಿಸಿದ್ದ ರಾಘವಜೀ. ಆಗಲು ಬಚಾವಾಗಿದ್ದ. ಆದರೆ ಬಿಜೆಪಿಗೀಗ ತಲೆ ನೋವಾಗಿಯೇ ಇದ್ದ ಈ ಬಾರಿಯೂ ಪ್ರಕರಣ ಖತಮ್ ಮಾಡಲು ಬಿಜೆಪಿ ಪ್ರಯತ್ನಿಸಿತು. ಲೈಂಗಿಕ ಶೋಷಣೆಗೊಳಗಾದ ಡಾಂಗೆಯ ತಂದೆಯನ್ನು ಹೆದರಿಸಿ-ಬೆದರಿಸಿದರು. ತನ್ನ ಮಗನ ಬುದ್ಧಿ ಸರಿಯಿಲ್ಲ ಎಂದು ಆತನಿಂದ ಹೇಳಿಸಿದರು. ಎಲ್ಲವೂ ವ್ಯರ್ಥವಾಯ್ತು.

ಮಧ್ಯಪ್ರದೇಶದ ಸುದ್ದಿವಾಹಿನಿಗಳು ರಾಘವನ ಹುಚ್ಚು-ಹುಚ್ಚು ಅಶ್ಲೀಲ ಸರ್ಕಸ್ ಮುಸುಕು ಮಾಡಿ ಪ್ರಸಾರ ಮಾಡಿದವು. ಆಗ ಅಂತರ್ಜಾಲದಲ್ಲಿ ಆರೆಸ್ಸೆಸ್-ಬಿಜೆಪಿಯ 'ಮಾನ-ಮರ್ಯಾದೆ' ಹರಿದಾಡಿತು. ಗತಿಯಿಲ್ಲದೆ ರಾಘವಜೀನನ್ನು ಮಂತ್ರಿಗಿರಿಯಿಂದಷ್ಟೇ ಅಲ್ಲ, ಬಿಜೆಪಿಯಿಂದಲೂ ಒದ್ದೋಡಿಸಲಾಯ್ತು. ಎದೆ ಮೇಲೆ ಬಂದಿರುವ ಮಧ್ಯಪ್ರದೇಶದ ಅಸೆಂಬ್ಲಿ ಎಲೆಕ್ಷನ್‌ನ ಈ ಹರ್ಷ ಕಾಲದಲ್ಲಿ ರಾಘವನನ್ನು ರಕ್ಷಿಸುವ ಧೈರ್ಯ ಬಿಜೆಪಿ ಭೂಪರಿಗೆ ಬರಲಿಲ್ಲ! ಈ ರಾಘವಜೀ ಒಬ್ಬನೇ ಚಿತ್ರವಾಗಿಲ್ಲ, ಆತನ ಆರೆಸ್ಸೆಸ್-ಬಿಜೆಪಿಯ ಬಣ್ಣವೂ ಬಯಲಾಗಿದೆ. ಹೇ... ರಾಮ್!!


● ಸುಯೋಧನ

ಮುಸ್ಲಿಮ್ ಮಹಿಳೆಯರ ಮಸೀದಿ-ಶಾಲಾ ಪ್ರವೇಶ

ನಮ್ಮ ಮುಂದಿರುವ ಸವಾಲು

ಮುಸ್ಲಿಮ್ ಹೆಣ್ಣು ಮಕ್ಕಳು ಮಸೀದಿಗೆ ನಮಾಜ್‌ಗೆ ಹೋಗುವುದರ ಕುರಿತಂತೆ ನೀನ್ಯಾಕೆ ಮಾತನಾಡುವುದಿಲ್ಲ...?' ಎಂದು ಕೆಲವು ಗೆಳೆಯರು ನನ್ನ ಹಣೆಗೆ ಪಿಸ್ತೂಲ್ ಒತ್ತಿ ಕೇಳುತ್ತಿದ್ದಾರೆ. ಹೀಗೆಂದು ಕೇಳಿದವರಲ್ಲಿ ಹೆಣ್ಣು ಮಕ್ಕಳು ತಲೆವಸ್ತ್ರ ಹಾಕಿ ಶಾಲೆಗೆ ಹೋಗುವುದನ್ನು ಶಾಗಾಯ ವಿರೋಧಿಸಿದವರಿದ್ದಾರೆ. 'ತಲೆವಸ್ತ್ರ (ಸ್ಕಾರ್ಫ್) ಅವರಿಗೆ ಮುಖ್ಯವೆಂದಾದರೆ ಅವರು ಮನೆಯಲ್ಲೇ ಇರಲಿ' ಎಂದು ವಾದಿಸಿದ ಕಮ್ಯುನಿಸ್ಟ್ ಗೆಳೆಯರಿದ್ದಾರೆ. ಇದೀಗ ಕೆಲವರಂತೂ 'ದಲಿತರ ಮೇಲೆ ಪ್ರೀತಿ ತೋರಿಸುವ ನೀನು ಮುಸ್ಲಿಮ್ ಮಹಿಳೆ ಮಸೀದಿಯಲ್ಲಿ ನಮಾಜ್ ಮಾಡುವುದರ ಕುರಿತಂತೆ ಯಾಕೆ ಸುಮ್ಮನಿದ್ದೀಯ?' ಎಂದು ಪದೇ ಪದೇ ಕೇಳಿ, ನನ್ನ ಬಾಯಿ ಮುಚ್ಚಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ನಾನಿಲ್ಲಿ ಅನಿವಾರ್ಯವಾಗಿ ಪ್ರತಿಕ್ರಿಯಿಸುತ್ತಿದ್ದೇನೆ. ಯಾಕೆಂದರೆ ಮುಸ್ಲಿಮ್ ಮಹಿಳೆಯರು ಮಸೀದಿಗೆ ಹೋಗಬೇಕು, ಹೋಗಬಾರದು ಎನ್ನುವುದು ನನಗೆ ಯಾವತ್ತೂ ಪ್ರಶ್ನೆಯಾಗಿರಲಿಲ್ಲ. ಮಸೀದಿಗೆ ಹೋಗಲೇಬೇಕೆಂದರೆ ಮುಸ್ಲಿಮ್ ಮಹಿಳೆಯರಿಗೆ ಪ್ರವೇಶ ನೀಡುವ ಮಸೀದಿಗಳು ಇದೀಗ ಎಲ್ಲ ಕಡೆ ತಲೆಯೆತ್ತುತ್ತಿವೆ. ನನಗೆ ಮುಖ್ಯವೆನಿಸುವುದು ಶಾಲೆ, ಕಾಲೇಜುಗಳಿಗೆ ಮುಸ್ಲಿಮ್ ಮಹಿಳೆಯರು ಇನ್ನಷ್ಟು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತೆರಳಬೇಕು. ನಾವಿಂದು ಧ್ವನಿಯೆತ್ತಬೇಕಾದುದು ಈ ಕುರಿತಂತೆ.

ಹಾಸನದಲ್ಲಿ ನಡೆದ ಮುಸ್ಲಿಮ್ ಮಹಿಳೆಯರ ಮಸೀದಿ ಪ್ರವೇಶ ವಿವಾದ ಹೊಸತೇನೂ ಅಲ್ಲ, ಮತ್ತು ಈ ಚಳವಳಿಯ ಹಿಂದೆ ಮುಸ್ಲಿಮ್ ಮೂಲಭೂತವಾದಿಗಳೆಂದು ಪ್ರಗತಿಪರರು ಯಾರನ್ನು ಕರೆಯುತ್ತಾರೆಯೋ ಅವರೂ ಇದ್ದಾರೆ ಎಂದರೆ ನೀವು ಒಪ್ಪುತ್ತೀರೋ ಇಲ್ಲವೋ. ಸುಮಾರು ಹದಿನೈದು ವರ್ಷಗಳ ಹಿಂದೊಮ್ಮೆ ಇಂತಹುದೇ ಪ್ರಕರಣ ಹಾಸನದಲ್ಲಿ ನಡೆದಿತ್ತು, ಮಸೀದಿ ಪ್ರವೇಶವನ್ನು ಎತ್ತಿ ಹಿಡಿದ ಬಾನು ಮುಷ್ತಾಕ್ ಮೇಲೆ ಕೆಲವರು ನಿಷೇಧವನ್ನೂ ಹೇರಿದ್ದರು. ಆಗ ಲಂಕೇಶ್ ಪತ್ರಿಕೆಯಲ್ಲಿ ಅದನ್ನು ಬಲವಾಗಿ ಖಂಡಿಸಿದವನಲ್ಲಿ ನಾನೂ ಒಬ್ಬ. ಆಗ ನನ್ನ ಅಣ್ಣ ರಶೀದನೂ ಬಾನು ಮೇಲಿನ ನಿಷೇಧದ ವಿರುದ್ಧ ಪ್ರತಿಭಟಿಸಿದ್ದ. ಆದರೆ ನಾನು ನನ್ನ ಅಭಿಪ್ರಾಯವನ್ನು ಒಂದು ಸ್ವಲ್ಪ ಮೆದುವಾಗಿ ಬರೆದಿದ್ದೆ ಮುಸ್ಲಿಮ್ ಮಹಿಳೆಯರ ಸಮಸ್ಯೆ ಮಸೀದಿಯಲ್ಲ, ಶಾಲೆ, ಕಾಲೇಜುಗಳು ಎಂದು ಅಭಿಪ್ರಾಯಿಸಿದ್ದೆ. ಅದಕ್ಕೆ ಕಾರಣವೂ ಇತ್ತು.




ಕರ್ನಾಟಕದಲ್ಲಿ ಮುಸ್ಲಿಮ್ ಮಹಿಳೆಯರೂ ಧರ್ಮದ ಪ್ರಮುಖ ಭಾಗವಾದುದು ಈ ಭಾಗದಲ್ಲಿ ಜಮಾತೆ ಇಸ್ಲಾಮ್ ತಲೆ ಎತ್ತಿದ ಬಳಿಕ ಎನ್ನುವುದನ್ನು ಗಮನಿಸಬೇಕು. ಜಮಾತೆ ಇಸ್ಲಾಮನ್ನು ಕೆಲವರು ಮುಸ್ಲಿಮ್ ಮೂಲಭೂತವಾದಿ ಸಂಘಟನೆಯೆಂದು ಕರೆಯುತ್ತಿರುವುದೂ ಇಲ್ಲಿ ಮುಖ್ಯವಾಗುತ್ತದೆ. ನಿಜಕ್ಕೂ ಇದೊಂದು ಬಿಕ್ಕಟ್ಟೇ ಸರಿ. ನಾವು ಯಾರನ್ನು ಮುಸ್ಲಿಮ್ ಮೂಲಭೂತವಾದಿಗಳೆಂದು ಟೀಕಿಸುತ್ತೇವೆಯೋ ಅವರೇ ಮೊತ್ತ ಮೊದಲಾಗಿ ಕನ್ನಡದಲ್ಲಿ ಕುರ್‌ಆನನ್ನು ತರ್ಜುಮೆ ಮಾಡಿದರು. ಬಹುಸಂಸ್ಕೃತಿಯ ಪ್ರತಿನಿಧಿಗಳೆನಿಸಿಕೊಂಡ ಇಲ್ಲಿನ ದರ್ಗಾದ ಜನರೆಲ್ಲ ಇದನ್ನು ಪ್ರತಿಭಟಿಸಿದ್ದರು. "ಕನ್ನಡದಲ್ಲಿ ಕುರ್‌ಆನ್ ತರುವುದೇ..." ಎಂದು ಆಘಾತ ವ್ಯಕ್ತಪಡಿಸಿದ್ದರು. ನನ್ನ ಬಾಲ್ಯದಲ್ಲಿ ಮುಸ್ಲಿಮ್ ಸಮುದಾಯದ ಬಹುತೇಕ ಮಂದಿ ಜಮಾತೆ ಇಸ್ಲಾಮಿನ ವಿರುದ್ಧ ಧ್ವನಿಯೆತ್ತಿದ್ದರು. ಕತ್ತಿ ಹಿಡಿದು ಅವರ ಮೇಲೆ ಏರಿ ಹೋದವರೂ ಇದ್ದಾರೆ. ಅದಕ್ಕೆ ಮುಖ್ಯ ಕಾರಣವೊಂದಿತ್ತು. ಜಮಾತೆ ಇಸ್ಲಾಮ್ ದರ್ಗಾಗಳನ್ನು ನಂಬುವುದಿಲ್ಲ. ಅದಕ್ಕೆ ಕುರ್‌ಆನ್‌ನಲ್ಲಿ ಸ್ಥಾನವಿಲ್ಲ ಎಂದು ವಾದಿಸುತ್ತಾರೆ. ದರ್ಗಾದಲ್ಲಿ ದೀಪ ಹಚ್ಚುವುದು, ಉರೂಸ್ ಆಚರಿಸುವುದು ಇತ್ಯಾದಿಗಳೆಲ್ಲ ಇಸ್ಲಾಮ್ ಧರ್ಮಕ್ಕೆ ವಿರುದ್ಧ ಎಂದು ಜಮಾತೆ ಇಸ್ಲಾಮಿನ ಮಂದಿ ವಾದಿಸುತ್ತಾರೆ. ಬಾಬಾಬುಡನ್‌ಗಿ
ದರ್ಗಾದ ಬಗ್ಗೆ ಯಾವುದೇ ಧಾರ್ಮಿಕ ಭಾವನೆಗಳ
ಜಮಾತೆ ಇಸ್ಲಾಮಿ ಪಂಗಡವಾಗಲಿ, ಸಲಫಿ ಪಂಗಡವಾ
ಹೊಂದಿಲ್ಲ, ಪರೋಕ್ಷವಾಗಿ ಅದು ಧ್ವಂಸವಾಗಬೇಕು ಎಂ
ಅವರು ಆಶಿಸುತ್ತಾರೆ. ಆದರೆ ಸೂಫಿ ಸಂತರ ದರ್ಗಾ
ಬಗ್ಗೆ ಭಾರತದ ಭಾವನೆ ಭಿನ್ನವಾದುದು. ಅದು
ದೇಶದ ಬಹುಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಎಂ
ಪ್ರಗತಿಪರರ ಸಹಿತ ಎಲ್ಲರೂ ವಾದಿಸುತ್ತಾರೆ. ಆದರೆ ಇಂ
ನಮ್ಮ ನಡುವಿನ ದರ್ಗಾಗಳನ್ನು ನೆಲೆ ಮಾಡಿಕೊಂ
ಸುನ್ನಿಗಳು ಮುಸ್ಲಿಮ್ ಮಹಿಳೆಯರು ಶಾಲಾ ಕಾಲೇಜುಗ
ಹೋಗುವುದನ್ನು ಇಷ್ಟಪಡುವುದಿಲ್ಲ. ಮಸೀದಿಗಳ
ಮಹಿಳೆಯರು ನಮಾಜ್ ಮಾಡುವುದನ್ನು ಅಷ್ಟೇ ತೀವ್ರವಾ
ವಿರೋಧಿಸುತ್ತಾರೆ. ಇಂತಹ ಕಾಲಘಟ್ಟದಲ್ಲಿ ಇಸ್ಲಾಮ್
ಮೂಲಭೂತ ತತ್ವಗಳ ಆಧಾರದ ಮೇಲೆ ನಿಂತಿದ್ದೇ
ಎನ್ನುವ ಜಮಾತೆ ಇಸ್ಲಾಮಿಗಳು ಮುಸ್ಲಿಮರು ವೇದಿಕೆ
ಶಾಲೆಗೆ ಹೋಗುವುದನ್ನು ಪ್ರೋತ್ಸಾಹಿಸಿದರು. ಆದರೆ ಅದ
ಧಾರ್ಮಿಕ ಗೆರೆಗಳ ಒಳಗೆ ಎನ್ನುವುದನ್ನು ನಾ
ಗಮನಿಸಬೇಕು.

ಜಮಾತೆ ಇಸ್ಲಾಮಿನ ನಂತರ ಕರಾವಳಿಯಾದ್ಯಂ
ತಲೆಯೆತ್ತಿದ ಸಂಘಟನೆ ಸಲಫಿ ಮೂವ್‌ಮೆಂಟ್. ಅದೀ
ತನ್ನ ರೆಕ್ಕೆಗಳನ್ನು ಬಿಚ್ಚಿದೆ. ಇದು ಜಮಾತೆ ಇಸ್ಲಾಮಿಗಿಂತಲ
ಕಟುವಾಗಿ ಇಸ್ಲಾಮ್ ಮೂಲಭೂತ ತತ್ವಗಳನ್ನು ಪಾಲಿಸಲ
ಹೆಣಗುತ್ತಿದೆ. ಮುಸ್ಲಿಮ್ ಮಹಿಳೆಯರು ಮಸೀದಿಗಳಿ
ಹೋಗಬೇಕು ಎನ್ನುವ ಚಳವಳಿ ಆರಂಭಿಸಿದ್ದು ಅದ
ಕುರ್‌ಆನ್‌ನ ಸಾಕ್ಷಗಳನ್ನು ಒದಗಿಸಿದ್ದು ಇದೇ ಸೂಫಿಗಳ
ಕರಾವಳಿಯಲ್ಲಿ ಉಳ್ಳಾಲ ದರ್ಗಾಕ್ಕೆ ಸವಾಲಾಗಿ ಸೂಫಿಗಳ
ಹುಟ್ಟಿಕೊಂಡರು. ಸೌದಿ ಅರೇಬಿಯಾದ ಸೂಫಿಗಳು ಇವರಿ
ಆದರ್ಶವಾದರು. ದರ್ಗಾಗಳ ವಿರುದ್ಧ ಇವರ ಹೋರಾ

ಈಜಿಪ್ಟ್‌ನಲ್ಲಿ 'ಅಮೆರಿಕನ್' ವಸಂತ-ಭಾಗ ಎರಡು

2010ನೆಯ ಡಿಸೆಂಬರ್ ತಿಂಗಳಿನಲ್ಲಿ ಟ್ಯುನೀಷಿಯಾದಲ್ಲಿ ಆರಂಭವಾದ ಅರಬ್ಬಿ ವಸಂತ (ಅರಬ್ ಸ್ಪ್ರಿಂಗ್) ಅಲ್ಲಿಗೇ ನಿಲ್ಲದೆ ಮಧ್ಯ ಪ್ರಾಚ್ಯದ ಹಲವು ಇತರೆ ರಾಷ್ಟ್ರಗಳಿಗೂ ಹರಡಿದ್ದು ಈಗ ಆಧುನಿಕ ಇತಿಹಾಸದ ಭಾಗವಾಗಿದೆ. ಈಜಿಪ್ಟ್, ಲಿಬಿಯಾ, ಮೊರಾಕೋ, ಸಿರಿಯಾ ಮುಂತಾದ ದೇಶಗಳ ಸರ್ವಾಧಿಕಾರಿ ಸರ್ಕಾರಗಳ ವಿರುದ್ಧ ಶುರುವಾದ ಈ ಚಳವಳಿ ಈಗ ಬೇರೆ ಬೇರೆ ದೇಶಗಳಲ್ಲಿ ವಿವಿಧ ಹಂತಗಳನ್ನು ಮುಟ್ಟಿದೆ. ಕೆಲವು ಕಡೆ ಹಿಂದಿನ ಸರ್ವಾಧಿಕಾರಿಗಳ ಜಾಗದಲ್ಲಿ ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದರೆ, ಮತ್ತೆ ಕೆಲವೆಡೆ ಅಲ್ಲಿನ ಸರ್ಕಾರದ ವಿರುದ್ಧ ಜನರ ಹೋರಾಟ ಇನ್ನೂ ಮುಗಿದಿಲ್ಲ. ಆರಂಭದಲ್ಲಿ ಅಹಿಂಸಾಯುತ ಹೋರಾಟವೆಂದೇ ಕಾಣುತ್ತಿದ್ದ ಈ ಚಳವಳಿ ಇಂದು ಹಿಂಸೆಗೂ ದಾರಿ ಮಾಡಿಕೊಟ್ಟಿದೆ. ಉದಾಹರಣೆಗೆ ಸಿರಿಯಾದ ಪರಿಸ್ಥಿತಿಯನ್ನು ಗಮನಿಸಬಹುದು. ಇಂಥ ಸನ್ನಿವೇಶದಲ್ಲಿಯೇ ಈಜಿಪ್ಟ್‌ನಲ್ಲಿ ಜನರ ಹೋರಾಟದ ಪರಿಣಾಮವಾಗಿ ಸರ್ವಾಧಿಕಾರಿ ಹೋಸ್ನಿ ಮುಬಾರಕ್ ಪದಚ್ಯುತಗೊಂಡು, ಚುನಾವಣೆಯಲ್ಲಿ ಮುಸ್ಲಿಂ ಬ್ರದರ್ ಹುಡ್‌ನ ಮಹಮ್ಮದ್ ಮೋರ್ಸಿ ಅಧಿಕಾರಕ್ಕೆ ಬಂದನು.

ಮೋರ್ಸಿ ಅಧಿಕಾರಕ್ಕೆ ಬಂದದ್ದು 2012ರಲ್ಲಿ, ಆ ಸಂದರ್ಭದಲ್ಲಿ ಒಂದು ರಕ್ತ ರಹಿತ ಕ್ರಾಂತಿಯೇ ನಡೆದು ಹೋಯಿತೆಂದೇ ಹೇಳಲಾಯಿತು. ಜನರ ನಿಜವಾದ ಆಶೋತ್ತರಗಳನ್ನು ಸಾಕಾರಗೊಳಿಸಿಕೊಳ್ಳುವ ಅವಕಾಶ ಒದಗಿ ಬಂದಿತೆಂದೂ ಹೇಳಲಾಯಿತು. ಹೊಸ ಆಡಳಿತ ವ್ಯವಸ್ಥೆಯಲ್ಲಿ ನಿಜವಾದ ಅರ್ಥದಲ್ಲಿ ಸ್ವೇಚ್ಛೆಯ ಗಾಳಿಯನ್ನು ಉಸಿರಾಡಬಹುದು ಎಂದೆಲ್ಲಾ ಆ ದೇಶದ ಜನರಲ್ಲಿ ಭರವಸೆ ಹುಟ್ಟಿಸಿತು. ಜನರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದರಿಂದ ತಾವೇ ಈಗ ಪ್ರಭುಗಳಾಗಿದ್ದೇವೆಂದು ಸಂಭ್ರಮಿಸಿದ ಜನ ಇಷ್ಟು ಬೇಗ ಭ್ರಮನಿರಸನಗೊಂಡಿದ್ದು ಅತ್ಯಂತ ಆಶ್ಚರ್ಯದ ಸಂಗತಿ. ಜನಪ್ರಿಯ ನಾಯಕನೆಂದು ಬಿಂಬಿತನಾಗಿ ಅಧಿಕಾರಕ್ಕೆ ಬಂದ ಮೋರ್ಸಿ ಒಂದೇ ವರ್ಷದಲ್ಲಿ ಜನರ ಅಭಿಮಾನವನ್ನೂ, ವಿಶ್ವಾಸವನ್ನೂ ಕಳೆದುಕೊಂಡು ಈಗ ಗೃಹಬಂಧನದಲ್ಲಿರುವುದು ಇತಿಹಾಸದ ವ್ಯಂಗ್ಯಕ್ಕೊಂದು ಉದಾಹರಣೆಯಾಗಿದೆ. ಅರಬ್ಬಿ ವಸಂತದ ಈಜಿಪ್ಟಿನ ಅಧ್ಯಾಯದಲ್ಲಿ ಈಗ ಎರಡನೆಯ ಹಂತ ಶುರುವಾಗಿದೆ. ತನ್ನ ನಿಕಟಪೂರ್ವ ನಾಯಕನಾಗಿದ್ದ ಹೋಸ್ನಿ ಮುಬಾರಕ್‌ನಂತೆಯೆ ಈಗ ಮೋರ್ಸಿ ಸಹ ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಸದ್ಯಕ್ಕೆ ಆ ದೇಶದಲ್ಲಿ ಮಿಲಿಟರಿಯ ಹಿಡಿತದಲ್ಲಿರುವ ಸರ್ಕಾರವಿದೆ. ಮತ್ತೆ ಚುನಾವಣೆಗಳನ್ನು ನಡೆಸುತ್ತೇವೆಂದು ಸೇನೆ ಹೇಳುತ್ತಿದೆ. ತನ್ನ ಮಾತನ್ನು ಸೇನೆ ನಿಜವಾಗಿಯೂ ಪಾಲಿಸುತ್ತದೆಯೇ ಎನ್ನುವುದು ಮುಂದಿನ ಪ್ರಶ್ನೆ. ಅದಕ್ಕೆ ಭವಿಷ್ಯವೇ ಉತ್ತರ ಹೇಳಬೇಕು. ಸದ್ಯಕ್ಕಂತೂ ಮೋರ್ಸಿಯೇ ಅಲ್ಲದೆ ಮುಸ್ಲಿಂ ಬ್ರದರ್‌ಹುಡ್‌ನ ಹಲವರು ಇತರ ನಾಯಕರೂ ಬಂಧನದಲ್ಲಿದ್ದಾರೆ.



ಈ ಮುಸ್ಲಿಂ ಬ್ರದರ್‌ಹುಡ್ ಎಂಥಾ ಸಂಸ್ಥೆ? ಈಜಿಪ್ಟ್‌ನಲ್ಲಿ ಮೋರ್ಸಿ ಅಧಿಕಾರಕ್ಕೆ ಬರುವವರೆಗೂ ಈ ಸಂಘಟನೆಯ ಬಗ್ಗೆ ಜಗತ್ತು ಹೆಚ್ಚು ಕೇಳಿರಲಿಲ್ಲ. ಒಮ್ಮೆಲೇ ಪ್ರಾಮುಖ್ಯತೆಯನ್ನು ಪಡೆದ ಈ ಸಂಘಟನೆ ಮಧ್ಯಪ್ರಾಚ್ಯ ಮತ್ತು ಅರಬ್ ಜಗತ್ತಿನ ಅತಿ ದೊಡ್ಡ ಮುಸ್ಲಿಂ ಸಂಸ್ಥೆ. ಹಲವು ದಶಕಗಳಿಂದ ಅಸ್ತಿತ್ವದಲ್ಲಿರುವ ಇದು ರಾಜಕೀಯವಾಗಿಯೂ ಕ್ರಿಯಾಶೀಲವಾಗಿದೆ. ಹಲವು ಅರಬ್ ದೇಶಗಳಲ್ಲಿ ಪ್ರಮುಖ ಪ್ರತಿಪಕ್ಷವಾಗಿದೆ. ಸೊಸೈಟಿ ಆಫ್ ಓ ಮುಸ್ಲಿಂ ಬ್ರದರ್ಸ್ ಎಂಬ ಧಾರ್ಮಿಕ ಮತ್ತು ರಾಜಕೀಯ ಸಂಘಟನೆಯ ಹ್ರಸ್ವ ರೂಪ ಮುಸ್ಲಿಂ ಬ್ರದರ್‌ಹುಡ್. ಕುರಾನ್‌ನನ್ನು ತನ್ನ ಸಂವಿಧಾನವಾಗಿ ಒಪ್ಪಿರುವ ಈ ಸಂಸ್ಥೆಯ ಪ್ರಕಾರ ಇಸ್ಲಾಂ ಒಂದು ಧರ್ಮವಲ್ಲ, ಒಂದು ಜೀವನ ಕ್ರಮ. ಮುಸ್ಲಿಂ ಸಮಾಜದ ಎಲ್ಲ ಸಾಮಾಜಿಕ, ರಾಜಕೀಯ ಜೀವನವು ಕುರಾನ್ ಮತ್ತು ಶರಿಯತ್‌ಗಳ ಆಧಾರದ ಮೇಲೆಯೇ ನಡೆಯಬೇಕೆಂಬುದು ಇವರ ಸ್ಪಷ್ಟ ನಿಲುವು. ಈ ಶತಮಾನದ ಎಲ್ಲ ಸಮಸ್ಯೆಗಳಿಗೂ ಕುರಾನ್‌ನಲ್ಲಿಯೇ ಪರಿಹಾರಗಳನ್ನು ಕಾಣಬೇಕು, ಕಾಬಹುದು ಎನ್ನುವ ಮೂಲಭೂತವಾದಿ ನಿಲುವು ಅದರದ್ದು. ತನ್ನ ಧ್ಯೇಯೋದ್ದೇಶಗಳ ಪ್ರಸಾರಕ್ಕಾಗಿ ಕೆಲವು ಟಿವಿ ಚಾನೆಲ್‌ಗಳನ್ನೂ ನಡೆಸುವ ಈ ಸಂಘಟನೆ ಹೆಚ್ಚಾಗಿ ಮುಸ್ಲಿಂ ದೇಶಗಳಲ್ಲಿ ಧಾರ್ಮಿಕ, ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದೆ.

ಈಜಿಪ್ಟ್‌ನಲ್ಲಿನ ಈ ಹಠಾತ್ ಬೆಳವಣಿಗೆಗಳನ್ನು ಅರ್ಥ ಮಾಡಿಕೊಳ್ಳಲು ಜಗತ್ತಿನಾದ್ಯಂತ ರಾಜಕೀಯ ಪಂಡಿತರು ಹೆಣಗುತ್ತಿದ್ದಾರೆ. ಮುಸ್ಲಿಂ ಬ್ರದರ್‌ಹುಡ್ ಪ್ರಜಾಪ್ರಭುತ್ವ ಮಾದರಿ ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬಂದಿದ್ದರೂ ಅದರ ಸಂಪ್ರದಾಯವಾದಿ ನಿಲುವುಗಳೇ ಅದರ ಸದ್ಯದ ಈ ಪರಿಸ್ಥಿತಿಗೆ ಕಾರಣವಾಗಿರಬಹುದೆಂದೂ ಹೇಳಲಾಗುತ್ತಿದೆ. ಅರಬ್ ಜಗತ್ತಿನ ಹಲವು ದೇಶಗಳಿಗೆ ಹೋಲಿಸಿದರೆ, ಈಜಿಪ್ಟ್‌ನ ಜನ ಆಧುನಿಕತೆಗೆ ತೆರೆದುಕೊಂಡಿರುವವರು. ಹೋಸ್ನಿ ಮುಬಾರಕ್ ಕಾಲದ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ಮೋರ್ಸಿ ಒದಗಿಸಬಹುದೆಂದು ಆ ಜನರು ಭಾವಿಸಿದರೇ ಹೊರತು, ಆತನ ಮೂಲಭೂತವಾದಕ್ಕೆ ಅವರು ಮನಸೋತವರಲ್ಲ. ಜನರ ಜೀವನವನ್ನು ಹಸನು ಮಾಡುವುದಾಗಿ ಭರವಸೆಗಳನ್ನು ನೀಡಿ ರಾಷ್ಟ್ರ ನಾಯಕನಾ
ಮೋರ್ಸಿ ತನ್ನ ಆ ಪ್ರಾಥಮಿಕ ಕರ್ತವ್ಯವನ್ನು ಪಕ್ಕಕ್ಕಿಟ್ಟು
ಈಜಿಪ್ಟನ್ನು ಸಂಪ್ರದಾಯವಾದಿ ಸಮಾಜವಾಗಿ ರೂಪಿಸು
ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಿಸಿದ್ದು ಜನರ
ಅಸಹನೆಯನ್ನುಂಟು ಮಾಡಿರುವ ಸಾಧ್ಯತೆ ಹೆಚ್ಚು. ಅವ
ನಿರೀಕ್ಷೆಗಳೇ ಅತಿಯಾಯಿತೋ ಅಥವಾ ಮೋರ್ಸಿ ಜನ
ನಿರೀಕ್ಷೆಯ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲವೊ
ಅಂತೂ ಮೋರ್ಸಿಯ ಪತನವಾಯಿತು.

ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಿಂದ ಜಗತ್ತಿ
ಯಾವುದೇ ಮೂಲೆಯಲ್ಲಿ ಎಂಥದೇ ಪ್ರಕ್ಷುಬ್ಧ ಪರಿಸ್ಥಿ
ಉಂಟಾದಲ್ಲಿ, ಅದರಲ್ಲಿ ಅಮೆರಿಕದ ಕೈವಾಡವನ
ಕಾಣುವುದು ಹೊಸ ಜಾಗತಿಕ ನಿಯಮವೇ ಆಗಿದೆ. ಅದ
ರೀತಿಯಲ್ಲಿ ಮೋರ್ಸಿಯ ವಿರುದ್ಧದ ಹೋರಾಟದಲ್ಲಿ ಸಹ
ಅಮೆರಿಕದ ಪಾತ್ರವಿದೆ ಎಂದೇ ನಂಬಲಾಗುತ್ತಿದ
ಮಧ್ಯಪ್ರಾಚ್ಯದ ಹಲವೆಡೆ ಅಮೆರಿಕ ವಿರೋಧಿ ಧೋರಣ
ಇರುವುದು ರಹಸ್ಯವಾಗಿ ಉಳಿದಿಲ್ಲ. ದೇಶಗಳ ಆಡಳಿ
ವ್ಯವಸ್ಥೆ ಅಮೆರಿಕಕ್ಕೆ ಅಡಿಯಾಳಾಗಿದ್ದರೂ, ಜನ ಅಮೆರಿ
ವಿರೋಧಿ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಇರಾನ್‌ನಂ
ದೇಶಗಳಲ್ಲಿಯಂತೂ ಅಲ್ಲಿನ ಆಡಳಿತಗಳೂ ಸಹ ಅಮೆರಿಕ
ವಿರೋಧವನ್ನೇ ತನ್ನ ಮುಖ್ಯ ವಿದೇಶಿ ನೀತಿಯನ್ನಾ
ಪಾಲಿಸಿಕೊಂಡು ಬರುತ್ತಿವೆ. ಆದರೆ ಅಲ್ಲಿಯೂ ಇತ್ತೀಚ
ಚುನಾವಣೆಗಳಲ್ಲಿ ತೀವ್ರವಾದಿಗಳ ಜಾಗದಲ್ಲಿ ಮಿತವಾದಿಗಳ
ಅಧಿಕಾರಕ್ಕೆ ಬಂದಿರುವುದು ಆಸಕ್ತಿಕರವಾದ ವಿಷಯ. ಅದ
ಇರಾನ್ ಇರಲಿ, ಇರಾಕ್ ಇರಲಿ, ಆಡಳಿತ ತನ
ತೆಕ್ಕೆಯಲ್ಲಿರುವವರೆಗೂ ಅಮೆರಿಕಕ್ಕೆ ಅದು ಮಿತ್ರ ರಾಷ್ಟ್ರ
ತನ್ನ ದೇಶವನ್ನು ನಿಜವಾದ ಅರ್ಥದಲ್ಲಿ ಸ್ವಯಂಸ್ವಾತ್ರ
ದೇಶವನ್ನಾಗಿಸಬೇಕೆಂದು ಅಲ್ಲಿ ಯಾರಾದರು ಹೊರಟ
ಅದು ಅಮೆರಿಕದ ಶತ್ರು ದೇಶವಾಗುತ್ತದೆ. ಆಧುನಿ
ರಾಜಕೀಯದ ಕಿಂಚಿತ್ತು ಪರಿಚಯವಿದ್ದವರಿಗೂ ಈ ವಿಷಯ
ಗೊತ್ತು. ಈಜಿಪ್ಟ್‌ನಲ್ಲಿ ಮೋರ್ಸಿ ಮಾಡಿದ್ದು ಅದನ್ನೆ
ಅಮೆರಿಕಕ್ಕೆ ಅವಿಧೇಯನಾದ. ಅಮೆರಿಕಕ್ಕೆ ಆತನ
ಮೂಲಭೂತವಾದದ ಬಗ್ಗೆ ತಕರಾರಿಲ್ಲ. ಹಲವು ಇತ
ಮುಸ್ಲಿಂ ದೇಶಗಳಲ್ಲಿ ಮೂಲಭೂತವಾದವೇ ಇನ್ನೂ ಅಲ್ಲಿ
ಆಧುನಿಕ ಸನ್ನಿವೇಶದ ರಾಜನೀತಿ. ಅದಲ್ಲದೆ ಅಲ್ಲಿ ಯಾ
ರೀತಿಯ ಪ್ರಜಾಪ್ರಭುತ್ವವೂ ಇಲ್ಲ. ಅಲ್ಲಿರುವುದು ರಾಜ
ಆಡಳಿತ. ಆದರೆ ಅಮೆರಿಕಕ್ಕೆ ಅದು ಸಮಸ್ಯೆಯಲ್ಲ.
ರಾಜರು ತನಗೆ 'ಜೀ ಹುಜೂರ್' ಹೇಳುವವರೆಗೆ ಅವ

...ವು ಮನೆಗಳನ್ನು, ಕುಟುಂಬಗಳನ್ನು ಒಡೆದಿದೆ. ...ಯು ಹುಟ್ಟು ಹಬ್ಬ ದಿನಾಚರಣೆಯನ್ನು, ಸಾರ್ವಜನಿಕ ...ಚರಣೆಯನ್ನು ಇವರು ಶತಾಯಗತಾಯ ವಿರೋಧಿಸು... ಒಂದೇ ಮನೆಯಲ್ಲಿ ತಂದೆ ಸುನ್ನಿ, ಮಗ ಸೂಫಿಗಳಾಗಿ ...ವುದಿದೆ. ಅವರ ನಡುವೆಯೇ ಜಗಳಗಳಾಗುವುದಿದೆ. ...ಯಲ್ಲಿ ಪ್ರವಾದಿಯ ಪಾರಾಯಣ(ಮೌಲೂದು)ವನ್ನು ... ಒಪ್ಪಿದ್ದರೆ ಮಗ ವಿರೋಧಿಸುವುದಿದೆ. ಇದೇ ...ಗಳು ಮಹಿಳೆಯರು ಮಸೀದಿಗಳಿಗೆ ಹೋಗಬೇಕು ...ಕ ಚಳವಳಿ ಆರಂಭಿಸಿದ್ದು ಮತ್ತು ಮಂಗಳೂರು ...ಂತೆ ಇವರ ಎಲ್ಲ ಮಸೀದಿಗಳಲ್ಲಿ ಮಹಿಳೆಯರು ...ಗೆ ಹೋಗುತ್ತಾರೆ. ಮಾತ್ರವಲ್ಲ ಇವರ ಶಾಲಾ ...ಗಳಿವೆ. ಅಲ್ಲಿ ಮುಸ್ಲಿಮ್ ಮಹಿಳೆಯರು ಅರಬೀ ... ಮಾತ್ರ ಕಲಿಯುವುದಲ್ಲ, ಅದರ. ಅರ್ಥ ಸಹಿತ ...ಯುತ್ತಾರೆ. ಸೂಫಿಯ ಮಹಿಳೆಯರು ಯಾವುದೇ ...ಮ್ ಧರ್ಮಗುರುವನ್ನು ಮೀರುವಂತೆ ಧಾರ್ಮಿಕ ...ವನ್ನು ಹೊಂದಿರುತ್ತಾರೆ.

...ಟ್ಟಿ ಮಸೀದಿಗಳಲ್ಲಿ ಮುಸ್ಲಿಮ್ ಮಹಿಳೆಯರು ...ದಿಗೆ ಹೋಗಲು ಅವಕಾಶ ನೀಡಬೇಕು ಎಂದು ...ಗಳೂರಿನ ಕೆಲವು ಸೂಫಿ ಮಹಿಳೆಯರು ...ಾಲಯಕ್ಕೂ ತೆರಳಿದ್ದಾರೆ. ಮಸೀದಿಗೆ ತೆರಳಿದಾಕ್ಷಣ ...ಮ್ ಮಹಿಳೆಯರ ಹಕ್ಕುಗಳು ಸಿಕ್ಕೇ ಬಿಡುತ್ತವೆ ... ನಾನು ಈ ಕಾರಣಕ್ಕಾಗಿಯೇ ನಂಬುವುದಿಲ್ಲ. ... ಕಟ್ಟಾ ಸೂಫಿಗಳು ಮುಸ್ಲಿಮ್ ಮಹಿಳೆಯ ಕುರಿತಂತೆ ... ಕಟ್ಟಾ ನಿಲುವನ್ನು ತಳೆದಿದ್ದಾರೆ. ಕಣ್ಣು ಮಾತ್ರ ...ವಂತೆ ಮುಖ ಮುಚ್ಚಿಕೊಳ್ಳುವ ಬುರ್ಖಾಗಳು ...ುವುದು ಈ ಸೂಫಿಗಳ ಮೂಲಕವೇ ಎನ್ನುವುದನ್ನು ... ಗಮನಿಸಬೇಕು. ಕೆಲವು ಸೂಫಿಗಳ ಗಡ್ಡಗಳು ...ವಾಗಿ ಬೆಳೆದಿರುತ್ತವೆ. ಮತ್ತು ಅವರು ಅದನ್ನು ...ಶಪೂರ್ವಕವಾಗಿ ಪ್ರದರ್ಶನಕ್ಕಾಗಿಯೇ ಬಿಟ್ಟಿರುತ್ತಾರೆ. ...ಯವರು ಮಧ್ಯಮ ನಿಲುವಿಗೆ ಆದ್ಯತೆ ನೀಡಿದವರು. ... ದ್ವೇಷ ಮಾತ್ರವಲ್ಲ ಆರಾಧನೆಯೂ ತನ್ನ ಮಧ್ಯಮ ...ವನ್ನು ದಾಟಬಾರದು ಎಂದು ಹೇಳಿದವರು. ಮನುಷ್ಯನ ...ರ್ಯಕ್ಕೆ ಒತ್ತುಕೊಟ್ಟವರು. ಗಡ್ಡ ಆಧ್ಯಾತ್ಮದ ಸಂಕೇತ.

ಮನುಷ್ಯನ ಮುಖದಲ್ಲಿ ಆಧ್ಯಾತ್ಮದ ಬೆಳಕನ್ನು ...ಸಬೇಕು. ನನ್ನ ಸೂಫಿ ಗೆಳೆಯನಿದ್ದ. ಅವನಿಗೆ ಗಲ್ಲದಲ್ಲಿ ಅದಾಗಷ್ಟೇ ನಾಲ್ಕೈದು ಕೂದಲುಗಳಷ್ಟೇ ಮೂಡಿತ್ತು, ಅದನ್ನು ವಿಕಾರವಾಗಿ ನೇತಾಡಿಸಿಕೊಂಡು ಓಡಾಡುತ್ತಿದ್ದ. ನಾನೊಮ್ಮೆ "ಅದನ್ನು ಸ್ವಲ್ಪ ಟ್ರಿಮ್ ಮಾಡಿಸು. ಇನ್ನಷ್ಟು ಸುಂದರವಾಗಿ ಕಾಣುತ್ತೀಯ." ಅಂದೆ.

"ಇಲ್ಲ, ಗಡ್ಡದಲ್ಲಿ ಮಲಾಯಿಕ್‌ಗಳು ನೇತಾಡುತ್ತಾರಂತೆ... ಪ್ರವಾದಿಯವರು ಹೇಳಿದ್ದಾರೆ..." ಅಂತ ಆವನಂದ.

ಇಸ್ಲಾಮ್‌ನಲ್ಲಿ ಯಾವುದೇ ಆಚರಣೆಗಳಿಗೂ ಲೌಕಿಕ ಕಾರಣವೊಂದು ಇರುತ್ತದೆ. ಇದೇ ಸೂಫಿಗಳು ತಮ್ಮ ಪ್ಯಾಂಟನ್ನು ಮೊಣಕಾಲುವರೆಗೆ ಮಾತ್ರ ಬಿಡುತ್ತಾರೆ. ಬಟ್ಟೆಯನ್ನು ನೆಲ ತಾಗುವಂತೆ ಬಿಡುವುದನ್ನು ಪ್ರವಾದಿಯವರು ದ್ವೇಷಿಸಿದ್ದರು. ಅದು ದುರಹಂಕಾರದ, ಅಶುಚಿತ್ವದ ಸಂಕೇತ ಎಂದೂ ಹೇಳಿದ್ದರು. ಲೌಕಿಕ ಕಾರಣವಿಲ್ಲದ ಯಾವ ಆಚರಣೆಯೂ ಇಸ್ಲಾಮ್ ಧರ್ಮದಲ್ಲಿಲ್ಲ.

"ಸುಂದರವಾಗಿ ಕಾಣುವುದು ಪ್ರವಾದಿಯವರ ಆಗ್ರಹವಾಗಿತ್ತು, ನೀನು ಗಡ್ಡ ತೆಗೆದರೆ ಗಡ್ಡದಲ್ಲಿ ನೇತಾಡುವ ಮಲಾಯಿಕ್‌ಗಳೇನು ನೆಲೆಯಿಲ್ಲದೆ ಮರದಲ್ಲಿ ನೇತಾಡುವ ಪ್ರಸಂಗ ಬರುವುದಿಲ್ಲ, ಗಡ್ಡವನ್ನು ಚೆಂದ ಬಾಚಿ, ಟ್ರಿಮ್ ಮಾಡು" ಎಂದು ಆ ಸೂಫಿ ಹುಡುಗನಿಗೆ ಸಲಹೆ ನೀಡಿದ್ದೆ. ಆದರೆ ಅವನು ನನಗೇ ಗಡ್ಡ ಬಿಡಲು ಪ್ರತಿ ಸಲಹೆ ಕೊಟ್ಟಿದ್ದ.

ಪ್ರಗತಿಪರರು ಸೇರಿದಂತೆ ಕೆಲವು ಮಹಿಳಾವಾದಿಗಳು "ಮುಸ್ಲಿಮ್ ಮಹಿಳೆಯರಿಗೆ ಮಸೀದಿ ಪ್ರವೇಶಿಸಲು ಅವಕಾಶ ನೀಡಬೇಕು" ಎಂದು ಹೇಳಿಕೆ ನೀಡುತ್ತಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಅದಕ್ಕೆ ಪ್ರೋತ್ಸಾಹ ನೀಡುವ ಜಮಾತೆ ಇಸ್ಲಾಮಿ ಮತ್ತು ಸೂಫಿ ಮೂವ್‌ಮೆಂಟ್‌ಗಳನ್ನು ಮೂಲಭೂತವಾದಿಗಳು ಎಂದೂ ಕರೆಯುತ್ತಾರೆ. ಇದು ನಿಜಕ್ಕೂ ನಮ್ಮ ಮುಂದಿರುವ ಬಿಕ್ಕಟ್ಟು. ಈ ಬಿಕ್ಕಟ್ಟಿನಿಂದ ಪಾರಾಗಲು ನಾನು ಆರಿಸಿದ್ದು ಒಂದೇ. ನಾನೇ ಮಸೀದಿಗೆ ಹೋಗುವುದು ಅಪರೂಪವಾಗಿರುವಾಗ ಇನ್ನು ಮುಸ್ಲಿಮ್ ಮಹಿಳೆಯರ ಮಸೀದಿ ಪ್ರವೇಶದ ಕುರಿತಂತೆ ಆಗ್ರಹಿಸುವುದು ಅಪ್ರಸ್ತುತ. ಆದರೆ ಮುಸ್ಲಿಮ್ ಮಹಿಳೆಯರು ಹೆಚ್ಚು ಹೆಚ್ಚು ಶಾಲೆ, ಕಾಲೇಜುಗಳಿಗೆ ತೆರಳಬೇಕು, ಅದಕ್ಕೆ ಅವಕಾಶ ನೀಡಬೇಕು ಎನ್ನುವುದು ನನ್ನ ಆಗ್ರಹ.



ಇತ್ತೀಚೆಗೆ ಮುಸ್ಲಿಮ್ ಮಹಿಳೆಯರು ವ್ಯಾಪಕವಾಗಿ ಕಾಲೇಜು ಮೆಟ್ಟಲುಗಳನ್ನು ಹತ್ತುತ್ತಿದ್ದಾರೆ. ಇಂಜಿನಿಯರ್, ಡಾಕ್ಟರ್‌ಗಳಾಗಿ ದುಡಿಯುತ್ತಿದ್ದಾರೆ. ಇದು ಮುಸ್ಲಿಮ್ ಸಮುದಾಯಕ್ಕೆ ತುಂಬಾ ಸಂತೋಷ ತರುವ ವಿಚಾರ. ಪಿಯುಸಿ, ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ಮುಸ್ಲಿಮ್ ಬಾಲಕಿಯರ ಫೋಟೋಗಳು ಪತ್ರಿಕಾ ಸಂಪಾದಕೀಯ ವಿಭಾಗಗಳಲ್ಲಿ ರಾಶಿರಾಶಿಯಾಗಿ ಬೀಳುತ್ತಿರುವುದು ನೋಡುವಾಗ ಎದೆ ತುಂಬುತ್ತದೆ. ದುರದೃಷ್ಟಕ್ಕೆ ಮಸೀದಿ ಪ್ರವೇಶ ಪಕ್ಕಕ್ಕಿರಲಿ, ಮುಸ್ಲಿಮ್ ಮಹಿಳೆಯರಿಗೆ ಶಾಲೆಗಳಿಗೆ ಪ್ರವೇಶ ನೀಡಲು ನಾವು ಬೀದಿಗಿಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಕಾಲದಲ್ಲಿ ಮುಸ್ಲಿಮ್ ಮಹಿಳೆ ಶಾಲೆ ಮೆಟ್ಟಿಲು ಹತ್ತುವುದೇ ಕಷ್ಟಕರವಾಗಿತ್ತು, ಇಂದು ಅದಕ್ಕೆ ಭಿನ್ನವಾಗಿ ಮಹಿಳೆಯರೇ ಆಸಕ್ತಿಯಿಂದ ಶಾಲೆಯ ಮೆಟ್ಟಲನ್ನು ತುಳಿಯುವಾಗ, ಸ್ಕಾರ್ಫ್ ಹಾಕಿದರೆ ಪ್ರವೇಶವಿಲ್ಲ ಎಂದು ಅವರನ್ನು ತಡೆಯುವ ಪ್ರಯತ್ನ ನಡೆಯುತ್ತಿದೆ.

ಮನೆಯಲ್ಲಿ ತಂದೆ ತಾಯಿಗಳನ್ನು ಒಲಿಸಿ, ಮುಸ್ಲಿಮ್ ಬಾಲಕಿಯರು ಶಾಲೆಗೆ ಬಂದರೆ, ಅಲ್ಲಿ "ನೀನು ಸ್ಕಾರ್ಫ್ ಹಾಕಿದರೆ ಶಾಲೆಗೆ ಪ್ರವೇಶವಿಲ್ಲ" ಎಂದು ವಿದ್ಯಾವಂತರೆನಿಸಿಕೊಂಡವರೇ ತಡೆಯುವುದು ಅಮಾನವೀಯ, ಕ್ರೌರ್ಯ. ಮಸೀದಿಯ ಪ್ರವೇಶಕ್ಕಿಂತಲೂ ಶಾಲೆಯ ಪ್ರವೇಶ ಬಹಳ ಮುಖ್ಯ. ಆದರೆ ವಿದ್ಯಾವಂತರೆನಿಸಿಕೊಂಡವರೇ ಇದಕ್ಕೆ ತಡೆಯಾಗಿರುವಾಗ ಮಸೀದಿಯ ಪ್ರವೇಶದ ಬಗ್ಗೆ ನಾವು ಬೊಬ್ಬೆ ಹೊಡೆಯುವುದರಲ್ಲಿ ಯಾವ ಅರ್ಥವಿದೆ? ಶಿಕ್ಷಣಕ್ಕೆ ಪೂರಕವಾಗಿ ಯುನಿಫಾರ್ಮ್ ಹೊರತು, ಯುನಿಫಾರ್ಮ್‌ಗಾಗಿ ಶಿಕ್ಷಣವಲ್ಲ. ಯುನಿಫಾರ್ಮ್ ಬಣ್ಣದ ಸ್ಕಾರ್ಫನ್ನೇ ತಲೆಗೆ ತೊಟ್ಟುಕೊಳ್ಳುತ್ತೇವೆ ಎಂದರೂ ಆಸ್ಪದ ನೀಡದೆ ಅದೆಷ್ಟೋ ಮುಸ್ಲಿಮ್ ಬಾಲಕಿಯರನ್ನು ಕರಾವಳಿಯಲ್ಲಿ ಶಾಲೆಯಿಂದ ಹೊರ ಹಾಕಿದರಲ್ಲ, ಅದು ಇಂದಿನ ನಿಜವಾದ ಸಮಸ್ಯೆ. ಮುಸ್ಲಿಮರು ಮಾತ್ರವಲ್ಲ ಇಡೀ ಸಮಾಜ ಇಂದು ಇದರ ವಿರುದ್ಧ ಧ್ವನಿಯೆತ್ತಬೇಕು. ಮುಸ್ಲಿಮ್ ವಿದ್ಯಾರ್ಥಿನಿಯರ ಶಾಲಾ ಕಲಿಕೆಯ ಪರವಾಗಿ ನಿಲ್ಲಬೇಕು. ಈ ಬಗ್ಗೆ ಮಾಧ್ಯಮಗಳು ಹೆಚ್ಚು ಒತ್ತುಕೊಟ್ಟು ಚರ್ಚಿಗಿಳಿಯಬೇಕಾಗಿದೆ. ಮುಸ್ಲಿಮ್ ಮಹಿಳೆಯರನ್ನೂ, ಸಮಾಜವನ್ನು, ದೇಶವನ್ನು ಒಟ್ಟಾಗಿ ಮೇಲೆತ್ತಬೇಕಾಗಿದೆ.




● ಬಿ.ಎಂ.ಬಷೀರ್

...ವುದೇ ನಿಲುವುಗಳು ಅಮೆರಿಕಕ್ಕೆ ಅಪಥ್ಯವಲ್ಲ. ಅದೇ ... ತನ್ನ ಮಾತನ್ನು ಕೇಳುವುದನ್ನು ನಿಲ್ಲಿಸಿದರೆ, ಆಗ ...ರಿಕಕ್ಕೆ ಅವರ ಅಪ್ರಜಾತಾಂತ್ರಿಕತೆ ಕಣ್ಣಿಗೆ ಬೀಳುತ್ತದೆ, ... ಮೇಲೆ ಎಲ್ಲ ರೀತಿಯ ದಾಳಿಗಳು ನಡೆಯುತ್ತವೆ. ...ದಲಿನಿಂದಲೂ ಮೋರ್ಸಿ ತನ್ನ ಅಮೆರಿಕ ವಿರೋಧಿ... ಹೆಸರಾದವರು. ಅಂದ ಮೇಲೆ, ಅವರ ವಿರುದ್ಧ ...ರ ನಡೆಸುವ ಯಾವುದೇ ಅವಕಾಶವನ್ನು ಅಮೆರಿಕ ... ಕೊಡುವುದಿಲ್ಲ. ಈ ಬಾರಿ ದೊಡ್ಡ ಸಂಖ್ಯೆಯಲ್ಲಿ ... ಅವನ ವಿರುದ್ಧವಿದ್ದಾಗ ಅದೇ ಅವಕಾಶವನ್ನು ...ರಿಕವು ಉಪಯೋಗಿಸುತ್ತಿದೆ. ಈ ಹಿಂದೆ ಇರಾಕ್, ...ಮಾ ಮುಂತಾದ ದೇಶಗಳಲ್ಲಿ ಅಮೆರಿಕ ನಡೆಸಿದ ...ಕಾರ್ಯಾಚರಣೆಗಳು ಈಗ ಬಹಿರಂಗವಾಗಿವೆ. ಒಂದು ...ಯಾವುದಾದರೂ ಒಂದು ದೇಶದಲ್ಲಿ ತಾನು ನೇರವಾಗಿ ...ಪ ಮಾಡುವುದು ಸಾಧ್ಯವಾಗದಿದ್ದರೆ ಆ ಪ್ರದೇಶದ ... ದೇಶಗಳ ಜೊತೆ ಆ ದೇಶಕ್ಕೆ ನಿರಂತರವಾಗಿ ...ವಿರುವಂತೆ ನೋಡಿಕೊಳ್ಳುತ್ತದೆ. ಈಜಿಪ್ಟಿನಲ್ಲಿಯೂ ...ರಿಕದ ಹುನ್ನಾರಗಳಿಗೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ ... ರಾಜಕೀಯ ವಿಶ್ಲೇಷಕರು ಭಾವಿಸುತ್ತಾರೆ. ಸದ್ಯಕ್ಕಂತೂ ...ಶದಲ್ಲಿ ಶಾಂತಿ ನೆಲೆಸುವಂತೆ ಕಾಣುತ್ತಿಲ್ಲ. ಮೋರ್ಸಿಯ ...ರೋಧಿಗಳ ರೀತಿಯಲ್ಲಿ ಮೋರ್ಸಿಯ ಬೆಂಬಲಿಗರೂ ... ಬೀದಿಗಿಳಿದಿದ್ದು ಅವರ ನಡುವೆ ಸರಿಯಾದ ರೀತಿಯ ...ಟ ನಡೆಯುವ ಸಾಧ್ಯತೆ ಇದೆ.

ಈ ಎಲ್ಲ ಬೆಳವಣಿಗೆಗಳಿಂದ ಜಗತ್ತಿನ ಇತರ ದೇಶಗಳು ...ಯುವುದು ಸಾಕಷ್ಟಿದೆ. ಜನರ ಆಶೋತ್ತರಗಳಿಗೆ ...ತ್ಮಕವಾಗಿ ಸ್ಪಂದಿಸದ ಯಾವುದೇ ಸರ್ಕಾರವು ಹೇಗೆ ... ಬೇಗ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ ...ವುದಕ್ಕೆ ಈಜಿಪ್ಟಿನ ಮೋರ್ಸಿ ಸರ್ಕಾರ ಒಂದು ...ಹರಣೆ. ಜನರ ಈ ಮನಸ್ಥಿತಿಯನ್ನು ಬಳಸಿಕೊಂಡು ... ಬೇಳೆ ಬೇಯಿಸಿಕೊಳ್ಳುವ ಯತ್ನ ಮಾಡುವ ...ರಿಕದಂಥ ಬಲಾಢ್ಯ ರಾಷ್ಟ್ರಗಳು ಹುದಿಗಾಲಿನಲ್ಲಿ ...ಯುತ್ತವೆ ಎನ್ನುವುದು ಮತ್ತೆ ಮತ್ತೆ ಸಾಬೀತಾದರೂ ... ಪೂರ್ತಿಯಾಗಿ ಎಚ್ಚೆತ್ತುಕೊಂಡಿಲ್ಲ. ಇದರ ಜತೆಗೆ ...ಂದು ಪ್ರಶ್ನೆಯೂ ಏಳುತ್ತದೆ. ಅಮೆರಿಕದಂಥ ದೇಶಕ್ಕೆ ... ಹೊಡೆಯಬೇಕೆಂದರೆ ಅಲ್ಲಿ ಮೂಲಭೂತವಾದಿ ...ಬೇಕೇ?

...ಮ್ಮ ದೇಶಕ್ಕೆ ಸಂಬಂಧಿಸಿದಂತೆ ನಾವೂ ಒಂದು ... ಕೇಳಿಕೊಳ್ಳಬಹುದೇನೊ? ಈಜಿಪ್ಟ್ ಮುಂತಾದ ...ಕ್ಷ ಲಕ್ಷ ಜನ ಬೀದಿಗಿಳಿದು ಸರ್ಕಾರಗಳ ವಿರುದ್ಧ ...ವುದು, ಅದೂ ತಿಂಗಳುಗಳ ಕಾಲ, ನಮ್ಮ ದೇಶದಲ್ಲಿ [illegible]

● ನಗರಗೆರೆ ರಮೇಶ್



ಸ್ಮಶಾನಕ್ಕೆ ಗೇಟು ಇರಲ್ಲ ಯಾಕೆ ಸಾರ್?

☛ ನಾಲ್ಕು ಜನ ಒಂದು ದಿನದಲ್ಲಿ ಒಂದು ಗೋಡೆ ಕಟ್ಟಿದರೆ, ಎಂಟು ಜನಕ್ಕೆ ಗೋಡೆ ಕಟ್ಟಲು ಎಷ್ಟು ಸಮಯ ಬೇಕಾಗುತ್ತದೆ?

– ಕಿರಿಕ್ ಚಂದ್ರು, ಹಾಸನ

ಒಂದು ನಿಮಿಷಾನೂ ಬೇಕಾಗಿಲ್ಲ ಯಾಕೆಂದ್ರೆ ಗೋಡೆ ಆಗಲೆ ಕಟ್ಟಲಾಗಿದೆ.

☛ ವಿದೇಶಯಾನ ಮಾಡಿದ ಭಾರತದ ಮೊದಲ ಮಹಿಳೆ ಯಾರು ಗುರು?


– ಚಂದ್ರಪ್ಪ ತಿಪಟೂರು

ಸೀತೆ ಕಣಪ್ಪಾ

☛ ಟೆನಿಸ್ ಹುಡುಗಿಯರು ಕೋಟಿ ಕೋಟಿ ದುಡಿದರೂ ಬಟ್ಟೆ ಮಾತ್ರ ಗೇಣುದ್ದ ಯಾಕೆ?

– ಸಾಹೀಲ್, ಮಂಗಳೂರು

ಅವರ ದುಡಿಮೆಯು ಬಟ್ಟೆಯ ಅಳತೆಯ ಮೇಲೂ ತೀರ್ಮಾನವಾಗುವುದರಿಂದ.



☛ ಅವನಿಗೊಂದು ಗುಟ್ಟು ಹೇಳಿದೆ. ಈ ಕಿವಿಲಿ ಕೇಳಿ ಆ ಕಿವಿಲಿ ಬಿಟ್ಟ...!

– ಪುಟ್ಟಸ್ವಾಮಿ, ಮದ್ದೂರು.

ಅವನೇ ವಾಸಿ, ಮಹಿಳೆಯರು ಎರಡೂ ಕಿವಿಯಿಂದ ಕೇಳಿ ಬಾಯಿಂದ ಹೊರ ಹಾಕ್ತಾರೆ.

☛ ಗಂಡ-ಹೆಂಡತಿ ಅಂದರೆ ಒಂದೇ ನಾಣ್ಯದ ಎರಡು ಮುಖ ಇದ್ದಂತೆ ಅಲ್ಲವಾ?

– ಪಂಕಜ, ಮೈಸೂರು.

ಹದ ತಪ್ಪಿದಾಗ ನಾಣ್ಯದ ಮುಖಗಳು ವಿರುದ್ಧ ದಿಕ್ಕಿನಲ್ಲಿರುವುದು ಗೊತ್ತಾಗುತ್ತೆ.



☛ ಸಿದ್ದು ಓಟಕ್ಕೆ, ದೇವೇಗೌಡರ ಆಟವೇನು?

– ಮಣಿಕಂಠ, ಹಂಪಾಪಟ್ಟಣ

ಇನ್ನೇನು... ಕೆಸರೆರಚಾಟ.

☛ ಪತ್ರಿಕೆಯ ಶಿವಸುಂದರ್ ಕಳೆದು ಹೋಗಿದ್ದಾರೆ. ಹುಡುಕಿ ಕೊಡುವಿರಾ ಸಾರ್?

– ಸಂತೋಷ್, ಅಜ್ಜಂಪುರ

ಅವರು ಸಿಕ್ಕರೆ ಒಂತರಾ ಕಷ್ಟ, ಸಿಗದಿದ್ದರೆ ಇನ್ನೊಂತರಾ ಕಷ್ಟ.

☛ ನನ್ನ ಮದುವೆಯಾಗುವ ಹುಡುಗ ನ್ಯಾಷನಲ್ ಜಿಮ್ನಾಸ್ಟಿಕ್ ಪಟು... ಪರವಾಗಿಲ್ವಾ?


– ಎನ್.ಸಿ ಕವನ, ನಾಗೇನಹಳ್ಳಿ

ಸಂಜೆಯಾದ ಮೇಲೆ ಮಾಮೂಲಿ ಗಂಡಸಿನಂತಿರುವುದಾದರೆ ಅಪಾಯವಿಲ್ಲ.

☛ ಚುನಾವಣೆಯಲ್ಲಿ ಸೋತ ರಾಜಕಾರಣಿಗಳು ಈಗೇನು ಮಾಡುತ್ತಿದ್ದಾರೆ?

– ಶ್ವೇತಾ ಸತೀಶ್, ಹೋಚಿಹಳ್ಳಿ, ಕಡೂರು

ಗೆದ್ದವರು ಕಳೆದುಕೊಂಡ ದುಡ್ಡನ್ನು ನೆನೆದು ಸಮಾಧಾನ [illegible] ಇದೆ.



☛ ನಿಮಗೆ ಚೆಡ್ಡಿಗಳನ್ನು ಕಂಡರೆ ಯಾಕೆ ಅಷ್ಟೊಂದು ಕೋಪ?

– ವರ್ಷಾ ವೆಂಕಟೇಶ್, ಅಜ್ಜಂಪುರ

ಸಾಂಕ್ರಾಮಿಕ ರೋಗಿಗಳನ್ನು ಯಾರು ತಾನೆ ಸತ್ಕರಿಸುತ್ತಾರೆ ಹೇಳಿ.

☛ ಸ್ಮಶಾನಕ್ಕೆ ಗೇಟು ಇರಲ್ಲ ಯಾಕೆ ಸಾರ್?

– ರವಿ, ಚಿಕ್ಕಬಳ್ಳಾಪುರ

ಜನ ನಾನಾ ರೀತಿ ಪ್ರವೇಶಿಸುವ ಸಾಧ್ಯತೆ ಇರುವುದರಿಂದ.

☛ ನಟ ಪೂಜಾ ಗಾಂಧಿಗೆ ರಾಮುಲು ಏನೂ ಸಹಾಯ ಮಾಡ್ತಿಲ್ವಂತೆ?

– ರಮೇಶ್, ಕೊಪ್ಪಳ

ಹನುಮಂತನೇ ಹಗ್ಗ ಕಡಿತಿರೋವಾಗ ಪೂಜಾರಿ ಶ್ಯಾವಿಗೆ ಕೇಳಿದನಂತೆ.

☛ ಅತಿಮಬ್ಬೆ ಪ್ರಶಸ್ತಿನ ಪುರುಷರಿಗೆ ಕೊಟ್ಟರೆ ಏನಾಗಿ ಬಿಡುತ್ತೆ ಮಹಾ?

– ಪರಮೇಶ್, ಹನೂರು


ಹಂ.ಪ ನಾಗರಾಜಯ್ಯಗೆ ಕೊಡುವುದಾದರೆ ಕಮಲಾ ಹಂಪನಾ ಒಪ್ಪುತ್ತಾರೆ ಅಷ್ಟೆ.

☛ ಮೋದಿ ಬಾಯಿಂದ ಬರೋದನ್ನೆಲ್ಲಾ 'ಮಹಾನ್' ಎಂಬಂತೆ ಪ್ರಚಾರ ಕೊಡ್ತಿದ್ದಾರಲ್ಲ?

– ಇಬ್ರಾಹಿಂ, ಶಿವಮೊಗ್ಗ

ಇನ್ನೊಂದು ಕಡೆಯಿಂದ ಬರೋದನ್ನೂ 'ಮಹಾನ್' ಅಂತಾ ಬಾಚಿಕೊಳ್ಳಲು ಅಂಬಾನಿಗಳು ರೆಡಿ ಇದಾರೆ ಗೊತ್ತಾ.

(ಸೂಚನೆ: ಕಣ್ಣಾಮುಚ್ಚಾಲೆಗೆ ಪ್ರಶ್ನೆ ಕಳುಹಿಸುವವರು [illegible] ಮೂಲಕ, ಮೊಬೈಲ್ ನಂ. 9980331427ಗೆ SMS ಮತ್ತು kannamucchale@gmail.com ಗೆ [illegible] ಮೂಲಕವೂ ಕಳುಹಿಸಬಹುದು. [illegible])



ಕಾಯ್ದೆಗಳ ಗಣಕೀಕರಣ'ಕ್ಕಾಗಿ ಐದು ಕೋಟಿ ರೂ. ಮೀಸಲಿಟ್ಟಿರುವುದು!!

ಇನ್ನು ಉಳಿದ ಒಂದು ಅಂಶ 'ಆರ್.ಎಸ್.ಬಿ.ವೈ ಯೋಜನೆಯಡಿ ನಮ್ಮ ರಾಜ್ಯದ ಬಿಪಿಎಲ್ ಪಟ್ಟಿ ಆಧಾರದ ಮೇಲೆ ಫಲಾನುಭವಿಗಳನ್ನು ಗುರುತಿಸಲಾಗುವುದು'. ಇದರಲ್ಲಿ ಹೊಸದೇನೂ ಇಲ್ಲ. ಇದು ಈಗಾಗಲೇ ಜಾರಿಯಲ್ಲಿದೆ. ಅಷ್ಟು ಮಾತ್ರವಲ್ಲಾ, ಹಾಲಿ ಯಾರ್ಯಾರೆಲ್ಲಾ ಬಿಪಿಎಲ್ ಕಾರ್ಡ್ ಹೊಂದಿದ್ದಾರೋ ಅಥವಾ ಈ ಸರ್ಕಾರವು ಇನ್ನೂ ಯಾರ್ಯಾರಿಗೆಲ್ಲಾ ಬಿಪಿಎಲ್ ಕಾರ್ಡ್ ಕೊಡುತ್ತದೋ ಅವರೆಲ್ಲಾ ಆರ್.ಎಸ್.ಬಿ.ವೈ ಯೋಜನೆಗೆ ಅರ್ಹರಲ್ಲ! ಬದಲಿಗೆ 2004ರಲ್ಲಿ - ಅತ್ಯಂತ ಕಠಿಣ ಮಾನದಂಡಗಳ ಮೂಲಕ ಯಾರನ್ನು ಬಿಪಿಎಲ್ ಎಂದು

ಬಜೆಟ್‌ನ ಅತ್ಯಂತ ದೊಡ್ಡ ಸಮಸ್ಯೆಯ ಹಿಂದೆಯೂ ಕಾಣುತ್ತದೆ. ಬಜೆಟ್‌ಗೆ ಪೂರ್ವಭಾವಿಯಾಗಿ ವಿವಿಧ ಜನವರ್ಗಗಳ ಸಂಘಟನೆಗಳು, ಪ್ರತಿನಿಧಿಗಳ ಜೊತೆ ಮಾಡಿದ ಚರ್ಚೆಗಳಲ್ಲಿ ಎದ್ದು ಕಾಣುತ್ತಿದ್ದುದು ಕಾರ್ಮಿಕ ಸಂಘಟನೆಗಳ ಜೊತೆ ಅಂತಹ ಯಾವುದೇ ಚರ್ಚೆ ನಡೆಯದೇ ಇದ್ದುದು.

ಪೌರಕಾರ್ಮಿಕರ ಕುರಿತಾಗಿ ನಗರಾಭಿವೃದ್ಧಿ ಶೀರ್ಷಿಕೆಯಡಿ ಹೇಳಿರುವುದನ್ನೂ ಗಮನಿಸಬೇಕು. 'ಹೊರಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರ ಸೇವೆಯನ್ನು ಪಡೆಯುವ ವ್ಯವಸ್ಥೆಯನ್ನು ಹಂತಹಂತವಾಗಿ ನಿಲ್ಲಿಸಲಾಗುವುದು. ಬಿ.ಬಿ.ಎಂ.ಪಿ ಹಾಗೂ ರಾಜ್ಯದ ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ

ಈ ಬಜೆಟ್‌ಗಳಲ್ಲಿ ಎಷ್ಟು ಅನುದಾನ ಎಂದು ಹೇ... ಯಥಾವತ್ತಾಗಿ ಪುನರ್‌ಮುದ್ರಿಸಲಾಗಿದೆ. ಆದರೆ ಕಾರ್ಮಿ... ಸಂಬಂಧಿಸಿದಂತೆ ಇದ್ದ ವೇತನ ನಿಗದಿ ಮಂಡ... ವಿಚಾರವನ್ನು ಕಾಟಾಚಾರಕ್ಕೂ ಪ್ರಕಟಿಸಿಲ್ಲ.

ಹೊಸ ನೇಮಕಾತಿ ವಿಚಾರದಲ್ಲಿ ಪ್ರಾಥಮಿಕ ... ಪ್ರೌಢಶಾಲೆಗಳಿಗೆ ನೇಮಿಸಿಕೊಳ್ಳುವ ಬಗ್ಗೆ ಹೇಳಲಾ... ಆದರೆ ಬಜೆಟ್‌ಗೆ ಸಾಕಷ್ಟು ಮುಂಚೆಯೇ ಎಸ್‌ಡಿಎಂ... ಮೂಲಕ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳ... ಎಂದು ಹೇಳಿದ್ದುದನ್ನು ಬಜೆಟ್‌ನ ಭರ... ಅಲ್ಲಗಳೆಯುವುದಿಲ್ಲ. ಕರ್ನಾಟಕದ ಶಿಕ್ಷಣದ ಇತಿಹಾ... ಶಾಲಾ ವ್ಯವಸ್ಥೆಯಲ್ಲಿ ಇಲ್ಲದಿದ್ದ ಗುತ್ತಿಗೆ ಪದ್ಧತಿ ...

ಸಿದ್ಧರಾಮಯ್ಯನವರ ಕರ್ನಾಟಕದಲ್ಲಿ ಕಾರ್ಮಿಕರೇ ಇಲ...


ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಮಂಡಿಸಿದ್ದಾರೆ. ಕೆಲವು ಒಳ್ಳೆಯ ಕಾರ್ಯಕ್ರಮಗಳು ಇವೆ. ಒಂದೆರಡು ದೂರದೃಷ್ಟಿಯ ಯೋಜನೆಗಳೂ ಇವೆ. ಮಿಕ್ಕಂತೆ, ಕಳೆದೊಂದು ದಶಕದಿಂದ ಚಾಲ್ತಿಯಲ್ಲಿರುವ 'ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ' (Fiscal responsibility and Budget management Act) ಯನ್ನು ದಾಟದಂತಹ ಮೂಲಭೂತ ನೀತಿಯ ಬದಲಾವಣೆ ಇವರಲ್ಲಿ ಕಾಣುತ್ತಿಲ್ಲ, ಕಳೆದ ಆರು ಬಜೆಟ್‌ಗಳಲ್ಲಿ ಮತ್ತು ಅದರ ಅನುಷ್ಠಾನದಲ್ಲಿ ಇದ್ದ ಆರ್ಥಿಕ ಅಶಿಸ್ತು ಹಾಗೂ ಬೇಕಾಬಿಟ್ಟಿ ಮಂಜೂರಾತಿಗಳು ಸಿದ್ದರಾಮಯ್ಯನವರ 'ಆರ್ಥಿಕ ನೀತಿ'ಯಲ್ಲಿ ಇರುವುದಿಲ್ಲ ಎಂದು ಭಾವಿಸಬಹುದು.

ಆದರೆ ಇಡೀ ಆಯವ್ಯಯದಲ್ಲಿ ಅತ್ಯಂತ ಎದ್ದು ಕಾಣುವ, ಗಾಭರಿಗೊಳಿಸುವ ಸಂಗತಿಯೊಂದಿದೆ. ಅದೇನೆಂದರೆ 'ಸಿದ್ದರಾಮಯ್ಯನವರ ಕರ್ನಾಟಕದಲ್ಲಿ ಕಾರ್ಮಿಕರೇ ಇಲ್ಲ'. ಹಾಗಾಗಿ ಅವರು ಕಾರ್ಮಿಕರ ಪರವಾಗಿ ಒಂದೇ ಒಂದು ನೀತಿಯನ್ನು, ಕಾರ್ಯಕ್ರಮವನ್ನು ಪ್ರಕಟಿಸಿಲ್ಲ ಬದಲಿಗೆ - ಬಹುಶಃ ಕಾರ್ಮಿಕರೇ ಈ ರಾಜ್ಯದಲ್ಲಿ ಇಲ್ಲದೇ ಇರುವುದರಿಂದ - ಕಾರ್ಮಿಕರನ್ನು ರೂಪಿಸಲಿಕ್ಕಾಗಿ ಕೌಶಲ ಅಭಿವೃದ್ಧಿ, ತರಬೇತಿ ಹೆಸರಿನಲ್ಲಿ ಹತ್ತಾರು ಯೋಜನೆಗಳನ್ನು ಹೆಸರಿಸಿದ್ದಾರೆ..!

ಇದೇನಾದರೂ ನಮ್ಮ ಕಣ್ತಪ್ಪಿನಿಂದ ಆಗಿರಬಹುದಾ ಎಂದು 143 ಪುಟಗಳ ಇಡೀ ಆಯವ್ಯಯದ ಕನ್ನಡ ಪ್ರತಿಯನ್ನು 2-3 ಬಾರಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ ಇದು ಸತ್ಯ. ಪುಟ 73, 74 ಮತ್ತು 75ರಲ್ಲಿ 'ಕಾರ್ಮಿಕ, ಉದ್ಯೋಗ ಮತ್ತು ತರಬೇತಿ' ಎಂಬ ಶೀರ್ಷಿಕೆಯಡಿ ಒಟ್ಟು ಒಂಬತ್ತು ಅಂಶಗಳಿವೆ. ಇದರಲ್ಲಿ ಆರು, ಹೊಸ ಕಾರ್ಮಿಕರನ್ನು ಸೃಷ್ಟಿಸಲಿಕ್ಕಾಗಿ ತರಬೇತಿ ಕೇಂದ್ರಗಳ ಕುರಿತಂತೆ ಇರುವವು! ಒಂದು ಅಂಶ ಒಟ್ಟಾರೆ ಎಷ್ಟು ಹಣ ಈ ಬಾಬ್ತಿಗೆ ಮೀಸಲಿಟ್ಟಿದೆ ಎಂಬುದು (ಯಾವ ಹೊಸ ಕಾರ್ಯಕ್ರಮಗಳೂ ಇಲ್ಲ ಎಂದ ಮೇಲೆ ತರಬೇತಿ ಕೇಂದ್ರಗಳು ಮತ್ತು ಇಲಾಖೆಯ ನಿತ್ಯದ ಖರ್ಚಿಗೆ ಸೀಮಿತವಾದ ಹಣ ಇದು). ಇನ್ನೊಂದು ಅಂಶ, 'ಕಾರ್ಮಿಕ

ಸೀಮಿತಗೊಳಿಸಲಾಗಿತ್ತೋ ಅವರಷ್ಟೇ ಅರ್ಹರು. ಇದನ್ನು ಬದಲಿಸುವ ಇರಾದೆ ಸಿದ್ದರಾಮಯ್ಯನವರಿಗೆ ಇರುವುದರ ಕುರಿತು ಈ ವಾಕ್ಯ ಏನನ್ನೂ ಸ್ಪಷ್ಟಪಡಿಸುವುದಿಲ್ಲ.

ಇವಿಷ್ಟೂ ಹೇಳುವುದು ಈ ರಾಜ್ಯದಲ್ಲಿ ಕಾರ್ಮಿಕ ವರ್ಗ ಎಂಬುದು ಅಸ್ತಿತ್ವದಲ್ಲಿಲ್ಲ ಎಂದು ಮಾತ್ರ. ವಿವಿಧ ದಮನಿತ ಸಮುದಾಯಗಳನ್ನು ಹುಡುಕಿ ಅವುಗಳಿಗೆ ಏನಾದರೂ ಸಹಾಯ ಕಾಣಿಸುವುದು ಈ ಆಯವ್ಯಯದ ಒಂದೆರಡು ಪುಟಗಳಲ್ಲಿ ಕಂಡು ಬರುತ್ತದೆ. ಆದರೆ 'ಅತ್ಯಂತ ಬಹುಸಂಖ್ಯಾತ' ವರ್ಗವಾದ ಕಾರ್ಮಿಕರು ಇಲ್ಲವೇ ಇಲ್ಲ ಎಂಬಂತೆ ಆಗಿರುವುದು ಆಕಸ್ಮಾತ್ತಾಗಿ ಬಿಟ್ಟು ಹೋಗಿರುವುದು ಅಲ್ಲ; ಇದರ ಹಿಂದೆ ಇಂದು ನಮ್ಮ ದೇಶ ಹಾಗೂ ರಾಜ್ಯದಲ್ಲಿ ಚಲಾವಣೆಯಲ್ಲಿರುವ ಮಧ್ಯಮ ವರ್ಗ ಮತ್ತು ಮೇಲ್ವರ್ಗ ಕೇಂದ್ರಿತ ರಾಜಕೀಯಾರ್ಥಿಕ ನೀತಿಯೇ ಇದೆ. ಮೇಲ್ವರ್ಗವೇ ಸರ್ಕಾರದ ನೀತಿಗಳನ್ನು ಪ್ರಭಾವಿಸುತ್ತದೆ ಮತ್ತು ರೂಪಿಸುತ್ತದೆ ಎಂಬುದು ಸ್ಪಷ್ಟ. ಆದರೆ ಸಂಸದೀಯ ಪ್ರಜಾತಂತ್ರದ ಅನಿವಾರ್ಯತೆಗಳ ಕಾರಣದಿಂದ ಐದು ವರ್ಷಕ್ಕೊಮ್ಮೆಯಾದರೂ ಜನರ ಬಳಿ ಹೋಗಬೇಕಾಗುತ್ತದೆ. ಹಾಗಾಗಿ ವೋಟ್‌ಬ್ಯಾಂಕ್‌ಗಳನ್ನು ಸೃಷ್ಟಿಸಿಕೊಳ್ಳುವುದು ಮತ್ತು ಅವುಗಳನ್ನು ಉಳಿಸಿಕೊಂಡು ಬರುವುದು ಅಧಿಕಾರಸ್ಥರಿಗೆ ಅಗತ್ಯ. ಈ ವೋಟ್‌ಬ್ಯಾಂಕ್‌ಗಳೆಂದರೆ ಅವರು ದೊಡ್ಡ ಸಂಖ್ಯೆಯಲ್ಲಿ ಮತದಾನ ಮಾಡುವ ಬಡವರು ಮತ್ತು ಕೆಳ ಮಧ್ಯಮ ವರ್ಗದವರಲ್ಲ, ಬದಲಿಗೆ, ಅವರ ಪರವಾಗಿ ಎಂಬಂತೆ ಜೋರಾಗಿ ಸದ್ದು ಮಾಡುವ ವಿವಿಧ ಸಮುದಾಯಗಳ ಮಧ್ಯಮ ವರ್ಗದ ಜನರಾಗಿದ್ದಾರೆ. ಯಾವಾಗೆಲ್ಲಾ ಜನಪರ ಎಂಬ ಹೆಸರಿನಲ್ಲಿ ನೀತಿಗಳು ಜಾರಿಯಾಗುತ್ತವೆಯೋ ಆಗೆಲ್ಲಾ ಈ ವರ್ಗವು ಒಂದಷ್ಟು ಲಾಭವನ್ನು ಮಾಡಿಕೊಳ್ಳುತ್ತದೆ. ಅದೇ ಸಿದ್ದರಾಮಯ್ಯನವರ



ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಲಾಗಿದೆ. ಹಾಲಿ 30ಕ್ಕೂ ಹೆಚ್ಚು ವರ್ಷಗಳಿಂದ ಗುತ್ತಿಗೆ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡಿಕೊಳ್ಳುವ ಕುರಿತು ಇದರಲ್ಲಿ ಏನೂ ಇಲ್ಲ. ಬೆಂಗಳೂರಿನಲ್ಲೇ ಹಳೆಯ ಕಂಟ್ರಾಕ್ಟರುಗಳ ಜಾಗದಲ್ಲಿ ಒಂದು ಕಾರ್ಪೋರೇಟ್ ಕಂಪೆನಿಗೆ ಗಣನೀಯ ಭಾಗದ ಕಸ ನಿರ್ವಹಣೆಯ ಗುತ್ತಿಗೆಯನ್ನು ನೀಡಲಾಗಿದೆ. ಆ ಕಂಪೆನಿಯು ಇರುವ ಗುತ್ತಿಗೆ ಕಾರ್ಮಿಕರನ್ನು ನಿಧಾನಕ್ಕೆ ಕಿತ್ತುಹಾಕುತ್ತಿದೆ. ಇರುವವರನ್ನೇ ಕಿತ್ತುಹಾಕಿಬಿಟ್ಟು, ನಂತರ ಕೆಲವರನ್ನು ಖಾಯಂ ಕಾರ್ಮಿಕರನ್ನಾಗಿ ತೆಗೆದುಕೊಳ್ಳಲೂಬಹುದು; ಅತ್ಯಂತ ದಮನಿತ ಸಮುದಾಯವಾದ ಪೌರಕಾರ್ಮಿಕರ ಕುರಿತಾಗಿ ತನ್ನ ಪ್ರಣಾಳಿಕೆಯಲ್ಲಿನ ಭರವಸೆಯ ಹೊರತಾಗಿಯೂ ಕಾಂಗ್ರೆಸ್ ಸರ್ಕಾರ ಪ್ರಕಟಿಸಿರುವ ಬದ್ಧತೆ ಇದು.

ಕಾರ್ಮಿಕ ಶೀರ್ಷಿಕೆಯಡಿಯಲ್ಲದೇ ನೇಕಾರರ ಕುರಿತಾಗಿ ಕೆಲವು ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆಯಾದರೂ, ಅವುಗಳಲ್ಲಿ ನೇಕಾರ ಕಾರ್ಮಿಕರಿಗೆ ಸಂಬಂಧಿಸಿದ ಯೋಜನೆಗಳಿಲ್ಲ, ತನ್ನ ಪ್ರಣಾಳಿಕೆಯ ಹಲವು ಅಂಶಗಳನ್ನು

ಜೀತದ ವ್ಯವಸ್ಥೆಯನ್ನು ಈ ಸರ್ಕಾರ ತರಲಿದೆ ... ಆತಂಕವಷ್ಟೇ ಕಾಣುತ್ತದೆ.

ಆರೋಗ್ಯ ಬಿಮಾ ಯೋಜನೆಯನ್ನು ... ಕಾರ್ಮಿಕ ವರ್ಗಗಳಿಗೆ ವಿಸ್ತರಿಸುವ ... ಆರೋಗ್ಯದ ಶೀರ್ಷಿಕೆಯಡಿ ಹೇಳಲಾಗಿದೆ. ... ಅದರಲ್ಲೂ ವಿಮಾ ಕಂಪೆನಿಗಳಿಗೆ ಅನುಕ... ಮಾಡಿಕೊಡುವಂತೆ ಹಾಗೂ ಸರ್ಕಾರದ ಅನು... ಹೆಚ್ಚೇನೂ ಖರ್ಚಾಗದಂತೆ 'ಭಾಗೀದ... ಕೊಡುಗೆ'ಯನ್ನೂ ಆಧರಿಸಿ ನೂತನ ಆರು... ವಿಮೆಯ ಪ್ರಸ್ತಾಪವಷ್ಟೇ ಇದೆ. ಅಂದರೆ ... ಬಜೆಟ್‌ನ ಮೂಲೆ ಮೂಲೆಗಳನ್ನು ಹುಡುಕಿದ... ಒಂದು ವರ್ಗವಾಗಿ ಕಾರ್ಮಿಕರು ಏನ... ಪಡೆದುಕೊಂಡಿಲ್ಲ ಎಂಬುದು ಎದ್ದು ಕಾಣು...

ಅನ್ನಭಾಗ್ಯ ಯೋಜನೆ, ಗುಡಿಸಲು ಬದ... ವಸತಿ, ಪರಿಶಿಷ್ಟ ಜಾತಿ, ಹಿಂದು... ಸಮುದಾಯಗಳಿಗೆಂದು ಪ್ರಕಟಿಸಲ... ಯೋಜನೆಗಳು ಇದೇ ಕಾರ್ಮಿಕ ವರ... ಅನುಕೂಲ ಮಾಡಿಕೊಡುತ್ತದಲ್ಲಾ ಎಂಬ ... ಏಳುತ್ತದೆ. ಇಡೀ ಕಾರ್ಮಿಕ ವರ್ಗಕ್ಕೆ (ಬಿಪಿ... ಕಾರ್ಡ್ ನೀಡಲು ಇರುವ ಮಾನದಂಡಗ... ಸಡಿಲಿಸಿದರೆ ಮಾತ್ರ) ಅನುಕೂಲವಾಗಬಹುದ... ಅನ್ನಭಾಗ್ಯ ಯೋಜನೆ ಒಂದೇ ಆಗಿದೆ. ಉಳಿ... ವಿವಿಧ ಜಾತಿ, ಪಂಗಡಗಳಿಗೆಂ... ರೂಪಿಸಲಾಗಿರುವ ಎಲ್ಲಾ ಯೋಜನೆಗಳು ಆ... ಸಮುದಾಯಗಳ ಒಂದು ಸಣ್ಣ ವಿಭಾ... (ಅವರಲ್ಲೂ ಯಾರು ಅದನ್ನು ಪಡೆದುಕೊ... ಸಮರ್ಥರಾಗಿರುತ್ತಾರೋ ಅವರಿಗೆ) ವ... ಅನುಕೂಲ ಮಾಡಿಕೊಡುತ್ತವೆ. ಹಾಗಾಗಿ ಆ... ಸಮುದಾಯಗಳ ತಳಸ್ತರದಲ್ಲಿರುವುದು ಅಸಂಘ... ಕಾರ್ಮಿಕರೇ ಆಗಿರುವುದರಿಂದ ಅವರ ಪರವಾಗಿ ... ಬಜೆಟ್ ಸಂಪೂರ್ಣವಾಗಿ ನಿರ್ಲಕ್ಷ್ಯ ವಹಿಸಿರುವುದು ... ನಿರಾಶೆಯನ್ನು ಉಂಟು ಮಾಡಿದೆ.

ಕನಿಷ್ಠ ವೇತನದಲ್ಲಿ ಹೆಚ್ಚಳ, ಗುತ್ತಿಗೆ ಕಾರ್ಮಿಕರ ಖಾ... ಮತ್ತು ಕೆಲಸದ ಭದ್ರತೆ, ಅಸಂಘಟಿತ ವಲ... ಕಾರ್ಮಿಕರಿಗೆ ತಮಿಳುನಾಡು ಹಾಗೂ ಮಹಾ... ಮಾದರಿಯಲ್ಲಿ ಸರ್ಕಾರಿ ಅನುದಾನದ ಪ್ರತ್ಯೇಕ ಕ... ಮಂಡಳಿಗಳು ಇಂತಹ ಬೇಡಿಕೆಗಳು ಕಾ... ಸಂಘಟನೆಗಳು ನಿರಂತರ ಹೋರಾಟದ ಮೂ... ಮುಂದಿಟ್ಟವಂಥವಾಗಿವೆ. ಅವುಗಳನ್ನಾಗಲೀ ಅ... ಇನ್ನಾವುದೇ ಕನಿಷ್ಠ ಕಾರ್ಯಕ್ರಮಗಳನ್ನಾಗಲೀ ನಿ... ಈ ಬಜೆಟ್‌ನ ವಿರುದ್ಧ ಕಾರ್ಮಿಕ ಸಂಘಟನೆ... ಪ್ರತಿಭಟಿಸುವುದು ಅತ್ಯಂತ ಜರೂರಾದ ಸಂಗತಿಯಾ... ಅದರಿಂದಲಾದರೂ ಸಿದ್ದರಾಮಯ್ಯನವರು ಎಚ್ಚೆತ್ತುಕೊ... ಅಧಿವೇಶನದಲ್ಲಿ ಬಜೆಟ್‌ಗೆ ಮಾಡುವ ತಿದ್ದುಪಡಿ... ಸೇರಿಸಿಕೊಳ್ಳುತ್ತಾರೆಂದು ನಿರೀಕ್ಷಿಸಬಹುದೇ?

ಕರ್ನಾಟಕ ಶ್ರಮಿಕಶಕ್ತಿಯ ಪ್ರತಿಭಟನೆ

ಬಜೆಟ್ ಮಂಡನೆಯಾದ 2 ದಿನಗಳಲ್ಲಿ (ಜುಲೈ 14) ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದ ಕರ್ನಾಟಕ ಶ್ರಮಿಕಶಕ್ತಿಯು ಮೇಲ್ಕಂಡ ವಿಚಾರಗಳನ್ನು ಚರ್ಚಿಸಲು ಯತ್ನಿಸಿತು. ಅದರಲ್ಲಿ ಕಂಡುಬಂದ 3-4 ಅಂಶಗಳು ಗಮನಾರ್ಹವಾಗಿದೆ.

1. ಅನ್ನಭಾಗ್ಯ ಯೋಜನೆಯನ್ನು ಜಾರಿ ಮಾಡಲು ತಳಮಟ್ಟದಲ್ಲಿ ಕೆಲಸ ಮಾಡುವ ಸುಮಾರು 10,000ಕ್ಕೂ ಹೆಚ್ಚು ಲೋಡಿಂಗ್ ಮತ್ತು ಅನ್‌ಲೋಡಿಂಗ್ (ಹಮಾಲಿ) ಕಾರ್ಮಿಕರಿಗೆ ಯಾವ ಭಾಗ್ಯವೂ ಸಿಗುತ್ತಿಲ್ಲ. 30ಕ್ಕೂ ಹೆಚ್ಚು ವರ್ಷಗಳಿಂದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಡಿ ಕೆಲಸ ಮಾಡುತ್ತಿರುವ ಈ ಕಾರ್ಮಿಕರಲ್ಲಿ ಇಡೀ ರಾಜ್ಯದಲ್ಲಿ ಒಬ್ಬರೂ ಸಹಾ ಕಾರ್ಮಿಕ ಕಾಯ್ದೆಯಡಿ ಒಂದು ಸೌಲಭ್ಯವನ್ನೂ ಪಡೆದುಕೊಂಡಿಲ್ಲ, ಅರ್ಥಾತ್ ಆಹಾರ ಇಲಾಖೆಯಾಗಲೀ, ಕಾರ್ಮಿಕ ಇಲಾಖೆಯಾಗಲೀ ಅದನ್ನು ಖಾತರಿಗೊಳಿಸಿಲ್ಲ.


2. ಕರ್ನಾಟಕ ಸರ್ಕಾರವು 77 ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿಗದಿ ಮಾಡಿರುವ ಕನಿಷ್ಠ ವೇತನವು ಪಕ್ಕದ ಆಂಧ್ರಪ್ರದೇಶದ ವೇತನದ ಅರ್ಧದಷ್ಟಿದೆ. ಆ ಪಕ್ಕದ ಮಹಾರಾಷ್ಟ್ರದಲ್ಲಿ 1969ರಲ್ಲೇ ಜಾರಿಗೆ ಬಂದ ಹಮಾಲಿ ಕಾರ್ಮಿಕರ ಕಲ್ಯಾಣ ಕಾಯ್ದೆ ಇದುವರೆಗೂ ಕರ್ನಾಟಕದಲ್ಲಿ ಬಂದಿಲ್ಲ. ಈ ಪಕ್ಕದ ತಮಿಳುನಾಡಿನಲ್ಲಿ ಅಸಂಘಟಿತ ವಲಯದ 67 ವಿಭಾಗಗಳಿಗೆ ಪ್ರತ್ಯೇಕ ಕಲ್ಯಾಣ ಮಂಡಳಿಗಳನ್ನು ಸರ್ಕಾರವು ಸ್ಥಾಪಿಸಿದ್ದರೆ ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರಿಗೆ ಮಾತ್ರ ಕಲ್ಯಾಣ ಮಂಡಳಿಯಿದೆ.

3. 1997ರಲ್ಲೇ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸಿಂಗ್ ವಿಭಾಗದಲ್ಲಿ ಗುತ್ತಿಗೆ ಪದ್ಧತಿಯನ್ನು ಸರ್ಕಾರವೇ ನಿಷೇಧಿಸಿದ್ದರೂ, ...ಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ನರ್ಸ್‌ಗಳಿದ್ದಾರೆ. ತಮ್ಮನ್ನು ಖಾಯಂ ಮಾಡಿಕೊಳ್ಳಿ ಎಂದು ಕೇಳಿದರೆ ಅ...ರನ್ನು ಕೆಲಸದಿಂದಲೇ ಕಿತ್ತುಹಾಕಿ ಹೊಸಬರನ್ನು ನೇಮಕ ಮಾಡಿಕೊಳ್ಳಲು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹೊ...ಟದೆ.

4. 1997ರಲ್ಲಿ ಹಲವು ಕೈಗಾರಿಕಾ ವಿಭಾಗಗಳಲ್ಲಿ ಗುತ್ತಿಗೆ ಪದ್ಧತಿಯನ್ನು ನಿಷೇಧಿಸಿ ಸರ್ಕಾರವೇ ಹೊರಡಿಸಿದ್ದ ಆದೇಶವನ್ನು ನಂತರ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದ್ದರೂ,2003ರಲ್ಲಿ ಅದನ್ನು ತಾನೇ ವಾಪಸ್ ತೆಗೆದುಕೊಂಡಿದೆ.

5. 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡಬೇಕೆಂದು ಹೇಳುವ ಗುತ್ತಿಗೆ ಕಾರ್ಮಿಕ ಪದ್ಧತಿ (ನಿಯಂತ್ರಣ ಮತ್ತು ರದ್ದತಿ) ಕಾಯ್ದೆಯ ಕಲಂನ ಅಡಿಯಲ್ಲಿ, ಅದು ಜಾರಿಗೆ ಬಂದಾಗಿನಿಂದ ಇದುವರೆಗೆ ಒಂದೇ ಒಂದು ಆದೇಶವನ್ನೂ ಕಾರ್ಮಿಕ ಇಲಾಖೆ ಹೊರಡಿಸಿಲ್ಲ. ಆದರೂ ಅದನ್ನು ಕಾರ್ಮಿಕ ಇಲಾಖೆ ಎಂದೇ ಕರೆಯಲಾಗುತ್ತದೆ. 'ಕಾರ್ಪೋರೇಟ್ ಏಜೆಂಟ್ ಇಲಾಖೆ' ಎಂದು ಹೆಸರು ಬದಲಿಸುವ ಯಾವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲ.

ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸ...




ಜುಲೈ 14ರ ಸಮಾವೇಶದಲ್ಲಿ ಮಂತ್ರಿ ದಿನ... ಗುಂಡೂರಾವ್ ಮನವಿ ಸ್ವೀಕರಿಸಿ ತಮ್ಮ ಸರ್ಕಾ... ಜನಸಾಮಾನ್ಯರ ಕಲ್ಯಾಣದ ವಿಚಾರದಲ್ಲಿ ಬದ್ಧತೆಯ... ಹೊಂದಿದೆ ಎಂದು ಒತ್ತಿ ಒತ್ತಿ ಹೇಳಿದರು. ಈ ಮಾ... ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಹೇ... ಸಿದ್ದರಾಮಯ್ಯನವರು ಅದೆಷ್ಟೋ ಸಾರಿ ಹೇಳ... ಬಂದಿದ್ದಾರೆ. ಆಮ್ ಆದ್ಮಿಯೇ ತಮ್ಮ ಆದ್ಯತೆ ಎಂ... ಕಾಂಗ್ರೆಸ್ ಪಕ್ಷವು ಸಾರುತ್ತಿದೆ. ಹಾಗಾದರೆ ಕರ್ನಾಟ... ಅಸಂಘಟಿತ ಮತ್ತು ಗುತ್ತಿಗೆ ಕಾರ್ಮಿಕರು ಬ... ಮಂಡನೆಯ ಎರಡು ದಿನದಲ್ಲಿ ಕೇಳಿರುವ ಪ್ರಶ್ನೆ... ತನ್ನ ನಿರ್ದಿಷ್ಟ ಯೋಜನೆಗಳ ಮೂಲಕ ಸಿದ್ದರಾಮಯ್ಯ... ಸರ್ಕಾರವು ಉತ್ತರಿಸುತ್ತದೆಯೇ?

ಮುಡಿಗನ್ನಡಿ
...ಹಿತಿ-ಕಲಾವಿದ-ಚಿಂತಕರ
ಸಂದರ್ಶನ

ಬೌದ್ಧತ್ವ ನನಗೆ ಸ್ವಾಭಿಮಾನ ಕೊಟ್ಟಿದೆ

–ಮುಡ್ನಾಕೂಡು ಚಿನ್ನಸ್ವಾಮಿ

● ಹುಲಿಕುಂಟೆ ಮೂರ್ತಿ ಮತ್ತು ದೇವರಾಜ್. ಆರ್


ಎರಡು ದಶಕಗಳ ಹಿಂದಿನ ಮುಡ್ನಾಕೂಡು

...ನ್ನಡದ ಹಿರಿಯ ಕವಿಗಳಲ್ಲೊಬ್ಬರಾದ ಮೂಡ್ನಾಕೂಡು ...ಸ್ವಾಮಿಯವರು ತಮ್ಮ ವಿಶಿಷ್ಟ ಕಾವ್ಯಾಭಿವ್ಯಕ್ತಿಯ ಮೂಲಕ ...ಪರಿಚಿತರು. ಶತಮಾನಗಳ ನೋವನ್ನು ತಣ್ಣಗೆ ...ಭವಿಸುತ್ತಾ ಶೋಷಣೆಗೆ ಒಳಗಾಗಿರುವ- ...ಗುತ್ತಿರುವ ದಲಿತ ಸಮುದಾಯಕ್ಕೆ ಸೇರಿದವರು ...ಸ್ವಾಮಿ. ಘೋಷಿತ ದಲಿತ ಸಾಹಿತಿಗಳಿಗಿಂತ ಭಿನ್ನವಾಗಿ ...ಸು ಬದುಕುತ್ತಿರುವವರು. ಬುದ್ಧಗುರುವಿನ ...ಕಾರುಣ್ಯದ ಘಮಲಿಗೆ ಮೈ ಆನಿಸಿ ಬದುಕು ...ಕೊಂಡಂತೆಯೇ ಅವರ ಅಕ್ಷರಗಳೂ ತಥಾಗತನ ಧ್ಯಾನದ ...ಅಕ್ಷರಗಳಂತೆ ಲೋಕದೆದುರು ನೋವನ್ನು ನುಂಗಿ ನಕ್ಕ ...ಮುಗಳಂತೆ ಕಾಣುತ್ತವೆ. ಅವರು ಇಪ್ಪತ್ತಕ್ಕೂ ಹೆಚ್ಚು ...ಗಳನ್ನು ರಚಿಸಿದ್ದಾರೆ.

...ಇಂಗ್ಲಿಷ್, ಹಿಬ್ರೂ, ಮೊದಲಾದ ಭಾಷೆಗಳಿಗೆ ...ಸ್ವಾಮಿಯವರ ಕಾವ್ಯ ಅನುವಾದಗೊಂಡಿವೆ. ಸ್ಪಾನಿಶ್ ...ಗೆ ಅನುವಾದಗೊಂಡ ಪ್ರಥಮ ಕನ್ನಡ ಕವಿ ಎಂಬ ...ಕೆ ಅವರದ್ದು. ವೆನುಜುವೆಲಾ, ನಿಕರಾಗುವಾ ಮೊದಲಾದ ...ಗಳಲ್ಲಿ ಇವರ ಕಾವ್ಯವನ್ನು ಮೆಚ್ಚಿಕೊಂಡವರಿದ್ದಾರೆ. ...ಜಲೆಂನಲ್ಲಂತೂ ಇವರ 'ನಾನೊಂದು ಮರವಾಗಿದ್ದರೆ' ...ವನ್ನು ರೂಪಕವಾಗಿ ರಂಗದ ಮೇಲೆ ತಂದು ಅದರ ...ಕ್ಕೆ ಕಣ್ಣೀರಾದವರಿದ್ದಾರೆ. ಬರಹವೆಂದರೆ ನೋವನ್ನು ...ಕೊಳ್ಳುವುದಕ್ಕಿಂತ ಹೆಚ್ಚಾಗಿ ಅದನ್ನು ಒಳಗೇ ...ಭವಿಸುವುದು ಎನ್ನುವ ಚಿನ್ನಸ್ವಾಮಿಯವರು, ತಾವೊಬ್ಬ ... ಕವಿ ಹೇಗೋ ಹಾಗೇ ತಾವೊಬ್ಬ ಕನ್ನಡ ಕವಿ ... ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಕನ್ನಡ ಜನತೆ ... ಕಾವ್ಯಕ್ಕೆ ತೋರಿದ ಪ್ರೀತಿಯನ್ನು ಕಂಡು ಹಿಗ್ಗುತ್ತಾರೆ. ... ಹಲವಾರು ಕವಿತೆಗಳು ಹಾಗೂ ನಾಟಕ ...ಪುಸ್ತಕಗಳಲ್ಲಿ ಸೇರಿವೆ.

...ಇಂಥಾ ಮುಡ್ನಾಕೂಡು ಚಿನ್ನಸ್ವಾಮಿಯವರು ...ನ್ನೊಂದಿಗೆ ಮಾತಿಗೆ ಸಿಕ್ಕಿದ್ದರು. ಪ್ರೀತಿಯಿಂದ ...ಮಾತನಾಡಿದರು.

...ಪ್ರಶ್ನೆ: ಅಕ್ಷರ ಕಲಿತ ದಲಿತರು ಅಸ್ಪೃಶ್ಯತೆಯಿಂದ ...ಗಿದ್ದಾರೆ ಅನ್ನಿಸುತ್ತದೆಯೇ?


...ಮೂ.ಚಿ: ದಲಿತರು ಅಸ್ಪೃಶ್ಯತೆಯಿಂದ ಪಾರಾಗಬೇಕು ...ದೇ ಮೊದಲನೆ ತುಡಿತ. ಆದರೆ ಅದು ಆಗದ ...ದು. ಅಸ್ಪೃಶ್ಯತೆಯಿಂದ ಬಿಡಿಸಿಕೊಂಡಿದ್ದೀನಿ ಅಂದರೆ ...? ಅಂಬೇಡ್ಕರ್ ಅಂದುಕೊಂಡಿದ್ದರು, ಅಸ್ಪೃಶ್ಯತೆಯನ್ನು ...ರ್ಜಾತಿಯ ವಿವಾಹ ಮತ್ತು ಅಂತರ್ಜಾತಿಯ ...ಜನಗಳಿಂದ ನಿರ್ಮೂಲನೆ ಮಾಡಬಹುದು ಅಂತ. ... ಸಾಧ್ಯ ಆದ್ರೆ ಅಸ್ಪೃಶ್ಯತೆ ಹೋಯ್ತು ಅಂತ ...ನೋಟಕ್ಕೆ ಅನ್ನಿಸುತ್ತೆ, ಆದ್ರೆ ಮಾನಸಿಕ ಅಸ್ಪೃಶ್ಯತೆ ...ದು ಒಂದಿದೆ. ಪೂರ್ವಗ್ರಹದಿಂದ ಕೂಡಿದ ...ಜಾತಿಯವನೊಬ್ಬ ದಲಿತನೊಬ್ಬನ ಏಳ್ಗೆಯನ್ನು ...ಕೊಳ್ಳುವುದಿಲ್ಲ, ಅದು ಈ ದೇಶದ ಐತಿಹಾಸಿಕ ... ಮಾನಸಿಕವಾಗಿ ಮುಕ್ತ ಒಳಗೊಳ್ಳುವಿಕೆ ...ಭವಾದಾಗ ಮಾತ್ರ ಜಾತಿ ಹೋಗಬಹುದು. ಅದು ...ದೇಶದಲ್ಲಿ ಸಾಧ್ಯ ಆಗಲ್ಲ ಅನ್ನಿಸುತ್ತೆ, ಪ್ರತಿಯೊಬ್ಬರೂ ...ಒಂದು ಗೆರೆಯನ್ನು ಹಾಕ್ಕೊಂಡು ಬದುಕುತ್ತಿದ್ದಾರೆ ... ಒಂದು ಕಾಲಕ್ಕೆ ಅಕ್ಷರ ಕಲಿತರೆ ಅಸ್ಪೃಶ್ಯತೆಯಿಂದ ...ಗಬಹುದು ಅನ್ನೋ ನಂಬಿಕೆ ಇತ್ತು, ಆದ್ರೆ ಇವತ್ತು ... ಸುಳ್ಳಾಗಿದೆ.

...ಪ್ರಶ್ನೆ: ತಳ ಸಮುದಾಯಗಳ ಅಭಿವ್ಯಕ್ತಿಗೆ ಕಾವ್ಯ ...ವಾದ ಮಾಧ್ಯಮ ಅಂತ ನಿಮಗೆ ಅನ್ನಿಸಿದೆಯಾ?

...ಮೂ.ಚಿ: ಕಾವ್ಯ ಹೃದಯವನ್ನು ಮೀಟುವುದರಿಂದ ... ಬಹಳ ಸಶಕ್ತವೆ ಆಗಿದೆ. ನಮ್ಮ ಚಳವಳಿ ಶುರುವಾಗಿದ್ದೇ ...ನ ಮೂಲಕ. ಅಂದ್ರೆ, ಕಾವ್ಯದಲ್ಲಿ ಶಕ್ತಿ ಇದೆಯೇ, ... ಕಾವ್ಯವೇ? ಅದೆಲ್ಲ ವಿಮರ್ಶೆ ಅಲ್ಲ; ಜನರಿಗೆ ...ವುವಂತಹ ಕಾವ್ಯದ ಎರಡು ಸಾಲುಗಳು ಮೆದುಳನ್ನು ...ಸಿ ಸಿಧಾಸವಾಗಿ ಅವು ಹೃದಯವನ್ನು ತಲುಪುತ್ತವೆ. ...ಅಷ್ಟೇ ಸಾಲದು; ಅದರಾಚೆಗೆ ವಿಚಾರಗಳನ್ನೂ ನಾವು ...ಸಬೇಕು. ತೆಲುಗಿನಲ್ಲಿ ಗದ್ದರ್ ಥರದವರು ಈ ಕೆಲಸ ...ದ್ದಾರೆ.

...ಪ್ರಶ್ನೆ: ದಲಿತರು ಬೌದ್ಧರಾಗೋದು ಸಮಕಾಲೀನ ...ಗಳಿಂದ ತಪ್ಪಿಸಿಕೊಳ್ಳುವ ಪಲಾಯನವಾದ ಅನ್ನೋ ...ಇದೆ. ಸಮಕಾಲೀನ ತಲ್ಲಣಗಳಿಗೆ ತೀವ್ರ ನಂಬಿರುವ ...ತ್ವ ಹೇಗೆ ಉತ್ತರವಾಗಬಲ್ಲದು?

ಮೂ.ಚಿ: ಪಲಾಯನವಾದ ಅಂತ ಯಾರು ಹೇಳ್ತಾರೆ? ಮೇಲ್ವರ್ಗದವರು ಹಾಗೆ ಹೇಳಿದ್ರೆ, ಅದನ್ನ ಅಪನಂಬಿಕೆಯಿಂದ ನೋಡಿ. ಅಂಬೇಡ್ಕರ್ ಅವರ ಬಹಳ ಒಳ್ಳೆಯ ತತ್ವ ಇದು. ಮೇಲ್ವರ್ಗದವರು 'ನೀನು ಸರಿ ಇದ್ದೀಯಾ' ಅಂದ್ರೆ, ನೀವು ಅದನ್ನ ಯಾವಾಗ್ಲೂ ಅನುಮಾನಿಸಬೇಕು. ಪಲಾಯನ ಅಂದ್ರೆ ಏನು? ನೀನು ಅಸ್ಪೃಶ್ಯನಾಗಿಯೇ ಇರು, ಅವಮಾನಿತನಾಗಿಯೇ ಇರು, ನೀನು ಹೋರಾಡಿಕೊಂಡೇ ಇರು. ಇದು ಸಾಯಲಾರದ ಹೋರಾಟ. ಅಸ್ಪೃಶ್ಯತೆ ವಿರುದ್ಧ ಹೋರಾಡೋದು ಇದೆಯಲ್ಲ


ದೇವರಾಜ್, ಹುಲಿಕುಂಟೆ ಮೂರ್ತಿ, ಚಿನ್ನಸ್ವಾಮಿಯವರೊಂದಿಗೆ

it's a never ending business. ಅಂಬೇಡ್ಕರ್ ಅವರೇ ಐದು ವರ್ಷ ದೇವಸ್ಥಾನ ಪ್ರವೇಶಕ್ಕೆ ಹೋರಾಟ ಮಾಡಿದ ಮೇಲೆ ತಾನೇ ಹೊರಗಡೆ ಬಂದಿದ್ದು? ಅಂಬೇಡ್ಕರ್‌ರವರು ನಮ್ಮ ಆದ್ಯರು. ಅವರು ತಮ್ಮ ಜೀವಮಾನದ ಬುದ್ಧಿವಂತಿಕೆಯನ್ನು ವ್ಯಯಿಸಿ, ಚರ್ಚಿಸಿ, ಅಗಾಧವಾದ ಸಾಹಿತ್ಯವನ್ನು ಓದಿ ಹೊರಗಡೆ ಬಂದಮೇಲೆ ನಾವೆಂಥ ಮೂರ್ಖರು? ಅಂಬೇಡ್ಕರ್ ನೂರು ವರ್ಷಗಳ ಹಿಂದಿನಿಂದಲೂ ಹೋರಾಟ ಮಾಡಿಯೂ ಕೂಡ ಇನ್ನೂ ಅಸ್ಪೃಶ್ಯತೆ ಇದೆ? ಇದು ಪಲಾಯನ ಅಲ್ಲ; ಪರಿಹಾರ. ಇನ್ನೊಬ್ಬರಿಂದ ಅವಮಾನಿಸಿಕೊಂಡು ನಮ್ಮ ಜಾತಿ ಮರೆಮಾಚಿಕೊಂಡು ಬದುಕೋದರಲ್ಲಿ ಏನು ಅರ್ಥ ಇದೆ? ನೀವು ಒಂದು ಕೊಳಚೆ ಪ್ರದೇಶದಲ್ಲಿ ಇದ್ದೀರ ಅಂದುಕೊಳ್ಳಿ. ಅದನ್ನ ಸರಿ ಮಾಡ್ತೀನಿ ಅಂತ ಎಷ್ಟು ದಿನ ಹೋರಾಡಿದ್ರೂ ಮತ್ತೆ ಅಲ್ಲಿ ಕೊಳಚೆ ಬಂದ್ರೆ ಯಾಕಿರಬೇಕು ಅಲ್ಲಿ? ಆದರಿಂದ ಹೊರಗಡೆ ಬರಬೇಕು. ಈಗ ನನಗೆ ವೈಯಕ್ತಿಕವಾಗಿ ಅಸ್ಪೃಶ್ಯತೆ ಕಾಡಲ್ಲ, ಮೊದಲು ಯಾರಾದರೂ ನೀವು ಯಾವ ಜಾತಿ ಅಂತ ಕೇಳಿಬಿಟ್ರೆ ಮೈಯೆಲ್ಲ ಬೆವತು ಹೋಗೋದು. ಈಗ ಆ ಅವಮಾನ ಇಲ್ಲ, ನಾನೀಗ ಬೌದ್ಧ ಅಂತ ಹೇಳೋದ್ರಿಂದ ನನ್ನ ಅವಮಾನಗಳಿಂದ ಹೊರಗೆ ಬಂದಿದ್ದೀನಿ ಅಂತ ಅನ್ನಿಸುತ್ತೆ, ಅದು ನನಗೆ ಆತ್ಮಾಭಿಮಾನ ಕೊಟ್ಟಿದೆ. ನಮಗೆ ಬೇಕಾಗಿರೋದು ಅದೇ ತಾನೇ? ಬುದ್ಧ ಅದನ್ನೇ ಹೇಳಿದ್ದು, ನೀನು ಯಾವುದು ಅಲ್ಲವೋ ಅದನ್ನ ನೀನು ಸ್ವೀಕರಿಸಬೇಡ ಅಂತ. ಬೌದ್ಧತ್ವ ನನಗೆ ಕೊಟ್ಟಿರುವ ದೊಡ್ಡ ಸ್ವಾಭಿಮಾನ ಇದು.

ಪ್ರಶ್ನೆ: ಇತ್ತೀಚೆಗೆ ಸಾಂಸ್ಕೃತಿಕ ರಾಜಕಾರಣದ ಹೆಸರಿನಲ್ಲಿ ಒಂದು ವಾದ ಬೆಳೀತಾ ಇದೆ. ನಾವು ಮೂಲ ಬೌದ್ಧರು ಅಂತ ಹೇಳೋದಕ್ಕಿಂತ ಹೆಚ್ಚಾಗಿ ದಲಿತರೊಳಗೆ ಇರೋ ಸಾಂಸ್ಕೃತಿಕ ಮೂಲ ಪಠ್ಯಗಳನ್ನು ಮುನ್ನೆಲೆಗೆ ತರಬೇಕು ಅಂತ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಮೂ.ಚಿ: ಇದು ನಮ್ಮನ್ನ ತಪ್ಪು ದಾರಿಗೆ ಕರೆದುಕೊಂಡುಹೋಗುವಂತದ್ದು, ನಮ್ಮವೇ ಆದ ಸಾಂಸ್ಕೃತಿಕ ಪಠ್ಯಗಳು ಅಂತ ಹೇಳ್ತಾರಲ್ಲ ಅವೆಲ್ಲ ಇತರರಿಂದ ತಿರಸ್ಕರಿಸಲ್ಪಟ್ಟಂತಹವು. ಯಾವುದು ಚರ್ಮವಾದ್ಯವೋ ಅದನ್ನ ನೀನು ಬಡಿ ಅಂತ ಕೊಟ್ಟಿದ್ದಾರೆ ಅವರು; ಇದನ್ನ ಬೇರೆ ಜಾತಿಯವರು ಯಾಕೆ ಮಾಡಲ್ಲ? ನಾವು ಸೂಕ್ಷ್ಮವಾಗಿ ನೋಡಿದ್ರೆ, ಇದು ಏನು ಅಂತ ನಮಗೆ ಅರ್ಥವಾಗುತ್ತೆ, ಬೇರೆ ಬೇರೆ ಜಾತಿಗಳು ಉಪಯೋಗಿಸುವ ಉಪಕರಣಗಳಿಗೂ ದಲಿತರು ಉಪಯೋಗಿಸುವ ಉಪಕರಣಗಳಿಗೂ ಏನು ವ್ಯತ್ಯಾಸ ಇದೆ ಅಂತ ನಿಮಗೆ ಗೊತ್ತಾಗುತ್ತೆ. ಇಂತಹ ಕ್ಷುದ್ರ ವ್ಯವಸ್ಥೆಯಲ್ಲಿ ಇದು ನಮ್ಮದೇ ಪಠ್ಯ ಅಂತ ನಾವು ಯಾಕೆ ತಬ್ಬಿಕೋಬೇಕು? ನೀವು ಬ್ರಾಹ್ಮಣರನ್ನ ತಮಟೆ ಬಡೀರಿ ಅಂತ ಹೇಳಿ. ಅದಕ್ಕೆ ಒಪ್ಪಕೊಂಡರೆ ಆಗ ಅದಕ್ಕೆ ಒಂದು ಬೆಲೆ ಬರುತ್ತೆ, ಕೊಡು-ಕೊಳ್ಳುವಿಕೆ ಸಾಧ್ಯ ಆದಾಗ ಮಾತ್ರ ಸಮಾನತೆ ಸಾಧ್ಯ ಆಗುತ್ತೆ, ಇಲ್ಲ ಅಂದ್ರೆ ಅದನ್ನು ನಮ್ಮ ಸಂಸ್ಕೃತಿ ಅಂತ ಹೇಳೋದ್ರಲ್ಲಿ ಯಾವ ಅರ್ಥನೂ ಇರಲ್ಲ. ಹಾಗೇ ನಾವು ಬೌದ್ಧರಾದರೆ ನಮ್ಮ ಮಂಟೇಸ್ವಾಮಿ, ಮಾದೇಶ್ವರ ರೀತಿಯ ಪಠ್ಯಗಳು ನಶಿಸಿ ಹೋಗಲ್ಲ. ನಮಗೆ ಸಮಗ್ರವಾಗಿ ಬೇಕಾಗಿರೋದು ಸಮಾನತೆಯ ಬದುಕು. ಅದಕ್ಕೆ ಒಂದು ಮಾರ್ಗವನ್ನು ಅಂಬೇಡ್ಕರ್ ಕೊಟ್ಟಿದ್ದಾರೆ ಅನ್ನಿಸುತ್ತೆ. ಮಂಟೇಸ್ವಾಮಿ, ಮಾದೇಶ್ವರ ಪರಂಪರೆಗಳು ನಮ್ಮ ಸಾಂಸ್ಕೃತಿಕ ಪರಂಪರೆಯ ಮುಖ್ಯ ಧಾರೆಗಳೆ ಆಗಿರೋದ್ರಿಂದ ನಾವು ಬೌದ್ಧರಾದರೆ ಅವುಗಳಿಂದ ಕಳಚಿಕೊಂಡಂತೆ ಅಲ್ಲ, ಬದಲಾಗಿ ಪರಂಪರೆಯ ಹಾದಿಯನ್ನು ಇನ್ನಷ್ಟು ಗಟ್ಟಿಗೊಳಿಸಿದಂತೆ ಅಂತ ನಾನು ತಿಳಿದಿದ್ದೀನಿ.

ಪ್ರಶ್ನೆ: ಬರವಣಿಗೆಗಿಂತ ಸಾಮಾಜಿಕ ಜನಾಂದೋಲನ ಮುಖ್ಯ ಎಂಬ ವಾದವಿದೆ; ಆ ಕುರಿತು ನಿಮ್ಮ ಪ್ರತಿಕ್ರಿಯೆ?

ಮೂ.ಚಿ: ಜನಾಂದೋಲನವೇ ಮುಖ್ಯ; ದಲಿತ ಚಳವಳಿ ಶುರುವಾದ ಮೇಲೆಯೇ ಸಾಹಿತ್ಯವೂ ಹೆಚ್ಚು ಪ್ರಖರವಾಗಿದ್ದು. ಆದರೆ, ಜನಾಂದೋಲನಕ್ಕೆ ಯಾವಾಗ ಶಕ್ತಿ ಬರುತ್ತೋ, ಪವರ್ ಸಿಗುತ್ತೋ ಆಗ ಜನರ ನಡುವೆ ವೈಯಕ್ತಿಕ ಈರ್ಶ್ಯೆ, ದ್ವೇಷ ಶುರುವಾಗುತ್ತೆ; ಯಾವ ಜನಾಂದೋಲನದಿಂದ ಪವರ್ ಅನ್ನು ಪಡೆದರೋ ಅದೇ ಪವರ್‌ಗಾಗಿ ಕಿತ್ತಾಟಕ್ಕಿಳಿಯುತ್ತಾರೆ. ಹಾಗಾಗಿ ಆಂದೋಲನ ಚಿಂದಿ ಆಗುವ ಸಾಧ್ಯತೆ ಇದೆ. ಈಗ ಆಗಿರೋದು ಹೀಗೇ... ಜನಾಂದೋಲನ ಮೂಲಭೂತ ಅಗತ್ಯಗಳನ್ನು ಪೂರೈಸಿದರೆ ಒಂದು ಮಟ್ಟಕ್ಕೆ ಸರಿಯಿರುತ್ತೆ, ಅದು ಶಕ್ತಿಯಾಗಿ ಪರಿವರ್ತನೆ ಆದಾಗ ಅದರ ಇಳಿಮುಖ ಪ್ರಾರಂಭ ಆಗುತ್ತೆ, ಸಂಘಟನೆಯಲ್ಲಿರುವ ವ್ಯಕ್ತಿಗಳ ಮಧ್ಯೆ 'ಈಗೋ' ಸಮಸ್ಯೆ ಬಂದಾಗ ಒಡಕು ಶುರುವಾಗಿ ಈಗಿನಂತೆ ಪಂಥಗಳು ಪ್ರಾರಂಭ ಆಗ್ತವೆ.

ಪ್ರಶ್ನೆ: ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ; ಬೇರೆ ರೂಪಗಳನ್ನು ಪಡೆದುಕೊಳ್ಳುತ್ತಿವೆ. ಆದರೆ ಈ ದೇಶದಲ್ಲಿ ಅವುಗಳಿಗೆ ಸರಿಯಾದ ನ್ಯಾಯ ಸಿಗುತ್ತಿಲ್ಲ, ಕಂಬಾಲಪಲ್ಲಿ ಇದಕ್ಕೆ ದೊಡ್ಡ ಉದಾಹರಣೆ. ಇಂಥಾ ಸಂದರ್ಭದಲ್ಲಿ ದಲಿತ ಬರಹಗಾರರ ಜವಾಬ್ದಾರಿ ಏನು?

ಮೂ.ಚಿ: ದೌರ್ಜನ್ಯಗಳನ್ನು ತಡೆಗಟ್ಟೋಕೆ ಒಳ್ಳೆಯ ಕಾನೂನಿನ ಅಗತ್ಯವಿದೆ. ನಮ್ಮಲ್ಲಿ ಒಳ್ಳೆಯ ಕಾನೂನುಗಳಿವೆ ಆದರೆ ಅವುಗಳ ಇಂಪ್ಲಿಮೆಂಟೇಶನ್ ಪರಿಣಾಮಕಾರಿಯಾಗಿ ಆಗುತ್ತಿಲ್ಲ; ಕಾನೂನುಗಳು ಶಕ್ತಿಯುತವಾಗಿದ್ರೆ ದೌರ್ಜನ್ಯಗಳು ನಡೆಯೋದು ನಿಲ್ಲಬಹುದು. ಯಾರು ಕಾನೂನುಗಳನ್ನು ಜಾರಿಗೊಳಿಸುತ್ತಾರೋ ಅವರೆಲ್ಲಾ ಶೋಷಕರ ವರ್ಗಕ್ಕೆ ಸೇರಿದವರಾದ್ದರಿಂದ ಅವರಿಗೆ ಈ ದೌರ್ಜನ್ಯ ವಿರೋಧಿ ಕಾನೂನುಗಳ ಜಾರಿ ಅಗತ್ಯವಿಲ್ಲ ಅನ್ನಿಸಿದೆ. ಆದಕ್ಕೆ, ದಲಿತರಲದೆ ಎಲ್ಲ ಬರಹಗಾರರೂ, ಪ್ರಗತಿಪರರೂ ಸೇರಿ ಮಾಡಬೇಕಾದ ಕೆಲಸ ಅಂದ್ರೆ, ಈ ದೇಶದಲ್ಲಿರುವ ಎಲ್ಲಾ ದೌರ್ಜನ್ಯ ವಿರೋಧಿ ಕಾನೂನುಗಳೂ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು ಅನ್ನುವ ಆಂದೋಲನ ಪ್ರಾರಂಭಿಸಬೇಕು.

ಪ್ರಶ್ನೆ: ಒಬ್ಬ ತಳಸಮುದಾಯದ ಬರಹಗಾರರಾಗಿ ಇವತ್ತಿನ ದಲಿತ ಸಂಘಟನೆಗಳ ನಡೆಯನ್ನು ಹೇಗೆ ನೋಡುತ್ತೀರಿ?

ಮೂ.ಚಿ: ಸಂಘಟನೆಗಳು ಒಡೆದು ಛಿದ್ರಗೊಂಡಿವೆ. ನಾನು ಹೋದ ಕಡೆಯಲ್ಲಾ ಹೇಳುತ್ತೇನೆ; ಎಲ್ಲರೂ ಒಂದೇ ವೇದಿಕೆಯಡಿ ಬನ್ನಿ, ವೈಯಕ್ತಿಕ ಅಹಂಗಳನ್ನು ಬದಿಗೊತ್ತಿ ಜನತೆಗಾಗಿ ಒಂದಾಗಿ ಹೋರಾಡಿ ಅಂತ; ಎಲ್ಲರೂ ಇದು ಒಳ್ಳೆ ಸಲಹೆ ಅನ್ನುತ್ತಾರೆಯೇ ಹೊರತು ಯಾರೂ ಒಂದಾಗುವ ಇರಾದೆಯನ್ನು ತೋರಿಸುತ್ತಿಲ್ಲ, ಸಂಘಟನೆಗಳು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು, ಬುದ್ಧ ಬಸವರ ತತ್ವಗಳನ್ನು ಎಲ್ಲರಿಗೂ ಮುಟ್ಟಿಸುವ ಕೆಲಸವನ್ನು ಆದ್ಯತೆಯ ವಿಷಯಗಳಾಗಿ ತೆಗೆದುಕೊಳ್ಳಬೇಕು; ಆಗ ಮಾತ್ರ ದಲಿತರ ಮೇಲಿನ ದೌರ್ಜನ್ಯಗಳು ಸ್ವಲ್ಪ ಮಟ್ಟಿಗೆ ನಿಲ್ಲಬಹುದು.

ಪ್ರಶ್ನೆ: ಒಬ್ಬ ಹಿರಿಯ ಕವಿ ಹಾಗೂ ತಳ ಸಮುದಾಯದ ವ್ಯಕ್ತಿಯಾಗಿ ದಲಿತರೊಳಗಿನ ಎಡ-ಬಲ ಜಗಳಗಳನ್ನು ಹೇಗೆ ನೋಡುತ್ತೀರಿ?

ಮೂ.ಚಿ: ಜಾತಿಯ ವೈಶಿಷ್ಟ್ಯ ಅದು; ಒಡೆಯೋದು ಭಾಗ ಮಾಡೋದು, ಮತ್ತೆ ಭಾಗ ಮಾಡೋದು. ಆದರೆ ನಮಗೆ ಸಮಾನ ನೋವಿದೆ; ಅಸ್ಪೃಶ್ಯತೆ ನಮ್ಮ ಸಾಮಾನ್ಯ ಅಂಶ. ಅಂಬೇಡ್ಕರ್ ನಮ್ಮೆಲ್ಲರ ದೊಡ್ಡ ಐಡಿಯಲ್ ಆಗಿರೋದ್ರಿಂದ ಅವರು ಹೇಳಿದ ಹಾಗೆ ಎಲ್ಲರೂ ಈ ಅಸ್ಪೃಶ್ಯತೆ ಬಿಟ್ಟು ಹೊರಗೆ ಬನ್ನಿ, ಬೌದ್ಧರಾಗಿ. ಮೀಸಲಾತಿಯಲ್ಲಿ ಎಡಗೈ ಸಮುದಾಯಕ್ಕೆ ಅನ್ಯಾಯವಾಗಿದ್ದರೆ ಖಂಡಿತವಾಗಿ ಅವರಿಗೆ ನ್ಯಾಯ ಸಲ್ಲಬೇಕು ಅನ್ನೋದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ ಇಂಥಾ ಜಗಳಗಳಿಂದ ರಾಜಕೀಯ ಲಾಭ ಪಡೆಯುವವರಿಂದ ನಾವು ದೂರ ಇರಬೇಕು.

ಪ್ರಶ್ನೆ: ದಲಿತ ರಾಜಕಾರಣದ ಬಗ್ಗೆ ಹೇಳಿ?


ಮೂ.ಚಿ: ದಲಿತ ರಾಜಕಾರಣದ ಬಗ್ಗೆ ಅಂಬೇಡ್ಕರ್ ಪೂನಾ ಪ್ಯಾಕ್ಟ್ ಆದಮೇಲೆ ನಿರಾಶೆ ವ್ಯಕ್ತಪಡಿಸಿದ್ದಾರೆ. ಈಗಿರೋದು ದಲಿತ ರಾಜಕಾರಣ ಅಲ್ಲ; ದಲಿತ ಡಿಪೆಂಡೆಂಟ್ ರಾಜಕಾರಣ. ದಲಿತರು ಇನ್ನೊಬ್ಬರನ್ನು ಡಿಪೆಂಡ್ ಆಗ್ದೆ ಇದ್ರೆ ರಾಜಕಾರಣ ಸಾಧ್ಯವಿಲ್ಲ, ಸ್ವಂತ ಶಕ್ತಿಯಿಲ್ಲದೆ ರಾಜಕಾರಣಕ್ಕೆ ಮುಂದಾದರೆ ಮೇಲ್ವರ್ಗದವರು ನಡೆಸುವ ದಾಳಗಳಂತೆ ದಲಿತ ರಾಜಕಾರಣಿಗಳು ಆಗುತ್ತಾರಷ್ಟೇ. ಮೇಲ್ಜಾತಿಯ ಜನವೇ ಎಲ್ಲವನ್ನೂ ನಿರ್ಧರಿಸುತ್ತಿದ್ದಾರೆ. ಇದಕ್ಕೆ ಯಾರನ್ನು ದೂರುತ್ತೀರಿ? ಮೀಸಲು ಕ್ಷೇತ್ರಗಳ ಕತೆಯೂ ಅದೇ. ಆ ಕ್ಷೇತ್ರಗಳನ್ನು ನಿರ್ಧರಿಸುವವರೇ ಮೇಲ್ಜಾತಿಯವರಾದ್ದರಿಂದ ಅದರಿಂದ ದಲಿತರಿಗೇನೂ ಪ್ರಯೋಜನವಿಲ್ಲ. ಹಾಗಾಗಿ ದಲಿತ ರಾಜಕಾರಣ ಅನ್ನೋದೇ ಒಂದು farce.

ಪ್ರಶ್ನೆ: ದಲಿತ ಬಂಡವಾಳದ ಬಗ್ಗೆ ನಡೆಯುತ್ತಿರುವ ವಾದಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಮೂ.ಚಿ: ನನಗನ್ನಿಸೋದು ದಲಿತರು ಹೆಚ್ಚಾಗಿ ಬಂಡವಾಳದ ಕಡೆ ನಡೆಯಬೇಕಿದೆ; ದಲಿತ ರಾಜಕಾರಣಕ್ಕಿಂತ ಇದು ಒಳ್ಳೆಯದು. ಮೀಸಲಾತಿಯಿಂದ ಸಿಗುವ ಡಿಗ್ರಿಗಳು ಹಾಗೂ ಸಾಲದ ರೀತಿಯ ಬಂಡವಾಳವನ್ನು ಬಳಸಿಕೊಂಡು ಪ್ರತಿಭೆ ಮೂಲಕ ಬಂಡವಾಳ ಹೂಡಿಕೆ ಕ್ಷೇತ್ರಕ್ಕೆ ಬಂದಾಗ ಸ್ವಾವಲಂಬಿಗಳಾಗಿ ಸ್ವ- ಉದ್ಯೋಗಗಳನ್ನು ಸ್ಥಾಪಿಸಿದಾಗ ಅಸ್ಪೃಶ್ಯತೆ ಇಲ್ಲವಾಗುತ್ತೆ, ಆರ್ಥಿಕ ಸಮಾನತೆಯಿಂದ ಸಾಮಾಜಿಕ ಅಸಮಾನತೆಯನ್ನು ಸ್ವಲ್ಪಮಟ್ಟಿಗೆ ದೂರ ಮಾಡಿಕೊಳ್ಳಬಹುದು. ಇದರೊಂದಿಗೆ ಧರ್ಮವನ್ನೂ ಬದಲಿಸಿದಾಗ ಎಲ್ಲರಂತೆ ಸ್ವಾತಂತ್ರ್ಯ ಸಿಗುತ್ತೆ.

ಪ್ರಶ್ನೆ: ದಲಿತ ಯುವಜನ ಸಾಹಿತ್ಯಕ್ಕೆ ಒಡ್ಡಿಕೊಳ್ಳುತ್ತಿರುವ ಬಗೆಯನ್ನು ಹೇಗೆ ನೋಡುತ್ತೀರಿ? ಮತ್ತು ಅವರಿಗೆ ನಿಮ್ಮ ಸಲಹೆಗಳೇನು?

▶ 16



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಚಿರತೆ ಬರುವವರೆಗೆ ಗರಾಜಿನಲ್ಲಿ ಕಾದು, ಅದರ ಶಬ್ದವನ್ನು ಕೇಳಿದನಂತರ ಜುಂಗಲ್‌ಪಾಳ್ಯದ ರಸ್ತೆಯ ಮೂಲಕ ಹಾದು ಚಿರತೆ ಮತ್ತು ಗುಡ್ಡದ ಮಧ್ಯದ ಜಾಗದಲ್ಲಿ ಕಾಯಬೇಕು. ನಂತರ ನಾನಾಗಲೇ ಜೇಬಿನಲ್ಲಿ ಇಟ್ಟುಕೊಂಡಿದ್ದ ಕಲ್ಲುಗಳನ್ನು ಜೋರಾಗಿ ಎಸೆದು ಅದು ಚಿರತೆಯನ್ನು ದಾಟಿ ಬೀಳುವಂತೆ ಮಾಡಬೇಕು, ಇದರಿಂದ ಭಯಗೊಂಡ ಚಿರತೆ ತನ್ನ ಮಾಮೂಲಿನ ಹಾದಿಯಾದ ಗುಡ್ಡದ ಕಡೆ ಹೊರಟಾಗ ನನಗೆ ಮುಖಾಮುಖಿಯಾಗಬೇಕು. ಚಿರತೆಗಳಿಗೆ ವಾಸನೆ ಹಿಡಿಯುವ ಶಕ್ತಿ ಇಲ್ಲದಿರುವುದರಿಂದ ಅದು ನನ್ನ ಇರುವನ್ನು ಗುರುತಿಸುವುದು ತನ್ನ ಸೂಕ್ಷ್ಮವಾದ ಕಿವಿಗಳಿಂದ ಮಾತ್ರ ಸಾಧ್ಯ. ಹಾಗಾಗಿ ಯಾವುದೇ ಹಂತದಲ್ಲಿ ಸ್ವಲ್ಪವೂ ಶಬ್ದವಾಗದಂತೆ ನಾನು ಎಚ್ಚರ ವಹಿಸಬೇಕಿತ್ತು. ಇದು ಸ್ವಲ್ಪ ಅಪಾಯಕಾರಿಯಾದರೂ ಅನಿವಾರ್ಯವಾಗಿತ್ತು.

ಪೂರ್ವಕ್ಕೆ ಅಥವಾ ಉತ್ತರಕ್ಕೆ ಹೋಗುವ ಸಾಧ್ಯತೆಗಳಿಲ್ಲದಿದ್ದರೂ ಅದು ಪಶ್ಚಿಮಕ್ಕೆ ಅಂದರೆ ಜುಂಗಲ್‌ಪಾಳ್ಯದ ರಸ್ತೆಯ ಕಡೆಗೆ ಹೋಗುವ ಯಾವುದೇ ಸಾಧ್ಯತೆಗಳನ್ನೂ ನಾನು ತಪ್ಪಿಸಬೇಕಿತ್ತು. ಹಾಗಾಗಿ ನಾನು ಹಾಕಿಕೊಂಡಿದ್ದ ಖಾಕಿ ಅಂಗಿಯನ್ನು ಹರಿದು ಪಶ್ಚಿಮದ ದಿಕ್ಕಿನಲ್ಲಿ ಅದನ್ನು ಮರಗಳಿಗೆ ಗಾಳಿಗೆ ಜೋರಾಗಿ ತೂಗುವಂತೆ ಕಟ್ಟಿದೆ. ಇದರಿಂದ ಚಿರತೆ ಆ ದಿಕ್ಕಿನಲ್ಲಿ ಅಪಾಯದ ಸೂಚನೆಯಿದೆಯೆಂದು ಗ್ರಹಿಸುತ್ತದೆ ಎನ್ನುವುದು ನನ್ನ ಆಲೋಚನೆಯಾಗಿತ್ತು. ಖಾಕಿಗಿಂತ ಬಿಳಿಯ ಬಟ್ಟೆಯಾಗಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಆದರೇನು ಮಾಡುವುದು, ಬೇಟೆಗೆ ಹೊರಟಾಗ ಬಿಳಿಯ ಅಂಗಿಯನ್ನು ಯಾರು ತೊಡುತ್ತಾರೆ!

ಕೊನೆಯದಾಗಿ ಹಾಡಿಯ ಜನಗಳಿಗೆ ಮತ್ತು ಪೊಲೀಸ್ ಪೇದೆಗಳಿಗೆ ಯಾವುದೇ ಕಾರಣಕ್ಕೆ ಅವತ್ತು ಹೊರಬಾರದೆಂದು ಎಚ್ಚರಿಸಿದೆ. ನರಹಂತಕನ ಬಲಿಗಳ ಸರಮಾಲೆಯಿಂದ ಭಯಭೀತರಾಗಿದ್ದ ಜನ ಆಗಲೇ ತಮ್ಮ ಗುಡಿಸಲುಗಳಲ್ಲಿ ಕುಳಿತು ಬಾಗಿಲನ್ನು ಭದ್ರಪಡಿಸಿಕೊಂಡಿದ್ದರು!

ಕಾರ್ಯಾಚರಣೆಯ ಸಮಯ ಶುರು

ನನ್ನ ಕಾರನ್ನು ಚಿರತೆಯ ಕಣ್ಣಿಗೆ ಬೀಳದಂತೆ ವಸತಿಗೃಹದ ಮುಂದೆ ತಂದು ನಿಲ್ಲಿಸಿದೆ. ಅದರಲ್ಲಿದ್ದ ಹಾಸಿಗೆ, ಆಹಾರ, ನೀರು ಮುಂತಾದವುಗಳನ್ನು ಗರಾಜಿಗೆ ಸಾಗಿಸಿಟ್ಟುಕೊಂಡೆ. ನಾಳೆ ಬೆಳಗ್ಗೆಯವರೆಗೆ ನರಭಕ್ಷಕನ ನಿರೀಕ್ಷೆಯಲ್ಲಿ ಇಲ್ಲೇ ಕಳೆಯಬೇಕೆಂದು ನಿರ್ಧರಿಸಿದೆ.

ಬಿಸಿಲು ಏರುತ್ತಿದ್ದಂತೆ ಕಾಗೆಗಳೂ ತಮ್ಮ ಹಾರಾಟ ನಿಲ್ಲಿಸಿದವು. ಕೀರಲು ಧ್ವನಿಯಲ್ಲಿ ಕೂಗುವ ಕೀಟಮಾತ್ರ ಏಕತಾನತೆಯಿಂದ ಕಿರುಚುತ್ತಲೇ ಇತ್ತು. ಚಿರತೆಯ ಬರುವನ್ನು ಸಾದರಪಡಿಸುವ ಮೂಳೆಗಳನ್ನು ಕಡಿಯುವ ಸದ್ದಿಗಾಗಿ ಕಿವಿಗೊಟ್ಟು ಸುಮಾರು ತಾಸುಗಳನ್ನು ಕಳೆದೆ. ಆದರೆ ದೂರದ ಬಾನಿನಲ್ಲಿ ಹದ್ದೊಂದು ಕೂಗಿದ್ದನ್ನು ಬಿಟ್ಟರೆ ಬೇರೇನೂ ಕೇಳಲೇ ಇಲ್ಲ. ಅಲ್ಲಿ ಬಿದ್ದಿರುವುದು ಮಾನವನ ಶವದ ಅವಶೇಷಗಳಾದ್ದರಿಂದ ಹದ್ದು ತನ್ನ ಸ್ನೇಹಿತರನ್ನು ಕರೆದು ಅತ್ತ ಕಡೆ ಹೋಗುವುದನ್ನು ಮುಂದೂಡುತ್ತಿರಬೇಕು.

ಸಂಜೆ ಐದು ಗಂಟೆಯಾಗುತ್ತಿದ್ದಂತೆ ವಾತಾವರಣ ತಂಪಾಗತೊಡಗಿತು. ಜೊತೆಗೆ ಹದ್ದಿನ ಹಸಿವು ಕೂಡ ಚುರುಕಾಗಿರಬೇಕು! ಇನ್ನೂ ತಡಮಾಡದೆ ಹದ್ದು ತನ್ನ ವಿಶಾಲವಾದ ರೆಕ್ಕೆಗಳನ್ನು ಗಾಳಿಯಲ್ಲಿ ತೇಲಿಸುತ್ತಾ ಹೆಣದ ಬಳಿ ಬಂದಿಳಿದ ಸದ್ದು ಕೇಳಿಸಿತು. ಇನ್ನು ಕೆಲವೇ ಕ್ಷಣಗಳಲ್ಲಿ ಇತರ ಹದ್ದುಗಳು ಅಲ್ಲಿ ಬಂದಿಳಿದು ಇವೆಲ್ಲಾ ಸೇರಿ ಬರಿಯ ಒಣಮೂಳೆಗಳ ಹೊರತಾಗಿ ಎಲ್ಲವನ್ನೂ ತಿಂದು ಮುಗಿಸುತ್ತವೆ. ರಾತ್ರಿ ಚಿರತೆ ಬಂದಾಗ ತಿನ್ನಲು ಏನೂ ಇರದಿರುವುದರಿಂದ ಹಾಗೇ ಹಿಂತಿರುಗುತ್ತದೆ. ಹೀಗೆ ಸಾಗಿತ್ತು ನನ್ನ ಯೋಚನಾಲಹರಿ.

ಸಮಯ ಕಳೆದಂತೆ ಇನ್ನೂ ನಾಲ್ಕೈದು ಹದ್ದುಗಳು ಸೇರಿದವು. ಆದರೂ ಅವು ಊಟವನ್ನು ಪ್ರಾರಂಭಿಸಲು ಹಿಂಜರಿಯುತ್ತಿದ್ದವು. ಕೊಳೆಯದೆ ಬಿದ್ದಿದ್ದ ತಲೆಯಿಂದ ದುರುಗುಟ್ಟುವಂತೆ ತೆರೆದುಕೊಂಡಿದ್ದ ಹುಡುಗನ ಕಣ್ಣುಗಳು ಹದ್ದುಗಳ ಹಿಂಜರಿಕೆಗೆ ಕಾರಣವಾಗಿತ್ತು.

ಸಂಜೆಯಾಗುತ್ತಿದ್ದಂತೆ ಪಕ್ಷಿಗಳು ತಮ್ಮ ತಮ್ಮ ವಿಶಿಷ್ಟವಾದ ಕ್ವಾಕ್, ಕೀಕ್, ವ್ಹಾಕ್ ಮುಂತಾದ ಸದ್ದಿನೊಂದಿಗೆ ಹಗಲಿಗೆ ಗಲಾಟೆಯ ವಿದಾಯ ಹೇಳುತ್ತಿದ್ದವು. ಕಾಡನ್ನು ಪ್ರೀತಿಸುವವರಿಗೆ ಈ ಸದ್ದುಗಳು ಇಂಪಾದ ಸಂಗೀತವಿದ್ದಂತೆ. ಜೊತೆಗೇ ಹದ್ದುಗಳು ತಮ್ಮ ರೆಕ್ಕೆಯನ್ನು ಬಡಿದ ಸದ್ದು ಕೇಳಿಸಿತು. ಅವೆಲ್ಲಾ ಪಕ್ಕದ ಮರವನ್ನೇರಿ ಬೆಳಗಾಗುವವರೆಗೆ ಕಾಯಲು ನಿರ್ಧರಿಸಿದ್ದವು.

ಗರಾಜಿನ ಕತ್ತಲಿನಲ್ಲಿ

ಕತ್ತಲಾಗುತ್ತಿದ್ದಂತೆ ಕಾಡು ನಿಶಬ್ದಗೊಂಡಿತು. ಗೂಬೆ ಮತ್ತಿತರ ಕೆಲವೇ ನಿಶಾಚರರ ಸದ್ದು ಮಾತ್ರ ಆಗಾಗ ಕೇಳುತ್ತಿತ್ತು. ನನ್ನ ಟಾರ್ಚ್‌ನ್ನು ಬಂದೂಕಿಗೆ ಬಿಗಿಯುತ್ತಾ ಅದರ ಬೆಳಕನ್ನು ಗುರಿಯ ಮೇಲೆ ಬೀಳುವಂತೆ ಹೊಂದಿಸಿಕೊಂಡೆ. ಚಿರತೆ ಬರದೆ ಹೋಗಿ ನನ್ನ ಸೂಕ್ಷ್ಮವಾದ ಯೋಜನೆ ನಿಷ್ಪ್ರಯೋಜಕವಾಗಬಹುದೇ ಎನ್ನಿಸಿತು.

ಚಿರತೆ ಹಾರಿದಾಗ ...

ಮುಂದಿನ ಆರೇಳು ಗಂಟೆಗಳು ಏನೂ ನಡೆಯಲಿಲ್ಲ. ಅಮಾವಾಸ್ಯೆ ಹತ್ತಿರ ಬರುತ್ತಿದ್ದುದರಿಂದ ಚಂದ್ರ ಬರುವುದು ತಡವಾಗುತ್ತಿತ್ತು ಮತ್ತು ಬೆಳಕೂ ಕಡಿಮೆ ಇರುತ್ತಿತ್ತು. ಹಾಗಾಗಿ ಚಿರತೆ ಬೆಟ್ಟದ ಕಡೆ ಹಿಂತಿರುಗುವಾಗ ನನಗೆ ಕಾಣುವುದು ಕಷ್ಟವಾಗಿತ್ತು. ಮೇಲಿನ ನನ್ನ ಯೋಜನೆಯ ಬದಲಾಗಿ ಚಿರತೆ ಶವದ ಬಳಿ ಇರುವಾಗ ಅದರ ಕಡೆ ತೆವಳಿಕೊಂಡು ಹೋಗಬಹುದಿತ್ತು. ಆದರೆ ಇದು ಬಹಳ ಕಷ್ಟದ ಮತ್ತು ನನಗೆ ಏನೇನೂ ಇಷ್ಟವಿರದ ಕೆಲಸವಾಗಿತ್ತು. ಇದೇ ಯೋಚನೆಯಲ್ಲಿ ನನಗೆ ತೂಕಡಿಕೆ ಬಂದಿರಬೇಕು.

ನರಭಕ್ಷಕನ ಸಮ್ಮುಖದಲ್ಲಿ

ಫಕ್ಕನೆ ನನ್ನನ್ನು ಏನೋ ಎಚ್ಚರಿಸಿದಂತಾಯಿತು. ಅದು ಏನೆಂದು ತಿಳಿಯದಿದ್ದರೂ ಯಾವ ಶಬ್ದವಂತೂ ಆಗಿರಲಿಲ್ಲವೆನ್ನುವುದು ಖಚಿತವಾಗಿತ್ತು. ಯಾವುದೋ ಪ್ರಾಣಾಂತಿಕ ಅಪಾಯ ನನ್ನ ಹತ್ತಿರದಲ್ಲೇ ಇದ್ದಂತಹ ಭಾವನೆಗಳು ಮೂಡುತ್ತಿದ್ದವು. ಯಾವುದೋ ಬಲಶಾಲಿಯಾದ ಮತ್ತು ದಮನಕಾರಿಯಾದ ಶಕ್ತಿ ಅಲ್ಲಿಯೇ ಇದ್ದ ಅನುಭವವಾಗುತ್ತಿತ್ತು.

ನನ್ನ ಯೋಚನೆ ಬರಿಯ ಕಲ್ಪನೆಯಾಗಿರಬಹುದೇ ಎಂದು ಒಂದುಕ್ಷಣ ಕಡೆಗಣಿಸಲು ನೋಡಿದೆ. ಆದರೆ ಅಪಾಯದ ಭಾವನೆ ಮನಸ್ಸಿನಿಂದ ಹೊರ ಹೋಗದೇ ಹೆಚ್ಚು ನಿಜವಾದಂತೆ, ಅಪಾಯ ತೀವ್ರ ಸನಿಹದಲ್ಲಿರುವಂತೆ ಭಾಸವಾಯಿತು. ಎಲ್ಲಿಂದಲೋ, ಏನೋ ನನ್ನನ್ನು ಭಯಪಡಿಸುತ್ತಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಆಗ ಅದೇನೆಂದು ನನಗೆ ಅರಿಯಾಯಿತು. ನರಭಕ್ಷಕ ಹತ್ತಿರದಲ್ಲೇ ಇರಬೇಕು ಎಂದುಕೊಂಡೆ. ಹಿಂದೆ ಸಾಕಷ್ಟು ಅಪಾಯದ ಘಳಿಗೆಗಳಲ್ಲಿ ಅನುಭವಕ್ಕೆ ಬಂದು ನನ್ನನ್ನು ಕಾಪಾಡಿದ ನನ್ನ ಆರನೇ ಇಂದ್ರಿಯ ನನಗೆ ಕೇಳಿಸುತ್ತಿದೆಯೇನೋ ಎನ್ನುವಂತಹ ಶಬ್ದಗಳಲ್ಲಿ ಹೇಳುತ್ತಿತ್ತು-ಚಿರತೆ ಇನ್ನೇನು ಆಕ್ರಮಣ ಮಾಡಲಿದೆ!

ಆ ಕೊನೆಯ ಕ್ಷಣಗಳು

ಸ್ವಲ್ಪವೂ ಅಲುಗಾಡದೆ ನನ್ನ 405 ಬಂದೂಕಿನ ಮೇಲೆ ನನ್ನ ಹಿಡಿತವನ್ನು ಬಿಗಿಗೊಳಿಸಿದೆ. ಕಣ್ಣನ್ನು ಕಿರಿದಾಗಿಸಿ ಎಲ್ಲಾ ದಿಕ್ಕಿನಲ್ಲಿ ಸೂಕ್ಷ್ಮವಾಗಿ ನೋಡಿದೆ. ಆಯತಾಕಾರದ ಗರಾಜಿನ ಬಾಗಿಲಿನ ಹಿಂದೆ ತಿಂಗಳು ಬೆಳಕಿನ ಪರದೆ ಹರಡಿತ್ತು, ವಸತಿಗೃಹದ ಹಿಂಭಾಗ ಪರದೆಯ ಮಧ್ಯಭಾಗದಲ್ಲಿ ಕಾಣುತ್ತಿತ್ತು. ಆಗ ಈ ಪರದೆಯ ಎಡಭಾಗದ ಕೆಳ ಮೂಲೆಯಲ್ಲಿ ಏನೂ ಅತಿ ಸಣ್ಣ ಚಲನೆ ಕಂಡಿತು. ಅದು ಯಾವುದೋ ಕಪ್ಪಾದ ಹಿಂದುಮುಂದಿನ ಚಲನೆ. ಆ ಚಲನೆ ಗರಾಜಿನ ನೆರಳಿನಲ್ಲಿದ್ದುದರಿಂದ ಏನೆಂದು ಗುರುತಿಸಲು ಆಗಲಿಲ್ಲ.


ತಿಂಗಳ ಬೆಳಕಿನ ಹಿನ್ನೆಲೆಯಲ್ಲಿ ಆ ಆಕೃತಿ ಸ್ವಲ್ಪ ಮುಂದೆ ಬಂತು. ಜೊತೆಗೆ ಹಿಸ್ಸೆಂದು ಜೋರಾಗಿ ಉಸಿರಾಡಿದ ಸದ್ದೂ ಕೇಳಿಸಿತು. ಇದಾವುದೋ ಹೆಬ್ಬಾವು ಇರಬಹುದೇ ಅಥವಾ ನರಭಕ್ಷಕನೇ?

ಅದೃಷ್ಟವಶಾತ್ ನಾನು ನಿಶ್ಚಲನಾಗಿದ್ದೆ, ನಾನು ಸ್ವಲ್ಪವೇ ಚಲನೆಯ... ಮಾಡಿದ್ದರೂ ಗುಟ್ಟಾಗಿ ಆಕ್ರಮಣ ಮಾಡಲು ಬಂದ ತನ್ನ ಉಪಾ... ಫಲಿಸಿಲ್ಲವೆಂದು ತಿಳಿದ ಆ ಪ್ರಾಣಿ ನನ್ನ ಮೇಲೆ ಮುಗಿಬೀಳುತ್ತಿತ್ತು. ಅ... ಇನ್ನು ಸುಮ್ಮನಿರುವಂತಿರಲಿಲ್ಲ, ತ್ವರಿತವಾದ ನಿರ್ಣಾಯಕವಾದ ಚಲನೆಯ... ಮಾಡಲೇಬೇಕಿತ್ತು.

ತಕ್ಷಣ ಎದ್ದು ನಿಂತು ಹಿಂದೆ ಹಾರಿದೆ. ಹಿಂದಿನ ಗೋಡೆ ನನ್ನ... ತಡೆದು ನಿಲ್ಲಿಸಿತು. ಆದೇಕ್ಷಣದಲ್ಲಿ ನನ್ನ ಬಂದೂಕಿನ ನಳಿಕೆಯನ್ನು ಮು... ಮಾಡಿ ಟಾರ್ಚ್‌ನ್ನು ಒತ್ತಿದೆ. ಆಗ ಬಿದ್ದ ಬೆಳಕಿನಿಂದ ಕಣ್ಣು ಬಿಡಲಾ... ಸ್ಥಿತಿಯಲ್ಲಿಯೂ ಚಿರತೆ ಆಕ್ರಮಣಕ್ಕೆ ಸಿದ್ಧವಾಗಿತ್ತು.

ಅಂತ್ಯದಲ್ಲಿನ ಅನಿಶ್ಚಿತತೆ

"ಒಂದೇ ಗುಂಡನ್ನು ಹಾರಿಸಿ ನಾನು ಆಗ ನರಭಕ್ಷಕನನ್ನು ಕೊಂ... ಮುಗಿಸಿದೆ" ಎಂದು ಹೇಳಿ ನನ್ನನ್ನು ಹೊಗಳಿಕೊಳ್ಳುವುದು ಅ... ಸರಿಯಾಗಲಾರದು. ನಾನು ಹಾಗೆ ಮಾಡಿದ್ದೆ ನಿಜ. ಆದರೂ ವಿನಮ್ರ... ಮತ್ತು ಧನ್ಯತಾಭಾವದಿಂದ ನಾನು ಇಲ್ಲಿ ಕೆಲವು ಅಂಶಗಳನ್ನು ಹೇಳಬೇ... ಕಾಡುಪ್ರಾಣಿಗಳ ಬಗೆಗೆ ಪ್ರಾಥಮಿಕ ಅನುಭವ ಇರುವ ಯಾವುದೇ ವ್ಯ... ಗೊತ್ತಿರುವ ವಿಷಯವೆಂದರೆ ಜಿಂಕೆಯೊಂದು ಒಂಬತ್ತು ಗುಂಡುಗಳನ್ನು ತಿ... ನಂತರವೂ ಸಾಯುವ ಮೊದಲು ಮೈಲುಗಟ್ಟಲೇ ದೂರ ನಡೆಯಬಲ್ಲ...



ಹಾಗೆಯೇ ಒಂದು ಕಾಡುಕೋಣ ಹದಿನೈದು, ಆನೆ ಇಪ್ಪತ್ತೈದು, ಚಿ... ಅಥವಾ ಹುಲಿಗಳು ಇನ್ನೂ ಹೆಚ್ಚು ಗುಂಡೇಟನ್ನು ತಿಂದ ನಂತರ... ಮೈಲುಗಟ್ಟಲೇ ದೂರ ನಡೆಯುವ ಶಕ್ತಿ ಹೊಂದಿರುತ್ತವೆ. ಹಾಗೆ ಸಾಯು... ಮೊದಲು ಅವು ನಿಮ್ಮನ್ನು ತುಂಡುತುಂಡಾಗಿ ಸೀಳಿ ಹಾಕಬಲ್ಲವು.

ಇಷ್ಟೇ ಅಲ್ಲದೆ ನಿರ್ಣಾಯಕ ಘಳಿಗೆಯಲ್ಲಿ ಬಂದೂಕಿನ ಕಾರ್ಟ್ರಿ... ಚಲಿಸದೆ ಹೋಗಬಹುದು, ಹೊಡೆದ ಗುಂಡು ಗುರಿ ತಪ್ಪಬಹುದು ಅಥ... ನೀವು ಗುಂಡು ಹೊಡೆಯುತ್ತಿದ್ದಂತೆ ಕ್ಷಣಾರ್ಧದಲ್ಲಿ ಆ ಪ್ರಾ... ಮುಖತಿರುಗಿಸಿಬಿಡಬಹುದು. ಹೀಗೆ ಏನು ಬೇಕಾದರೂ ಆಗಲು ಸಾ... ನನ್ನ ಅದೃಷ್ಟಕ್ಕೆ ಇದಾವುದೂ ಆಗದೆ ನಾನು ಹಾರಿಸಿದ ಗುಂಡು ... ಗುರಿಯನ್ನು ತಲುಪಿ, ಚಿರತೆ ನನ್ನ ಕಡೆ ಹಾರುವಾಗ ಮಧ್ಯದಲ್ಲೇ ಅದ... ಕೊಂದಿತ್ತು. ನನ್ನ ಕಾಲ ಬಳಿ ಒದ್ದಾಡುತ್ತಾ ಬಿದ್ದಿದ್ದ ದೇಹಕ್ಕೆ ಇನ್ನೆರ... ಗುಂಡನ್ನು ಹಾರಿಸಿ ಅದರ ಸಾವನ್ನು ಖಾತ್ರಿಪಡಿಸಿಕೊಂಡೆ. ಹುಡುಗನ ಶ... ಮಹಜರ್ ಮಾಡಲು ಸಬ್‌ಇನ್ಸ್‌ಪೆಕ್ಟರ್ ನಿಯತ್ತಿನಿಂದ ಮರುದಿನ ಬೆ... ಬಂದ. ಆದರೆ ಹುಡುಗನ ತಲೆ ಮತ್ತು ಅಳಿದುಳಿದ ಮೂಳೆಗಳನ್ನು ರಾತ್ರಿ... ಕಿರುಬ ಮತ್ತು ನರಿಗಳು ಹೊತ್ತೊಯ್ದ ಬಗೆಗೆ ಅವನಿಗೆ ಏನೇ... ಸಮಾಧಾನವಿರಲಿಲ್ಲ!

(ಮುಗಿಯಿತು)

ಮುಡ್ನಾಕೂಡು..ಸಂದರ್ಶನ

▶ 15

ಮೂ.ಚಿ: ಇತ್ತೀಚಿನ ದಲಿತ ಯುವಜನ ಬಹಳ ಸೆನ್ಸಿಬಲ್ ಆಗಿ ಬರೀತಿದಾರೆ. ಅವರಿಗೆ ನನ್ನ ಸಲಹೆ ಪರಂಪರೆಯ ಅರಿವು ಬೆಳೆಸಿಕೊಳ್ಳಿ, ಅಂಬೇಡ್ಕರ್ ಬಗ್ಗೆ ಹಾಗೂ ತಂದೆ, ತಾತ, ಮುತ್ತಾತರು ಯಾಕೆ ಹಾಗಿದ್ದರು ಅನ್ನೋದನ್ನ ಅರ್ಥ ಮಾಡಿಕೊಂಡು ಬರೆಯೋಕೆ ಶುರು ಮಾಡಿದ್ರೆ ನಿಮ್ಮ ಬರವಣಿಗೆ ಶಕ್ತಿ ಪಡೆದುಕೊಳ್ಳುತ್ತೆ.


ಪ್ರಶ್ನೆ: ನೀವು ಹೆಮ್ಮೆಯಿಂದ ಒಬ್ಬ ಕನ್ನಡ ಕವಿ ಅಂತ ಹೇಳಿಕೊಳ್ತೀರಾ?

ಮೂ.ಚಿ: ಖಂಡಿತವಾಗಿಯೂ ಹೇಳಿಕೊಳ್ಳುತ್ತೇನೆ. ಸ್ಪ್ಯಾನಿಶ್‌ಗೆ ಅನುವಾದಗೊಂಡಿರುವ ಮೊಟ್ಟಮೊದಲ ಕನ್ನಡ ಕವಿ ನಾನು. ಇದನ್ನು ಯಾರೂ ಗಮನಿಸೋದೇ ಇಲ್ಲ. ಮೇಲ್ವರ್ಗದವರಾಗಿದ್ರೆ ಇಷ್ಟು ಹೊತ್ತಿಗೆ ಎಷ್ಟು ಪ್ರಚಾರ ಮಾಡ್ತಿದ್ರು? ನಾನು ವೆನುಜುವೆಲಾ, ನಿಕರಾಗುವಾಗಳಲ್ಲಿ ಭಾಗವಹಿಸಿದ ಕವಿಗೋಷ್ಠಿಗಳಲ್ಲಿ ಕನ್ನಡದಲ್ಲೇ , ಪದ್ಯ ಓದಿದ್ದೇನೆ. ಗ್ರೆನೆಡಾ ಕವಿಗೋಷ್ಠಿಯಲ್ಲಿ 'ನಾನೊಂದು ಮರವಾಗಿದ್ದರೆ' ಎಂಬ ಪದ್ಯ ಓದಿದಾಗ ಅಲ್ಲಿನ ಜನ ಬಂದು ನನ್ನನ್ನು 'can we touch you?' ಅಂತ ಕೇಳ್ತಿದ್ರು. ಮುಟ್ತಿದ್ರು. ಜೆರುಸಲೆಂನಲ್ಲಿ ಅದೇ ಪದ್ಯವನ್ನು ಒಬ್ಬರು ರೂಪಕ ಮಾಡಿ ಅಭಿನಯಿಸಿದ್ರು. ಆಗೆಲ್ಲಾ ನನ್ನನ್ನು ಅವರು 'ಕನ್ನಡ ಕವಿ' ಅಂತಲೇ ಗುರುತಿಸಿದ್ರು. ನನ್ನ 'ಚಿಂದಿ ಆಯುವ ಹುಡುಗಿ' ಪದ್ಯ ಓದಿದಾಗ ಕೆಲವು ಹೆಣ್ಣುಮಕ್ಕಳು ನಮ್ಮ ಹಿಬ್ರೂ ಭಾಷೆಯಲ್ಲೆ ಬರೆದ ಹಾಗಿದೆ ಅಂದಿದ್ರು. ವಿಮರ್ಶಕರು ಹೇಳಿದಾರೋ ಬಿಟ್ಟಿದಾರೋ ನನಗಂತೂ ನಾನು ಕನ್ನಡದ ಕವಿ ಅಂತ ಹೇಳಿಕೊಳ್ಳಲಿಕ್ಕೆ ಯಾವ ರಿಯಾಯಿತಿಯೂ ಬೇಕಿಲ್ಲ.

ಪ್ರಶ್ನೆ: ದಲಿತ-ಬಂಡಾಯ ಸಾಹಿತ್ಯ ನಿಂತಿದೆ ಎಂಬ ವಾದವಿದೆ; ನಿಮ್ಮ ಅಭಿಪ್ರಾಯ?

ಮೂ.ಚಿ: ನನಗೇನೂ ನಿಂತಿದೆ ಅಂತ ಅನ್ನಿಸ್ತಿಲ್ಲ; ವ್ಯವಸ್ಥೆ ಹಾಗೂ ದೌರ್ಜನ್ಯ ವಿರೋಧಿ ಬರವಣಿಗೆಗಳು ಇನ್ನೂ ಹೊಸ ಹೊಸ ರೂಪಕಗಳ ಮೂಲಕ ಬರುತ್ತಿವೆ. ಇದನ್ನು ಬಂಡಾಯ ಅಲ್ಲ ಅಂತ ಹೇಗೆ ಹೇಳ್ತೀರಿ? ಅನ್ಯಾಯದ ವಿರುದ್ಧ ಸಿಡಿದೇಳುವ ಮನಸ್ಥಿತಿ ಇರುವ ದಲಿತೇತರರೂ ಬಂಡಾಯವನ್ನಲ್ಲವೆ ಬರೆಯುತ್ತಿದ್ದಾರೆ. ಅದಕ್ಕೆ ಇನ್ನಾವ ಹೆಸರು ಕೊಡುತ್ತೀರಿ? ●

ಸತ್ಯ ಘಟನೆಗಳ ಹೊಸ ಧಾರವಾಹಿ 'ಪತ್ನಿ ಪೀಡಿತರ ಕತೆ-ವ್ಯಥೆ'



ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ... ದಮನಿತಳೂ-ಶೋಷಿತಳೂ ಆಗಿದ್ದಾಳೆ ... ಸಂಗತಿಯಾಗಿದೆ. ಆದರೆ ಮಹಿಳೆಯರಿಂದಲೂ ... ಸಮಸ್ಯೆಗೆ ತುತ್ತಾಗುತ್ತಿರುವ ಪುರುಷರು ನಮ್ಮ ... ಹೀಗೆ ಬಾಧಿತ ಪುರುಷರೀಗ ಒಂದು ... ರಚಿಸಿಕೊಂಡಿದ್ದಾರೆ.

ಕುತೂಹಲ ... ನಮ್ಮ ಸಾಮಾಜಿಕ ವ್ಯವಸ್ಥೆ ... ಮುಂದಿನ ವಾರದಿಂದ ಪ್ರಕಟವಾಗಲಿದೆ.

... ರಾಜಲಕ್ಷ್ಮಿ ... ನಿರೂಪಿಸುತ್ತಾರೆ.


● ಸಂಪಾದ...

ಈ ಪದ್ಮಾವತಿ ಎಡೂರಪ್ಪನ ಟೈಮಲ್ಲಿ ಎಲ್ಲಿದ್ಲು?

ಥೂತ್ತೇರಿ

▸ ಯಾಹೂ

ಸಿದ್ದು ಮಂಡಿಸಿದ ಬಜೆಟ್ ನೋಡಿದ ನಂದಿ ಮಾರ್ಕ್ ...ಕೆ ಮತ್ತು ಕಡಲತೀರದ ಚೆಡ್ಡಿ ಪತ್ರಿಕೆ 'ಇದೊಂದು ...ಂದ ಬಜೆಟ್' ಎಂದು ವ್ಯಾಖ್ಯಾನಿಸಿವೆಯಂತಲ್ಲಾ, ...ತ್ಕೂ ಇದೊಂದು ವಿಸ್ಮಯಕರ ಘಟನೆ. ಅಷ್ಟೋ ...ಲ್ವೇ ಪರವಾಗಿಲ್ಲ ಓದಬಹುದು ಎಂಬ ಅನ್ನಿಸಿಕೆಯ ...ಿ ಮಾರ್ಕಿನ ಪ್ರಜಾವಾಣಿಯಲ್ಲಿ? ಶುದ್ಧ ಚೆಡ್ಡಿಗಳ ...ತ್ತ ಮೀರಿಸುವ ಕಡಲತೀರದ ಪತ್ರಿಕೆಯಲ್ಲೀ? ಇಬ್ಬರೂ ...ಕಾಲದಲ್ಲಿ ಒಂದೇ ರೀತಿ ಯೋಚಿಸಿ, ಸಿದ್ದು ಬಜೆಟ್‌ಗೆ ...ದೇ ಪದದ ತಲೆಬರಹ ಕೊಡುತ್ತಾರೆಂದರೆ, ಇವರೆಲ್ಲೊ ...ದೇ ದಿಕ್ಕಿನಲ್ಲಿ ಯೋಚಿಸುತ್ತಿದ್ದಾರೆಂದಲ್ಲವೆ? "ಹಾಗೇನೂ ... ಇದು ಪ್ರಜಾವಾಣಿಯಲ್ಲಿ ಸೇರಿಕೊಂಡಿರುವ ಕೆಲವರ ...ಡ್ಡಿಗಳಷ್ಟೆ. ವಾಸ್ತವವಾಗಿ ಪದ್ಮಾವತಿಯೆಂಬುವಳ ಕೈವಾಡ ...ಬಾ ಕೈಕೆಲಸ ಮಾಡುತ್ತಿದೆ" ಎಂದು ಸಿದ್ದು ...ಮಾನಿಯೊಬ್ಬ ವ್ಯಾಖ್ಯಾನಿಸಿದರಂತಲ್ಲಾ, ಇದನ್ನು ಕೇಳಿದ ...ನೊಬ್ಬ "ಅವುಲ್ಯಾರು, ಕರಕಂಡು ಬಾರ್ಲ ಇಲ್ಲಿ, ಬೈದು ...ತ್ನಿ ಕಲುಸನ" ಎಂದನಂತಲ್ಲಾ, ಇದರಿಂದ ಕೆರಳಿದ



...ನೊಬ್ಬ "ಪದ್ಮಾವತಿ ಕತೆ ಅಂಗಿರ್ಲಿ. ಎಡೂರಪ್ಪ ...ಗಳಿಗೆ ಕೋಟಿಕೋಟಿ ಕೊಟ್ಟಾಗ ಏನು ಮಾಡತಿದ್ಲು ...ಪದ್ಮಾವತಿ? ಒಂದು ರೂಪಾಯಿ ಕೆ.ಜಿ. ಅಕ್ಕಿ ಕೊಟ್ಟದ್ಕೆ ...ರ್ಸ್ಪರ್ಧೆ ಏರ್ಪಡಿಸಿರೋ ಈ ಜನ ಆರುನೂರು ...ನೇಳು ಕೋಟಿ ರೂಪಾಯಿಗಳನ್ನು ಮಠಕ್ಕೆ ಕೊಟ್ಟ ... ಚರ್ಚೆ ಏರ್ಪಡಿಸಿದ್ರಾ? ಬಡವರಿಗೆ ಅಕ್ಕಿ ಕೊಟ್ರೆ ...ಎದಕ್ಕೆ ಬರಪೂರ ಅಂತ ಕ್ಯರಿತರಲ್ಲ? ಈ ನನಮಕ್ಕಳೇನು ...ತಿಂತರೊ ಅಥವಾ ನಾವು ಸಾಕೊ ಕುರಿ ತಿಂತರೊ?"

ಎಂದು ಹೀನಾಮಾನ ಬೈದನಂತಲ್ಲಾ, ಥೂತ್ತೇರಿ!

****

ಈ ಹಿಂದೆ ಯಡ್ಡಿ ಬಜೆಟ್‌ನಿಂದ ಸಗಣಿ ಖರೀದಿಸಿ ಮನೆಮುಂದೆ ಹಾಕಿಕೊಂಡಿದ್ದ ಚೆಡ್ಡಿಗಳು ಅದನ್ನೆ ಸಾವಯವ ಗೊಬ್ಬರವೆಂದು ಬಂದವರಿಗೆಲ್ಲಾ ಹೇಳುತ್ತ ಬರೋಬರಿ ಇನ್ನೂರು ಕೋಟಿ ರೂಪಾಯಿಗಳನ್ನು ಜೇಬಿಗಿಳಿಸಿದ್ದರಲ್ಲಾ, ನೋಡು ನೋಡುತ್ತಿದ್ದಂತೆ ನಡೆದ ಈ ಹಗಲು ದರೋಡೆ ಕೃತ್ಯಕ್ಕೆ ಸಮನಾದ ಸಾವಯವ ಗೊಬ್ಬರ ತಿಂದ ಚೆಡ್ಡಿಗಳು ಅದೇ ಕೊಬ್ಬಿನಿಂದ ಕರ್ನಾಟಕವನ್ನೆಲ್ಲಾ ತಿರುಗಿ ಹಿಂದೂ ಧರ್ಮದ ಪುನರುತ್ಥಾನ ಕೈಂಕರ್ಯಕ್ಕೆ ಸಜ್ಜಾಗಿವೆಯಂತಲ್ಲಾ, ಚೆಡ್ಡಿಗಳ ಇಂತಹ ತೀರ್ಮಾನವನ್ನು ತನ್ನ ದಿವ್ಯ ದೃಷ್ಟಿಯಿಂದಲೇ ಗ್ರಹಿಸಿರುವ ಬೆಲ್ಜಿಯಂನ ಬಾಲಗಂಗಾಧರನೆಂಬ ಕೂದಲು ಸೀಳೋ ಗಿರಾಕಿ "ನಿಜಕ್ಕೂ ಹಿಂದೂ ಧರ್ಮವೆಂದರೆ ಏನು? ಅದನ್ನ ಮಾಡಿದವರ್‍ಯಾರು? ಇದರಲ್ಲಿ ಬ್ರಾಹ್ಮಣರ ಪಾಲೇಷ್ಟು? ಅವರೆಷ್ಟು ನಿರಪರಾಧಿಗಳು, ಅಮಾಯಕರು. ಮೋಸ ವಂಚನೆ ತಿಳಿಯದ, ಕೊಲೆ ಸುಲಿಗೆ ಗೊತ್ತಿಲ್ಲದ ಮುಗ್ಧರು" ಎಂದು ತಿಳಿಸಿ ಕೊಡಲು ಡಿಸೆಂಬರ್ ತಿಂಗಳಿನಿಂದ ಇಡೀ ಕರ್ನಾಟಕವನ್ನು ಸುತ್ತಿ ಬರಲಿದ್ದಾನಂತಲ್ಲಾ, ಈ ಸಂಗತಿಯನ್ನು ಕೇಳಿದ ವಿಶ್ವಹಿಂದೂಗಳು ಬಾಲಗಂಗಾಧರನಿಗಾಗಿ ವಸತಿ ಊಟದ ವ್ಯವಸ್ಥೆ ಮಾಡಲು ಜನಿವಾರ ಹಾಕಿದ ಚೆಡ್ಡಿಗಳ ಮನೆ ಹುಡುಕಲು ತಯಾರಿ ನಡೆಸಿದ್ದಾರಂತಲ್ಲಾ, ಇತ್ತ ಬಾಲನ ಕಾಸಿನ ಹಂಗಿದೆ ತುತ್ತಾಗಿ ನರಳುತ್ತಿರುವ ಕುವೆಂಪು ವಿ.ವಿ.ಯ ನಾಲಿಗೆ ಕೆಲಸದ ವಿದ್ವಾಂಸರು "ಬಾಲು ಏನಾದರೂ ಹೇಳಲಿ, ಆದರೆ ನೇರಾನೇರ ಚೆಡ್ಡಿಗಳ ವಠಾರಕ್ಕೆ ಹೋದರೆ ನಮ್ಮ ಕತೆಯೇನು?" ಎಂದು ಚಿಂತಿಸುತ್ತಿವೆಯಂತಲ್ಲಾ, ಥೂತ್ತೇರಿ!

****

ನಾಡಿನ ಚೆಡ್ಡಿಗಳೆಲ್ಲಾ ಹೊಸಾ ಛದ್ಮವೇಷದಲ್ಲಿ ತಯಾರಾಗುತ್ತಿವಾಗ ಅತ್ತ ಶ್ವಾನಪ್ರಿಯ ಮೋದಿ ಎಂಬ ನರಹಂತಕ ಮುಂದಿನ ಪ್ರಧಾನಿ ಎಂದು ಘೋಷಣೆಯಾಗುತ್ತಲೇ ನಾಡಿನ ಉದ್ದಗಲಕ್ಕೂ ಮಾಧ್ಯಮದೊಳಗೆ ಹರಡಿಕೊಂಡಿರುವ ಪುರೋಹಿತಶಾಹಿಗಳು ಮೋದಿ ಮೆದುಳಿಗೆ ಪೂರಕ ಸಂಗತಿಗಳನ್ನೇ ಬಿತ್ತರಿಸುತ್ತಿವೆಯಲ್ಲಾ, ಇನ್ನ ಪುರೋಹಿತರಷ್ಟೇ ಪುರಾತನವಾದ 'ಕರ್ಮವೀರ' ಎಂಬ ಕೊನೆಯುಸಿರಿನ ಪತ್ರಿಕೆ ತನ್ನ ಎಂದಿನ ಭೋಜನ ಚಪ್ಪರಿಸುವ ಶೈಲಿಯಲ್ಲಿ "ಹಿಂದೂ ಸಮಾಜಕ್ಕೆ ಸ್ಥಿರತೆ ಒದಗಿಸುವ ಐದು ಸಾವಿರ ವರ್ಷಗಳ ಇತಿಹಾಸವಿರುವ ಜಾತಿಪದ್ಧತಿಯನ್ನು ಕೈಬಿಡುವ ಅಗತ್ಯವಿಲ್ಲ, ಕೈಬಿಡಲೂಬಾರದು" ಎಂದು ಅಧಿಕೃತವಾಗಿ ಕೆರೆಯತೊಡಗಿದೆಯಲ್ಲಾ, ಇದನ್ನು ಓದಿದ ಡಂಬಾಯಂದ ಮಧ್ಯವಯಸ್ಕರೊಬ್ಬರು "ಎಷ್ಟೇ ಆಗಲಿ, ಇವರೆಲ್ಲಾ ಹಿಂದೂ ಧರ್ಮದ ಫಲಾನುಭವಿಗಳಲ್ಲವೆ. ಸ್ವದೇಶದ ಸ್ವಧರ್ಮೀಯರನ್ನು ಕಾಲಿನಲ್ಲಿ ತುಳಿದು, ವಿದೇಶಿಯರ ಕಾಲು ನೆಕ್ಕುತ್ತ, ಸುಲ್ತಾನರ ಆಸ್ಥಾನಗಳಲ್ಲಿ ತಮ್ಮ ಹೆಣ್ಣುಮಕ್ಕಳಿಂದ ನರ್ತನ ಮಾಡಿಸುತ್ತ, ತಾವು ಮಾತ್ರ ಕರಣಿಕರಾಗಿ, ಶ್ಯಾನುಭೋಗರಾಗಿ, ಲೆಕ್ಕಪರಿಶೋಧಕರಾಗಿದ್ದ ಪುರೋಹಿತಶಾಹಿಪಿಂಡಗಳು. ಇವರಿಗೆ ಜಾತೀಯತೆಯ ಅವಮಾನವಾಗಲಿ, ಅಸ್ಪೃಶ್ಯತೆಯಾಗಲಿ, ದಬ್ಬಾಳಿಕೆಯಾಗಲಿ ಅರಿವಿಗೆ ಬರಲು ಸಾಧ್ಯವೇ? ಅಷ್ಟಕ್ಕೂ ಹಿಂದೂ ಸಮಾಜದಲ್ಲಿ ಜಾತಿಗಳಿರಲಿ ಎಂದು ಹೇಳಬೇಕಾದವನು ಕಕ್ಕಸ್ಸು ತೊಳೆಯುತ್ತಿರುವವನೇ ಹೊರತು ಯಾರೋ ಬೆಳೆದ ದವಸಧಾನ್ಯದಿಂದ ರುಚಿಕಟ್ಟಾದ ಅಡಿಗೆ ತಯಾರಿಸಿಕೊಂಡು ಭೂರಿಭೋಜನ ಬಾರಿಸುವ ಬ್ರಾಹ್ಮಣನಲ್ಲ" ಎಂದು ವ್ಯಾಖ್ಯಾನಿಸಿದ್ದಾರಲ್ಲಾ, ಥೂತ್ತೇರಿ!

****

ಇತ್ತ ನಮ್ಮ ಕರುನಾಡ ರಾಜಕಾರಣ ಶ್ಯಾನೆ ಸ್ವಾರಸ್ಯವಾಗಿದೆಯಲ್ಲಾ, ಸಿದ್ದು ಮಂಡಿಸಿದ ಬಜೆಟ್ ಸದ್ದು ಸದನದಲ್ಲಿ ಶ್ಯಾನೆ ಸದ್ದು ಮಾಡಲಿದೆ ಎಂದು ಭಾವಿಸಿದರೆ ವಿರೋಧಿ ನಾಯಕರಾದ ಕುಮಾರಣ್ಣ ಏನೂ ಹೇಳಲಾಗದೆ ಸುಮ್ಮನಾದರಂತಲ್ಲಾ, ಹಿಂದೆ ಎಂ.ಪಿ. ಪ್ರಕಾಶ್ ಎಂಬ ಸಜ್ಜನನಿಗೆ ಸದನ ಒಪ್ಪಿಸಿ ಗ್ರಾಮ ವಾಸ್ತವ್ಯ ಎಂದು ಮಲಗಿದ್ದ ಕುಮಾರಣ್ಣನಿಗೆ ಬಜೆಟ್ ಎಂದರೆ ಏನು ಎಂಬುದು ನಿಜಕ್ಕೂ ಈಗ ಅರಿವಾಗತೊಡಗಿದೆಯಂತಲ್ಲಾ, ಕುಮಾರಣ್ಣನದು ಈ ಸಮಸ್ಯೆಯಾದರೆ ಇನ್ನ ಕೇವಲ ಆರು ಜನ ಸದಸ್ಯರೊಂದಿಗೆ ವಿಧಾನಸಭೆಯಲ್ಲಿ ಕೂರಲು ಹೇಸಿಕೊಂಡಿರುವ ಎಡೂರಪ್ಪ ಕಂಗಾಲಾಗಿ, 'ಬಿಜೆಪಿಯ ನಲವತ್ತು ಜನ ನನ್ನ ಹಿಂಬಾಲಕರು' ಎನ್ನುವಂತೆ ಮಾತನಾಡತೊಡಗಿದ್ದಾರಂತಲ್ಲಾ, ಎಡೂರಪ್ಪನ ಸ್ಥಿತಿ ನೋಡಿ ಒಳಗೊಳಗೆ ನಗುತ್ತಿರುವ ಈಶ್ವರಪ್ಪ ತನ್ನ ಈಗಿನ ಸ್ಥಿತಿಯನ್ನು ಮರೆತು ಶ್ಯಾನೆ ಸಮಾಧಾನಗೊಂಡು ಬಹು ಧೀಮಂತನ ಗತ್ತಿನಲ್ಲಿ "ಎಡೂರಪ್ಪ ನಾಯಕರಾಗಿದ್ದವರು. ಮಾಡಬಾರದ್ದನ್ನು ಮಾಡಿ ಈಗ ಪಶ್ಚಾತ್ತಾಪಪಟ್ಟರೆ ಹೇಗೆ?" ಎಂದು ವ್ಯಾಖ್ಯಾನಿಸುತ್ತಿದ್ದಾರಂತಲ್ಲಾ, ಅತ್ತ ಎಡೂರಪ್ಪ ತಾವು ಹೇಳಿದ ಮಾತುಗಳನ್ನೇ ಮತ್ತೆಮತ್ತೆ ತಿರುಗಮುರುಗ ಮಾಡಿ ಆಳುವ ಪಕ್ಷದವರಿಗಿಂತ ತಾನೇ ಮಾಧ್ಯಮದವರ ರಸಕವಳವಾಗಲು ಹಾತೊರೆಯುತ್ತಿದ್ದಾರಂತಲ್ಲಾ, ಥೂತ್ತೇರಿ! ●

...ನ್ನಲ್ಲಿಗೆ ಕತೆ ಬಂದ ಬಗೆ

...ಇದೆಲ್ಲ ತೀರಾ ಹೆಚ್ಚಾಯಿತು' ಎಂದು ಸುಮ್ಮನಾಗುತ್ತೇನೆ. ತಿಂಗಳಿಗೊಂದು ...ಬರೆಯುವುದು ಅಂದರೇನು? ದಿನಕ್ಕೆ ಹತ್ತು ಸಲ ಆಕಳ ಕೆಚ್ಚಲಿಗೆ ...ಕಿ ಮೊಲೆ ಪರೀಕ್ಷಿಸಿ ಹಿಂಡಿದಂತೆ, ರಕ್ತ ಬರತೊಡಗುತ್ತದೆ... 'ಎಂದು ...ತ್ತು ರಾತ್ರಿ ಮೈಸೂರಿನಿಂದ ಹೊರಡುವ ಮುನ್ನ ಕಿರಿಯ ಮಿತ್ರರನ್ನು ..., 'ಬೆಂಗಳೂರಿಗೆ ಯಾರಾದ್ರೂ ಭರುವವರಿದ್ದರೆ ಬನ್ನಿ, ಇನ್ನೊಂದು ... ಇದೆ. ಹಿಂದಿನ ಸೀಟ್‌ನಲ್ಲಿ ನಾನು ಮಲಗಿರುತ್ತೇನೆ' ಅಂದೆ. ಅವರಲ್ಲೊಬ್ಬ ...ವಾರದಿಂದ ಬಂದವನು, ಇನ್ನೊಬ್ಬ ಧಾರವಾಡದವನು, ಮೂರನೆಯವನು ...ಳೂರಿನವನು. ಕಾರವಾರದವನು ಹೇಳಿದ, 'ನೀವು ಹೋಗಿ, ನಾವು ... ಇದ್ದು ಬೆಳಗ್ಗೆ ಬಸ್ಸಿಗೆ ಬರ್ತೇವೆ. ಎಲ್ಲರಿಗೂ ಬೆಂಗಳೂರಲ್ಲಿ ಸ್ವಲ್ಪ ...ವಿದೆ, ಬಸ್ನಲ್ಲಿ ಬರ್ತೇವೆ' ಅಂದ.

...ನಾನು ನಾಳೆ ರಾತ್ರಿ ಧಾರವಾಡಕ್ಕೆ ಹೊರಡೋದ್ರಿ' ಎಂದು ಧಾರವಾಡದವನು ...ದ. 'ಅಲ್ಲಯ್ಯ, ನಾಳೆ ರಾತ್ರಿಯವರೆಗೆ ಮೈಸೂರಲ್ಲಿ ಏನು ಮಾಡ್ತಿ?'

...ಏನಿಲ್ಲ ಸಾರ್. ಮಿತ್ರರೆಲ್ಲ ಅಪರೂಪಕ್ಕೆ ಸಿಕ್ಕಿದ್ದಾರೆ. ಸ್ವಲ್ಪ ಹೊತ್ತು ...ಗಿ ಕಳೆಯೋಣ ಅಂತ.'


...ಅವರಲ್ಲೊಬ್ಬ ಮಹಾ ರಸಿಕ. ಗೆಳತಿ ಮಾಧವಿ ಜೊತೆಗೆ ಮುಗುಳ್ನಗುತ್ತಾ ...ನ್ನ. 'ನನ್ನ ಸ್ನೇಹಿತೆ ಊಟಕ್ಕೆ ಬರ್ತಾಳಂತೆ. ಆದರೆ ಊಟ ಯಾರಿಗೆ ... ಹೇಳಿ' ಅಂದ ಕಾರವಾರದ ಹುಡುಗ. ಅವನು ಹವ್ಯಕರ ಸುಂದರ.

...ಹಾಗಾದ್ರೆ, ನಾನು ಹೊರಡ್ತೇನೆ. ಈಗ ಎಂಟು ಗಂಟೆ. ಹನ್ನೊಂದಕ್ಕೆ ...ಳೂರು ತಲುಪುತ್ತೇನೆ' ಅಂದೆ. ನನಗೆ ಬೇಸರವಾಗಿತ್ತು, 'ಪದ್ಯ, ಹಾಡು, ... ತಮಾಷೆ ಒಳ್ಳೆಯ ಮಿಶ್ರಣ' ಎಂದು ಪ್ರೋತ್ಸಾಹಿಸಿದೆ.

...ಮೂವರು ಹುಡುಗರು, ಇಬ್ಬರು ಹುಡುಗಿಯರು, ಆಹ್ವಾನಿತರಾಗಿದ್ದ ..., ಅನೇಕ ಪರಿಚಿತರು. ಅವರಲ್ಲಿ ಹಣ ಸಾಕಷ್ಟಿರಲಾರದು ಎಂದು ಸ್ವಲ್ಪ ... ಕೊಟ್ಟೆ. 'ಥ್ಯಾಂಕ್ಸ್, ನಾವಿಸ್ಟು ಬರ್ತೀವಿ' ಅಂದ ಕಾರವಾರದ ಕವಿ.

...ವಿಯುತ್ತಿದ್ದ ಕತ್ತಲು. ನಾನು ಕುಡಿಯುವ ಹಾಗಿರಲಿಲ್ಲ, ಕುಡಿಯಬೇಕೆಂಬ ...ring ಕೂಡ ಇರಲಿಲ್ಲ, ಸಿಗರೇಟ್ ಬಿಟ್ಟು ಐದೂವರೆ ವರ್ಷವಾಗಿತ್ತು, ...ಸ ಬೋರಾಗತೊಡಗಿತ್ತು, ಎಲ್ಲ ಮಂಕಾದಂತಿತ್ತು.

...'Have a good time!' ಎಂದು ನನ್ನ ಕಾರು ಬಿಡಲು ಡ್ರೈವರ್‌ಗೆ ...ದೆ. ಕಾರವಾರದ ಗೆಳೆಯನ ಹುಡುಗಿ ನನಗೆ ಗೊತ್ತು, ಬೆಂಕಿಯಂತಹವಳು. ...ಲು ಬೂದುಬಣ್ಣದ ಈಕೆ ಸಾಮಾನ್ಯ ಅನ್ನಿಸುತ್ತಿತ್ತು, ಆದರೆ ಮಾತಾಡಲು ...ಸಿದರೆ ಅವಳ ಕಣ್ಣು ಬೆಳಕು ಚೆಲ್ಲುತ್ತಿದ್ದವು. ಮಾಧವಿ ಸ್ವಲ್ಪ ಬೇರೆ ...ವಳು. ಅವಳಲ್ಲಿ ಎಲ್ಲ ರಿದಿ-ಮೇಕ್, ಅವಳು ಹಿಗ್ಗಲು ಸ್ಫೂರ್ತಿ ಬೇಕಿರಲಿಲ್ಲ. ಒಂದು ಮೂಲೆಯಲ್ಲಿ ಕೂತು ಕುಡಿತಿದ್ದಳು. ಅವಳ ಗೆಳೆಯ ಪಕ್ಕದಲ್ಲಿ ಕೂತು ಅವಳ ಕಣ್ಣುಗಳನ್ನೇ ನೋಡುತ್ತಿದ್ದ ಕಾರವಾರದ ಗೆಳೆಯ ತನ್ನ ಸ್ನೇಹಿತೆಯ ತಲೆ ನೇವರಿಸುತ್ತಾ ಅವಳ ಗಲ್ಲ ಸ್ಪರ್ಶಿಸುತ್ತಿದ್ದ. ಇದನ್ನೆಲ್ಲ ನೋಡಿದ ಬೆಂಗಳೂರಿನವರಿಗೆ ಅಸೂಯೆ. 'ಈಗ ಪದ್ಯ ಕೇಳಿ' ಎಂದು ಅವನು ಬೇಂದ್ರೆಯ ಪದ್ಯ ಓದತೊಡಗಿದ. ಆದರೆ ಅವನು ನಿರೀಕ್ಷಿಸಿದಂತೆ ಪ್ರಿಯಕರರ ಜೋಡಿಗಳು ಪ್ರತ್ಯೇಕವಾಗಲಿಲ್ಲ. ಅದು ಕವನಗಳ ಸ್ಪರ್ಧೆಯಲ್ಲ ಎನ್ನುವಂತೆ ವಿಸ್ಕಿ ಹೀರಿ, 'The old man and the SHE!' ಎಂದು ಕೂಗಿದ. 'Thousand year of solicitude' ಎಂದು ಇನ್ನೂ ಕ್ಲೀಷೆಗೆ ಇಳಿದ. 'Old is GHOLD' ಅಂದಳು




ಮಾಧವಿ. ಹಳೇ ಗಾದೆ ಎಲ್ಲರ ಹೃದಯವನ್ನು ನಿಲ್ಲಿಸಿದಂತಿತ್ತು. 'ನೀನು ಮಾತಾಡದೆ ನಗುತ್ತಾ ಇದ್ದರೇ ಚೆನ್ನಾಗಿರುತ್ತೆ!' ಎಂದು ಅವಳ ಗೆಳೆಯ ಹೇಳಿದ. ಅವಳು ಅವನ ತೋಳಿನಿಂದ ಬಿಡಿಸಿಕೊಂಡು ಎದ್ದು ತನ್ನದೊಂದು ಕವನ ಹೇಳತೊಡಗಿದಳು. 'ಕುಡಿದುಬಿಟ್ಟಿದ್ದಾಳೆ!' ಎಂದು ಬೂದುಬಣ್ಣದ ಚೆಲುವೆ ಪಿಸುಗುಟ್ಟಿದಳು. ಮಾಧವಿ ಅಲ್ಲಿಯೇ ಇದ್ದ ಇನ್ನೊಬ್ಬನ ಕೊರಳು ಅಪ್ಪಿ ಕೆನ್ನೆಯ ಮೇಲೆ ಮುತ್ತಿಟ್ಟಳು. ಹೋಟೆಲ್ ಸಂಗೀತ ತೀವ್ರವಾಗತೊಡಗಿತು. ಕಾಲ ಚುರುಕಾಗಿ ಚಲಿಸತೊಡಗಿತು. ಎಲ್ಲರೂ ಎದ್ದು ಡಾನ್ಸ್ ಮಾಡತೊಡಗಿದರು. 'ಕುಣಿಯೋಣು ಬಾರಾ' ಎಂದು ಒಬ್ಬ ನಕ್ಕ. ಅವರ ಕಾಲು ಸ್ವಾಯತ್ತ ಜೀವ ಪಡೆದಂತೆ ಕುಣಿಯತೊಡಗಿದವು. ಮಾಧವಿ ಹಾಡುತ್ತಾ ಇದ್ದಳು. ಆದರೆ ಹಾಡು ಕೂಡ ಯಾರಿಗೂ ಬೇಕಾಗಿರಲಿಲ್ಲ.

'ಮಿಂಚುತಿರುವ ರೇಶ್ಮೆಯಲ್ಲಿ
ಅರ್ಧ ಮುಚ್ಚಿ ಅರ್ಧ ಬಿಚ್ಚಿ
ಜಗನ್ಮಜವ ಗಗನದಲ್ಲಿ
ನಿಜದಾಸೆಯಿಂದ ಚುಚ್ಚಿ
ಗಂಡಿಗಾಗಿ ಕಾದುತಿರುವ
ಹಿಂಡು ಎದುರಿಗೆ-
ಮನಸ ಕೆದರಿದೆ!'

ಹಾಡು, ನೃತ್ಯ, ಗದ್ದಲ, ನಗೆ ಇನ್ನೇನು ತನ್ನ ತಾರಕ ಮುಟ್ಟಿ ಸ್ಫೋಟಗೊಳ್ಳಬೇಕು. ಮಾಧವಿ ಖುಷಿಯಿಂದ ಅಳುತ್ತಿದ್ದಾಳೆ.

ಓದುವ ಸೂಕ್ಷ್ಮ ಕಲೆ

ನಾನು ನನ್ನ ಮಗಳಿಗೆ ಜಾಯ್ಸ್‌ನ ಒಂದು ಕತೆ ಕೊಟ್ಟು 'ಇದನ್ನು ಓದು' ಎಂದು ಹೇಳಿದೆ. ಅದನ್ನು ಎರಡು ಮೂರು ಸಲ ಓದಿದರೂ ಆಕೆಗೆ ಅದು 'ಚೆನ್ನಾಗಿದೆ' ಅನ್ನಿಸಲಿಲ್ಲ. ಹಾಗೆಂದು ಹೇಳಿ ಹಿಂದಕ್ಕೆ ಕೊಟ್ಟಳು. ಅದಕ್ಕಿಂತ ಮಹಾ ಸಂಕೀರ್ಣ ಕತೆಯನ್ನು ಓದಿ ಖುಷಿಪಟ್ಟಿದ್ದ ನನ್ನ ಮಗಳಿಗೆ ಅದು ಏಕೆ ಹಿಡಿಸಲಿಲ್ಲ ಎಂದು ಚಿಂತಿಸಿದೆ. ನನಗೆ ಕೂಡ ಅನೇಕ ಸಲ ಹಾಗೇ ಆಗಿತ್ತು, ನನ್ನ ಕೆಲಸ, ಅನೇಕ ಅನ್ನಿಸಿಕೆಗಳ ನಡುವೆ ಓದಿದ ಒಂದು ಕತೆ ಕೇವಲ ಪಂಕ್ತಿ, ಪ್ಯಾರಾ, ಪುಟಗಳಾಗಿ ಮಾತ್ರ ಕಣ್ಣೆದುರು ಹಾದು ಹೋಗಿತ್ತು, ನನಗೆ ಗೊತ್ತಿತ್ತು- ನಾನು ಕತೆ ಓದುವ ಮನಃಸ್ಥಿತಿಯಲ್ಲಿಲ್ಲ ಎನ್ನುವುದು. ಮೊನ್ನೆ ಬೆಳಗಿನ ಜಾವ ನಾಲ್ಕು ಗಂಟೆಗೆ ಎಚ್ಚರವಾದಾಗ ಪಕ್ಕದಲ್ಲೇ ಇದ್ದ ಪುಸ್ತಕ ತೆಗೆದುಕೊಂಡು ಓದತೊಡಗಿದೆ. ಆ ಕತೆಯಲ್ಲಿ ಹೆಂಗಸೊಬ್ಬಳು ಹೋಟೆಲಿನಲ್ಲಿ ಕುಳಿತು 'ಈಗ ಬರುತ್ತೇನೆ' ಎಂದು ಹೋದ ಗಂಡನಿಗಾಗಿ ಕಾಯುತ್ತಿರುತ್ತಾಳೆ. ಆತ ಗಂಟೆಗಟ್ಟಲೆ ಕಾಯಿಸುತ್ತಾನೆ. ಆಗ ಆಕೆ ಪಕ್ಕದ ಟೇಬಲ್‌ನಲ್ಲಿದ್ದವನೊಬ್ಬನೊಂದಿಗೆ ಮಾತಾಡತೊಡಗುತ್ತಾಳೆ. ತನ್ನ ಕಾಲೇಜು ದಿನಗಳ ಪೀಟರ್, ಜೇಮ್ಸ್, ಬೆಂಜಮಿನ್, ಚಾರ್ಲಿ... ಇವರಲ್ಲಿ ಈತ ಯಾರಾದರೂ ಇರಬಹುದು, ಎಂದುಕೊಳ್ಳುತ್ತಾಳೆ. ಅರೆ ಕಲ್ಪನೆ, ಅರೆ ವಾಸ್ತವದಲ್ಲಿ ಸಾಗುವ ಈ ಕತೆ ಎಲ್ಲ ಮನುಷ್ಯರ ಕಾಯುವಿಕೆ, ಕಾತರ, ಹತಾಶೆಯನ್ನು ಕುರಿತದ್ದು.



ಬೆಳಗಿನ ನಿಶ್ಶಬ್ದದಲ್ಲಿ, ಮನಸ್ಸು ಹೊಸ ಚಿತ್ರ ಸ್ವೀಕರಿಸಲು ಸಿದ್ಧವಿದ್ದಾಗ ಓದಿದರೆ ಈ ಕತೆ ಅದ್ಭುತವಾಗಿತ್ತು, ಇದನ್ನು ನನ್ನ ಮಗಳಿಗೆ ಹೇಳಿದೆ, 'ಓದುವುದು ತುಂಬ ಕೋಮಲ ಕ್ರಿಯೆ, delicate ಕೆಲಸ. ಮೂಡ್ ಇದ್ದಾಗ ಮಾತ್ರ ಓದಬೇಕು' ಎಂದು ಹೇಳಿದೆ.

ಆಕೆ ಮೂಡ್ ಬಂದಾಗ ಓದಿದಳು. ಮಾತು ಅವಳಲ್ಲಿ ಅರ್ಥಗಳನ್ನು ಹುಟ್ಟಿಸುತ್ತಾ ನಡೆಯಿತು; ಹೊಸ ಧ್ವನಿಗಳನ್ನು ಮೂಡಿಸಿತು. ಎಂದೋ ಕೆಟ್ಟದಾಗಿ ಕಂಡಿದ್ದ ಕತೆ ಅವಳ ಪ್ರಿಯ ಕತೆಯಾಯಿತು.

● ಜನವರಿ 20, 1999


ರಂಗ-ಅಂತರಂಗ

'ಪ್ರೊಥಿಯೂ' ಎಂಬ ಜೀವಪರ ರಂಗ ತಂಡ

ಸುಮಾರು ಮೂರು ದಶಕಗಳ ಹಿಂದಿನ ಕಥೆ. ಒಂದೆಡೆ ದಲಿತ ಸಂಘರ್ಷ ಸಮಿತಿ, ರೈತ ಸಂಘದ ಚಳವಳಿಗಳು ತೀವ್ರಗೊಂಡಿದ್ದ ಕಾಲ, ಮತ್ತೊಂದೆಡೆ ಲಂಕೇಶ್, ತೇಜಸ್ವಿ ಮುಂತಾದವರು ಕರ್ನಾಟಕದುದ್ದಕ್ಕೂ ಜಾತ್ಯತೀತತೆಯನ್ನು ಬಿತ್ತುತ್ತಿದ್ದ ಸಂದರ್ಭ. ತನ್ನ ಅಂಕ ಪಟ್ಟಿಯನ್ನೆಲ್ಲಾ ಸುಟ್ಟು ಹಾಕಿ ಹೋರಾಟಕ್ಕೆ ಧುಮುಕಿದ ನಟರಾಜ್ ಹೊನ್ನವಳ್ಳಿ ಅವರು ಹೋರಾಟದಿಂದ ಪ್ರೇರಿತರಾಗಿ ರೂಪಿಸಿದ ನಾಟಕ ತಂಡವೇ 'ಪ್ರೊಫೆಷನಲ್ ಥಿಯೇಟರ್ ಯೂನಿಟ್'. ಅರ್ಥಾತ್ 'ಪ್ರೊಥಿಯೂ'.

ಚಿಂತನೆಗಳನ್ನು ಬೆಳೆಸಿದರು.

'ಪ್ರೊಥಿಯೂ' ರಂಗ ತಂಡ ಆರಂಭಕ್ಕೂ ಮುನ್ನ 'ಮುಂಗಾರಿನ ಹುಡುಗರು' ಎಂಬ ತಂಡ ಕಟ್ಟಿಕೊಂಡಿದ್ದ ಹೊನ್ನವಳ್ಳಿ, ಕಿರುತೆರೆ ಹಾಗೂ ಬೆಳ್ಳಿ ತೆರೆ ಕಲಾವಿದರಾದ ಅಚ್ಯುತಕುಮಾರ, ಧರ್ಮೇಂದ್ರ ಅವರು ಹೆಸರಾಂತ ಲೇಖಕ ನಟರಾಜ್ ಹುಳಿಯಾರ್ ನಿರ್ದೇಶನದಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದರು. ಮೊದಲೇ ಪ್ರಗತಿಪರ ಹೋರಾಟದ ಕಿಚ್ಚನ್ನು ಹಚ್ಚಿಕೊಂಡಿದ್ದ ಹೊನ್ನವಳ್ಳಿ ಅವರು ದಿ. ಕೆ.ವಿ. ಸುಬ್ಬಣ್ಣ ಅವರ 'ನೀನಾಸಂ' ನಲ್ಲಿ ನಟನೆಯನ್ನು



ಬೆಂಗಳೂರಿನಲ್ಲಿ ನಟರಾಜ್ ಹೊನ್ನವಳ್ಳಿ ನಿರ್ದೇಶನದ 'ಮಾಸ್ತಿ ಕಥಾ ವಾಚಿಕೆ' ನಾಟಕ ಪ್ರದರ್ಶನದ ನಂತರ ನಿರ್ದೇಶಕರೊಂದಿಗೆ ನಟರು ಮತ್ತು ಮೇಳದವರು.

ಕೊಬ್ಬರಿ ಮಾರುಕಟ್ಟೆಯಿಂದ ಹಿಗ್ಗಿದ ಕೆಲ ಜಾತಿ ಮನಸ್ಸುಗಳು ಬಲಾಢ್ಯರಾಗುತ್ತಿದ್ದ ಸಂದರ್ಭದಲ್ಲಿ ರಂಗಭೂಮಿ ಮೂಲಕ ಹೊಸದೊಂದು ಆಯಾಮ ಕೊಡಲೆಂದೆ ಹೊನ್ನವಳ್ಳಿ ಅವರು ಪ್ರೊಥಿಯೂ ಸಂಸ್ಥೆ ಆರಂಭಿಸಿದರು.

ಸಂಸ, ಬ್ರೆಕ್ಟ್, ಶೇಕ್ಸ್‌ಪಿಯರ್, ವೋಲೆ ಶೋಯೆಂಕ, ಬಿ.ಎಂ. ಶ್ರೀಕಂಠಯ್ಯ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ಸ್ಯಾಪೋಕ್ಲೀಸ್ ಹೀಗೆ ಜಗತ್ತಿನ ಶ್ರೇಷ್ಠ ಲೇಖಕರನ್ನು ತಿಪಟೂರಂತ ಪಕ್ಕಾ ವ್ಯವಹಾರಸ್ಥ ಜಾಗದಲ್ಲಿ ಪರಿಚಯಿಸಿದ ಕೀರ್ತಿ ಹೊನ್ನವಳ್ಳಿ ಅವರದ್ದು.

ಹೊಸ ಆಲೋಚನೆಗಳಿಗೆ ಒಡ್ಡಿಕೊಳ್ಳುವ ತುಡಿತವಿದ್ದ ಯುವಕರನ್ನು 'ಪ್ರೊಥಿಯೂ' ತಾಲೀಮು ಕೋಣೆಯ ಗ್ರಂಥಾಲಯಕ್ಕೆ ಕರೆದುಕೊಂಡು ಶ್ರೇಷ್ಠ ಕೃತಿಗಳನ್ನು ಓದಿಸುತ್ತಿದ್ದ ಹೊನ್ನವಳ್ಳಿ ಅವರು ತಮ್ಮ ರಂಗ ತಂಡದ ಮೂಲಕ ಹೊಸ ಕಾಲದ ಹುಡುಗರಲ್ಲಿ ಜಾತ್ಯತೀತತೆಯ

ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದವರು.

ಚಳವಳಿ ಹಿನ್ನೆಲೆಯಿಂದ ಬಂದಿದ್ದ ಲಂಕೇಶ್, ತೇಜಸ್ವಿ, ಶೇಕ್ಸ್‌ಪಿಯರ್, ವೋಲೇ ಶೋಯಂಕಾ, ಮಾಸ್ತಿ, ಕುವೆಂಪು ಮುಂತಾದ ಶ್ರೇಷ್ಠ ಲೇಖಕರಿಂದ ಪ್ರಭಾವಿತರಾಗಿದ್ದ ಹೊನ್ನವಳ್ಳಿ ರಂಗಭೂಮಿಯನ್ನೇ ವೃತ್ತಿಯಾಗಿ ತೆಗೆದುಕೊಂಡು ಊರಿನಲ್ಲಿ ಹೊಸ ಅಲೆಯ ನಾಟಕಗಳನ್ನು ಸೃಷ್ಟಿಸಿದರು.

ಪ್ರೊಥಿಯೂ ತಂಡ ತಮ್ಮ ಸಂಸ್ಥೆ ವತಿಯಿಂದ ನಾಟಕವನ್ನು ಹೊಸ ಕಾಲದ ಹುಡುಗರಿಗೆ ಕಲಿಸುವುದರ ಜೊತೆಗೆ ಹೊರ ಊರಿನ ತಂಡಗಳು ಅಭಿನಯಿಸುತ್ತಿದ್ದ ಶ್ರೇಷ್ಠ ನಾಟಕಗಳನ್ನು ತಿಪಟೂರಿಗೆ ಪರಿಚಯಿಸಿತು. ತಿಪಟೂರಿನಲ್ಲಿ ಪ್ರಯೋಗಾತ್ಮಕ ರಂಗಭೂಮಿಗೆ ಚಾಲನೆ ನೀಡಿದ ಹೆಗ್ಗಳಿಕೆ ಹೊನ್ನವಳ್ಳಿ ಅವರದ್ದು.

ದಲಿತ ಸಂಘರ್ಷ ಸಮಿತಿ ಹಾಗೂ ಪ್ರೊ. ನಂಜುಂಡಸ್ವಾಮಿ ಅವರ ರೈತ ಹೋರಾಟಕ್ಕೆ ಧುಮುಕಿದ ಹೊನ್ನವಳ್ಳಿ ಅಕಾಡೆಮಿಕ್ ಶಿಕ್ಷಣದಿಂದ ಏನೂ ಉಪಯೋಗವಿಲ್ಲ ಎಂದು ಮನಗಂಡು ತಮ್ಮ ಅಂಕಪಟ್ಟಿ ಸುಟ್ಟು ಹಾಕಿದ್ದರಿಂದ ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆ ಹೋಗುವ ಅವಕಾಶವನ್ನು ತಪ್ಪಿಸಿಕೊಳ್ಳುವಂತಾಯಿತು. ಆದರೆ ಆ ಬಗ್ಗೆ ಅವರಿಗೆ ಕಿಂಚಿತ್ತೂ ಬೇಸರವಿಲ್ಲ. ಲಂಕೇಶರ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಹೊನ್ನವಳ್ಳಿ ಅವರು ತಮ್ಮ ಸುದೀರ್ಘ ರಂಗ ಪ್ರಯಾಣದಲ್ಲಿ ಲಂಕೇಶರ ಹಲವಾರು ಕೃತಿಗಳನ್ನು ರಂಗಕ್ಕೆ ತಂದ ಹೆಗ್ಗಳಿಕೆ ಹೊಂದಿದ್ದಾರೆ. ಸಾಹಿತ್ಯದ ಗಂಭೀರ ಅಭ್ಯಾಸಿಯಾಗಿದ್ದ ಹೊನ್ನವಳ್ಳಿ ಅವರಿಗೆ ಲಂಕೇಶರ 'ಗುಣಮುಖ' ಮತ್ತು 'ಬಿರುಕು' ನಾಟಕಗಳಲ್ಲದೆ 'ಸಹಪಾಠಿ' ಎಂಬ ಸಣ್ಣ ಕಥೆಯನ್ನು ಯಶಸ್ವಿಯಾಗಿ ರಂಗಕ್ಕೆ ತಂದ ಹೆಗ್ಗಳಿಕೆ ಇದೆ. ಅದೇ ರೀತಿ ತೇಜಸ್ವಿಯವರ 'ಜುಗಾರಿ ಕ್ರಾಸ್' ಹಾಗೂ ನೀನಾಸಂ ತಿರುಗಾಟಕ್ಕೆ ಸಿದ್ಧಪಡಿಸಿದ 'ನಟನಾರಾಯಿಣಿ' ಹೊನ್ನವಳ್ಳಿ ನಿರ್ದೇಶಿಸಿದ ಯಶಸ್ವಿ ರಂಗ ಪ್ರಯೋಗಗಳು.


ಕಡಿಮೆ ಬಜೆಟ್‌ನಲ್ಲಿ ಪರಿಣಾಮಕಾರಿಯಾಗಿ 'ತಿರುಗಾಟ' ಮಾಡಬಹುದೆಂದು ತೋರಿಸಿಕೊಟ್ಟವರೇ ಹೊನ್ನವಳ್ಳಿ. 'ಪ್ರೊಥಿಯೂ' ಮೂಲಕ 'ಶಿಶಿರ ಪಯಣ'ವನ್ನು ಮೊದಲ ಬಾರಿಗೆ ಆರಂಭಿಸಿದರು. ಅಂದು ಅವರು ಆ ಮಿನಿ ತಿರುಗಾಟಕ್ಕೆ ಆಯ್ಕೆ ಮಾಡಿಕೊಂಡ ನಾಟಕ ಲಂಕೇಶರ 'ಗುಣಮುಖ'. ನಂತರ 'ಚೂರಿ ಕಟ್ಟೆ' ಮುಂತಾದ ನಾಟಕಗಳನ್ನು ನಾಡಿನುದ್ದಕ್ಕೂ ಪರಿಚಯಿಸಿದರು.

ಅದೇ ಸಮಯದಲ್ಲಿ ಒಂದಷ್ಟು ಹುಡುಗರು ಕನ್ನಡದ ಶ್ರೇಷ್ಠ ಕಥೆಗಾರರು, ಕವಿಗಳು, ವಿಮರ್ಶಕರ ಕೃತಿಗಳನ್ನು ಓದುವಂತಾಯಿತು. ನಾಟಕದ ಚಲನೆ ತಿಪಟೂರಿನಲ್ಲಿ ನಿಂತೇ ಹೋಗಿದ್ದ ಸಮಯದಲ್ಲಿ ಹದಿನೈದಕ್ಕೂ ಹೆಚ್ಚು ಮಂದಿ ಕಲಾವಿದರನ್ನು ರಂಗಭೂಮಿಯ ಶಾಸ್ತ್ರೀಯ ಅಧ್ಯಯನಕ್ಕೆ ಕಳುಹಿಸಿದರು. ಅಲ್ಲದೇ ನೂರಾರು ಹೊಸ ಕಾಲದ ಹುಡುಗರಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ವಿವೇಕ ಹೇಳಿಕೊಟ್ಟರು.

ತಿಪಟೂರಂತಹ ಜಾಗದಲ್ಲಿ ಈಗ ಯಾರೇ ನಾಟಕ ಮಾಡಿಸಿದರೂ ಕನಿಷ್ಠ 500 ಕ್ಕೂ ಹೆಚ್ಚು ಪ್ರೇಕ್ಷಕರು ಬರುವಂತೆ ಮಾಡುವ ಬಹುದೊಡ್ಡ ಬದಲಾವಣೆಯನ್ನು ಹೊನ್ನವಳ್ಳಿ ಮಾಡಿದ್ದಾರೆ. ಹೊನ್ನವಳ್ಳಿ ಅವರ ಗರಡಿಯಲ್ಲಿ ಬೆಳೆದ ನಾನೂ ಸೇರಿದಂತೆ ಬಹಳಷ್ಟು ಮಂದಿ ಈಗಾಗಲೇ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದೇವೆ.



ರಂಗಭೂಮಿಯನ್ನೇ ವೃತ್ತಿಯಾಗಿಸಿ ಕೊಂಡಿರುವ ಹೊನ್ನವಳ್ಳಿ, ತಮ್ಮ ವೃತ್ತಿ ಬದುಕಿನ ಸುಮಾರು ಮೂರು ದಶಕಗಳಿಂದ ನಾಟಕಕ್ಕಾಗಿ ಊರೂರು ಸುತ್ತಿದ್ದಾರೆ, ಕಾಡು



ಮೇಡು ಅಲೆದಿದ್ದಾರೆ, ರಾಜ್ಯದುದ್ದಗಲಕ್ಕೂ ಸಂಚ... ಮಾಡಿದ್ದಾರೆ. ಎಲ್ಲಾ ಊರುಗಳಿಗೂ ಹೋಗಿ ನಾ... ಮಾಡಿಸಿದ್ದಾರೆ. ಸದ್ಯ ಸಾಣೇಹಳ್ಳಿ ರಂಗಶಾಲೆಯ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಒ... ಬೆಂಗಳೂರಿನಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಾಟಕೋ... ನಡೆಯುತ್ತಿತ್ತು, ಆ ನಾಟಕೋತ್ಸವಕ್ಕೆ ಹೊನ್ನವಳ್ಳಿ ಅವ... 'ಮಾಸ್ತಿ ಕಥಾ ವಾಚಿಕೆ' ಶೀರ್ಷಿಕೆಯಡಿ ಜೋಗೋ... ಅಂಜಪ್ಪನ ಕೋಳಿ ಕಥೆ, ವೆಂಕಟಿಗನ ಹೆಂಡತಿ, ವೆಂಕಟಶಾ... ಪ್ರಣಯ ಪ್ರಸಂಗ ನಾಟಕವನ್ನು ಆಯ್ಕೆ ಮಾಡಿಕೊಂಡಿದ್ದ... ಅದರಲ್ಲಿ ನಾವೆಲ್ಲಾ ಅಭಿನಯಿಸಿದ್ದೆವು. ಇಡೀ ನಾಟ... ಹೊನ್ನವಳ್ಳಿ ಅವರು ಮಾಂತ್ರಿಕ ಸ್ಪರ್ಶ ಕೊಟ್ಟಿದ್ದ... ತಿಪಟೂರಿನಿಂದ ಬೆಂಗಳೂರಿಗೆ ಹೋಗಲು ರೈಲಿ... ಸಹ ನಮ್ಮ ಯಾರ ಬಳಿಯೂ ಹಣವೇ ಇರಲಿಲ್ಲ, ಹೇಗೆ... ಹಣ ಹೊಂದಿಸಿಕೊಂಡು ಬೆಂಗಳೂರು ಮುಟ್ಟಿದೆ... ಹೊನ್ನವಳ್ಳಿ ನಿರ್ದೇಶನದ ಆ ನಾಟಕ ನೋಡಿದ ಜನ... ಹಾಗೂ ನಾಟಕೋತ್ಸವದ ಆಯೋಜಕರು ನಮ್ಮೆಲ್ಲರ... ಅಪ್ಪಿಕೊಂಡರು.

ಈಗ ಕಿರುತೆರೆಯಲ್ಲಿ ಮಿಂಚುತ್ತಿರುವ ಅಚ್ಯುತಕುಮ... ಧರ್ಮೇಂದ್ರ ಅರಸ್, ಶೈಲಶ್ರೀ, ಭವಾನಿ, ಅನಿಲ ಮುಂತ... ನಟರೆಲ್ಲಾ ಹೊನ್ನವಳ್ಳಿ ಅವರ ಗರಡಿಯ... ಬೆಳೆದವರೆ. ರಂಗಭೂಮಿ ಮೂಲಕ ಸಾಹಿ... ವಾತಾವರಣ ನಿರ್ಮಿಸಿದ್ದನ್ನು ಗೌರವಿಸಿ ... ಸಾಲಿನ ತಿಪಟೂರು ಸಾಹಿತ್ಯ ಸಮ್ಮೇಳ... ಹೊನ್ನವಳ್ಳಿ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆ... ಮಾಡಲಾಗಿದೆ.

● ಉಗಮ ಶ್ರೀನಿವಾ...

'ಬಿಗ್ ಬಾಸ್ ಗೋಲ್ ಮಾಲ್' ಲೇಖನ ಅರ್ಥಪೂರ್ಣವಾಗಿತ್ತು

ಒಂದೇ ರಾತ್ರಿಯಲ್ಲಿಯೇ ಕರೋಡ್‌ಪತಿಯಾಗಬೇಕೆಂಬ ದೊಡ್ಡ ಆಮಿಷವನ್ನೊಡ್ಡುತ್ತಿದ್ದ 'ಕೌನ್ ಬನೇಗಾ ಕರೋಡ್ ಪತಿ', 'ಸವಾಲ್ ದಸ್ ಕರೋಡ ಕಾ', 'ಚಪ್ಪರ ಪಾಡ ಕೇ' ಹಾಗೂ 'ಕನ್ನಡದ ಕೋಟ್ಯಾಧಿಪತಿ' ಯಂತಹ ಟಿ.ವಿ. ಆಟಗಳನ್ನು (ಜುಲೈ 17, 2013 ರ ನೆಟ್ಟನ 'ಗೌರಿ ಲಂಕೇಶ' ಪತ್ರಿಕೆಯಲ್ಲಿ ಪ್ರಕಟವಾದ) ಡಾ. ಸೋಮನಾಥರ 'ಬಿಗ್ ಬಾಸ್ ಗೋಲ್ ಮಾಲ್' ಲೇಖನ ನೆನಪಿಸಿತು. ಲೇಖನದ ವಿಶ್ಲೇಷಣೆ ಅರ್ಥಪೂರ್ಣವಾಗಿತ್ತು.




ಟಿ.ವಿ. ಮುಖಾಂತರ ಬಿತ್ತರಿಸುತ್ತಿರುವ 'ಬಿಗ್ ಬಾಸ್' ನಂತಹ ಇನ್ನೂ ಅನೇಕ ಕಾರ್ಯಕ್ರಮಗಳು ಇವತ್ತು ಮನುಷ್ಯನನ್ನು ಮೋಸಗಾರ ಹಾಗೂ ಅಪ್ರಾಮಾಣಿಕರನ್ನಾಗಿ ಮಾಡುತ್ತಿವೆ. ಅವ್ಯವಹಾರ, ಅಪಹರಣ, ಮೋಸ, ಸುಳ್ಳು, ಬಲತ್ಕಾರ, ಹಿಂಸೆ ಇತ್ಯಾದಿ ಎಲ್ಲ ಕೆಟ್ಟಗುಣಗಳನ್ನೂ ಟಿ.ವಿ. ಇಂದು ಇಂತಹ ಕೆಲವು ಕಾರ್ಯಕ್ರಮಗಳ ಮುಖಾಂತರ ಪ್ರೇಕ್ಷಕನಿಗೆ ಕಲಿಸ ಹತ್ತಿದೆ.

ಇಂತಹ ಕಾರ್ಯಕ್ರಮಗಳು ಟಿ.ವಿ. ಚಾಲನ್‌ಗಳ ಮುಖಾಂತರ ನಡೆದ ಸಾಂಸ್ಕೃತಿಕ ದಾಳಿಗಳಾಗಿವೆ. ಲೇಖನ ಓದುತ್ತ ಸಮಾಜದಲ್ಲಿ ಎಂತಹ ವಿಷಮಯ ವಾತಾವರಣ ಇದೆ ಎಂದೆನಿಸಿತು. ಇಂತಹ ಕಾರ್ಯಕ್ರಮಗಳು ಮನೋರಂಜನೆಗೆ ಮಾತ್ರ ಸೀಮಿತವಾಗಿದ್ದು ಅಲ್ಲಿ ತೋರಿಸಿದಂತೆ ಬದುಕು ಮಾಡಲಾದೀತೇ?

- ಪ್ರೊ.ಎಂ.ಬಿ.ಪಾಟೀಲ, ರಾಮದುರ್ಗ

ರಿಯಾಲಿಟಿ ಶೋಗಳು ಬರೀ ಮ್ಯಾಚ್ ಫಿಕ್ಸಿಂಗ್

ಕ್ರಿಕೆಟ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ಮಾಡಿದ ಎಂಟು ಆಟಗಾರರಲ್ಲಿ ಕಡೆ ಪಕ್ಷ ಮೂವರನ್ನಾದರೂ ಸಾಕ್ಷಿ ಸಹಿತ ಹಿಡಿದು ಜೈಲಿಗಟ್ಟಲು ಸಾಧ್ಯವಾಯಿತು. ಆದರೆ ಟಿವಿಗಳ ರಿಯಾಲಿಟಿ ಶೋಗಳಲ್ಲಿ ಹೆಚ್ಚಿನವು ಫಿಕ್ಸ್ ಆಗಿದ್ದರೂ ಈ ಫಿಕ್ಸಿಂಗನ್ನು ಸಾಬೀತು ಮಾಡುವುದು ಕಷ್ಟ. ಶಿಲ್ಪಾ ಶೆಟ್ಟಿ ಭಾಗವಹಿಸಿದ್ದ ಇಂಗ್ಲೆಂಡಿನ 'ಬಿಗ್ ಬ್ರದರ್' ರಿಯಾಲಿಟೀ ಶೋನಲ್ಲಿ ಶಿಲ್ಪಾಗೆ "ಜನಾಂಗ ನಿಂದನೆ" ಮಾಡಿದ್ದ ಜೇಡ್ ಗೂಡಿ ಎಂಬ ಸ್ಪರ್ಧಿಯು ಕೆಲ ಸಮಯದ ನಂತರ




ಹೇಳಿದ್ದೇನೆಂದರೆ "ವಿವಾದ ಹುಟ್ಟಿಸಿ ಜನರ ಭಾವನೆಗಳನ್ನು ಕೆರಳಿಸಿ ಈ ಇಂಗ್ಲಿಷ್ ಶೋಗೆ ಭಾರತದಲ್ಲಿ ಟಿಆರ್‌ಪಿ ಏರಿಸುವ ಸಲುವಾಗಿ ನಿರ್ದೇಶಕರು ಹೇಳಿದಂತೆ ತಾನು ಜನಾಂಗ ನಿಂದನೆಯ ಪದಗಳನ್ನು ಉಪಯೋಗಿಸ ಬೇಕಾಯಿತು" ಎಂದು. ಇದಕ್ಕೆ ಜಾಹೀರಾತು ಪರಿಭಾಷೆಯಲ್ಲಿ ಹೇಳುವುದೇನೆಂದರೆ - **Negative publicity for Positive Results**- ಅಂದರೆ ಋಣಾತ್ಮಕ ಪ್ರಚಾರದಿಂದ ಧನಾತ್ಮಕ ಫಲಿತಾಂಶ.

ಕರಾವಳಿಯಲ್ಲಿ ಜನರ ಗಮನವನ್ನು ಕನ್ನಡದ ಬಿಗ್ ಬಾಸ್ ಕಡೆ ತಿರುಗಿಸಲು ಒಬ್ಬ ಸ್ಪರ್ಧಿಯಿಂದ ಯಕ್ಷಗಾನಕ್ಕೆ ಅವಮಾನವಾಗುವಂತಹ ಮಾತು ಹೇಳಿಸಿ ಅದಕ್ಕೆ ಅವರೇ ಪಬ್ಲಿಸಿಟಿ ಕೊಟ್ಟದ್ದು ಸಹಾ ಇಂತಹದ್ದೇ ತಂತ್ರವಾಗಿತ್ತು.

'ಲಂಕೇಶ್'ನಲ್ಲಿ ಹೇಳಿರುವಂತೆ ಬಿಗ್ ಬಾಸ್ ಟಿವಿ ಶೋ ಇದು ರಿಯಾಲಿಟಿ ಶೋ ವೇಷದ ಗೋಲ್ ಮಾಲ್ ನಾಟಕ ಎಂದು ಒಂದನೆಯ ದಿನದಿಂದಲೇ ಅರ್ಥವಾಗುತ್ತಿತ್ತು. "ಜಗಳ ಮಾಡುವವರನ್ನು ಕ್ಲಾಸಿನಿಂದ ಔಟ್ ಮಾಡಲಾಗುತ್ತದೆ" -ಎಂದು ಶಾಲೆಯಲ್ಲಿ ಮೇಷ್ಟ್ರು ಹೇಳಿದರೆ, ಟಿವಿಯ 'ಬಿಗ್ ಬಾಸ್'ನಲ್ಲಿ ಸ್ಪರ್ಧಿಗಳಿಗೆ ಆಯೋಜಕರು ಹೇಳುವುದು ಉಲ್ಟಾ, ಅಂದರೆ- "ಜಗಳ ಮಾಡದೇ ಇರುವವರನ್ನು ಔಟ್ ಮಾಡಲಾಗುತ್ತದೆ" ಎಂದು!

ಆದಕ್ಕಾಗಿ ಎಲ್ಲ ಸ್ಪರ್ಧಿಗಳೂ ಕಾಲು ಕೆರೆದು ಜಗಳ ಮಾಡಿ ಪ್ರೇಕ್ಷಕರ ಗಮನ ಸೆಳೆಯಲು ಪ್ರಯತ್ನಿಸಿದ್ದು, ಇವರ ಜಗಳಗಳೆಲ್ಲಾ ಒಂದು ನಾಟಕ ಎಂದು ಸೂಕ್ಷ್ಮವಾಗಿ ನೋಡುವ ವೀಕ್ಷಕರಿಗೆ ಅರ್ಥವಾಗುತ್ತಿತ್ತು, ಇದರಿಂದ ನೋಡುಗರ ಭಾವನೆಗಳನ್ನು ಕೆರಳಿಸಿ ವೀಕ್ಷಕರಿಂದಲೇ ಬಾಯಿ



ಮಾತಿನ ಪ್ರಚಾರ ಮಾಡಿಸುವುದು. ಹಿಂದಿಯ 'ಸೆಲೆ... ಕಿಚನ್' ಎಂಬ ರಿಯಾಲಿಟಿ ಶೋನಲ್ಲಿ ರಾಖಿ ಸಾವಂ... ತನ್ನ ಸಹ ನಟಿಗೆ ಕೆಟ್ಟದಾಗಿ ಬಯ್ಯುವ ದೃಶ್ಯವನ್ನು ... ಸಾರಿ ರಿಟೇಕ್ ಮಾಡಿದ್ದಾರೆಂದರೆ ಈ ರಿಯಾಲಿಟಿ ಶೋ... ಅಸಲಿಯತ್ತು ಮತ್ತು ಶೂಟಿಂಗಿನ ತವ... ಅರ್ಥವಾಗುತ್ತದೆಯಲ್ಲವೇ. ಕ್ರಿಕೆಟ್‌ನಲ್ಲಿ ಫಿಕ್ಸಿಂಗ್ ಮ... ಪ್ರೇಕ್ಷಕರಿಗೆ ಆಟಗಾರರು ದ್ರೋಹ ಮಾಡಿದರೆ ಶಿಕ್ಷೆಯು... ಆದರೆ ರಿಯಾಲಿಟಿ ಶೋಗಳಲ್ಲಿ ಫಿಕ್ಸಿಂಗ್ ಮ... ಟಿವಿಯವರು ವೀಕ್ಷಕರಿಗೆ ದ್ರೋಹ ಬಗೆದರೆ ಯಾವ... ಶಿಕ್ಷೆಯಿಲ್ಲ. ಈ ಟಿಆರ್‌ಪಿ ರೇಸಿನಲ್ಲಿ ವೀಕ್ಷಕ ಮ... ಮೂರ್ಖನಾಗುವುದು.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂ...

ಕರಾವಳಿಯಲ್ಲಿ ಜನರ ಗಮನವನ್ನು ಕನ್ನಡದ ... ಬಾಸ್ ಕಡೆ ತಿರುಗಿಸಲು ಒಬ್ಬ ಸ್ಪರ್ಧಿಯಿಂದ ಯಕ್ಷಗಾ... ಅವಮಾನವಾಗುವಂತಹ ಮಾತು ಹೇಳಿಸಿ ಅದಕ್ಕೆ ಅ... ಪಬ್ಲಿಸಿಟಿ ಕೊಟ್ಟದ್ದು ಸಹಾ ಇಂತಹದ್ದೇ ತಂತ್ರವಾಗಿ...

ುದಯೋನ್ಮುಖ ಪ್ರತಿಭೆ ಗೌಸ್ ಪೀರ್ ಅವರು ಇತ್ತೀಚೆಗೆ ಹೆಸರಾಂತ ಗೀತರಚನಾಕಾರರನ್ನು ಹಿಂದಿಕ್ಕಿ ಂದು ಪ್ರಶಸ್ತಿಯನ್ನು ಗೆದ್ದಿದ್ದಾರೆ. ಅವರ ಎದುರು 'ಸೋತವರಲ್ಲಿ' ಇನ್ನೊಬ್ಬ ಗೀತ ರಚನೆಕಾರ ಹೃದಯಶಿವ ೂಡ ಒಬ್ಬರು. ಇಲ್ಲಿ ಗೌಸ್ ಪೀರ್ ಅವರನ್ನು ಹೃದಯಶಿವಾ ಅವರೇ ನಮ್ಮ ಓದುಗರಿಗೆಂದು ಸಂದರ್ಶಿದ್ದಾರೆ!

ಪದೇ ಪದೇ' ತಂದು ಕೊಟ್ಟ ಪ್ರಶಸ್ತಿ



'ಚಿರು' ಚಿತ್ರದ 'ಇಲ್ಲೆ ಇಲ್ಲೆ ಎಲ್ಲೋ ನನ್ನ ಮನಸು ಸೆಯಾಗಿದೆ...', 'ಮುರಳಿ ಮೀಟ್ಸ್ ಮೀರಾ' ಚಿತ್ರದ 'ನಿನ್ನ ುಖ ನೋಡಿ...', 'ಕೆಂಪೇಗೌಡ' ಚಿತ್ರದ 'ಥರ ಥರ...' ಡುಗಳ ಮೂಲಕ ಬೆಳಕಿಗೆ ಬಂದ ಭರವಸೆಯ ೀತರಚನಾಕಾರ ಗೌಸ್ ಪೀರ್ ಈ ಟಿವಿ ಚಾನೆಲ್ ಕೊಡುವ ತ್ಯುತ್ತಮ ಗೀತ ರಚನಕಾರ' ಪ್ರಶಸ್ತಿಯನ್ನು ಪಡೆದಿದ್ದಾರೆ. ದೇ ಖುಷಿಯಲ್ಲಿ ತಮ್ಮ ಮನದಾಳದ ಮಾತುಗಳನ್ನು ಂಕೇಶ್' ಜೊತೆ ಹಂಚಿಕೊಂಡಿದ್ದಾರೆ.

** ನಿಮ್ಮ ಕುಟುಂಬದ ಹಿನ್ನೆಲೆ?*

- ನಾನು ಚಿತ್ರದುರ್ಗದ ಹಿರಿಯೂರಿನವನು. ನನ್ನ ತಂದೆ ಾ.ಬಿ.ಯಲ್ಲಿ ಕೆಲಸ ಮಾಡ್ತಿದ್ರು. ಈಗ ನಿವೃತ್ತರಾಗಿದ್ದಾರೆ. ಯಿ ಗೃಹಿಣಿ. ಉಳಿದಂತೆ ತಾತ ಬುಡೇನ್ ಸಾಬ್ ಸಂಗೀತ ಾಗೂ ಹರಿಕಥಾ ವಿದ್ವಾನರು.

** ಸಿನಿಮಾಗೆ ಬಂದಿದ್ದು ಹೇಗೆ?*

- ನಿರ್ದೇಶಕನಾಗುವ ಕನಸು ಹೊತ್ತು ಚಿತ್ರರಂಗಕ್ಕೆ ಬಂದೆ. ಸಾಕಷ್ಟು ಿ ಪ್ರಯತ್ನ ಮಾಡಿದೆ. ಎಲ್ಲೂ ಅವಕಾಶ ಸಿಗಲಿಲ್ಲ, ಬೇರೆ ದಾರಿ ಇಲ್ಲದೆ ಾಡು ಬರೆಯಬೇಕಾಯ್ತು. 'ರೈಟ್ ಆದ್ರೆ' ನನ್ನ ಮೊದಲ ಸಿನಿಮಾ. ಂತರದ್ದು 'ತಬ್ಬಲಿ'. ಈ ಎರಡೂ ಚಿತ್ರಗಳಿಗೆ ಹಾಡು ಬರೆದ ನಂತರವೂ ರಡು ವರ್ಷ ಅವಕಾಶಗಳಿಲ್ಲದೇ ಖಾಲಿ ಕೂರಬೇಕಾಯಿತು. ಆವಾಗಲೇ ಝೇಂಕಾರ್ ಆಡಿಯೋ ಕಂಪನಿಯ ಭರತ್ ಪರಿಚಯವಾದರು. ಅವರ ೂಲಕ ನಿರ್ದೇಶಕ ಮಹೇಶ್ ಬಾಬು ಪರಿಚಯ ಆಯ್ತು. 'ಚಿರು' ಚಿತ್ರದ ಲ್ಲೆ ಇಲ್ಲೆ ಎಲ್ಲೋ...' ಹಾಡು ಬರೆಯುವ ಅವಕಾಶ ಸಿಕ್ತು. ಹಾಡು ಹಿಟ್ ಯ್ತು, ಅಲ್ಲಿಂದ ನನ್ನ ವೃತ್ತಿ ಬದುಕಿಗೊಂದು ಹೊಸ ತಿರುವು.

** ಸ್ಪರ್ಧೆ ಹೇಗಿದೆ?*

- ನಾನು ಮೂಲತಃ ಕವಿಯಲ್ಲ. ಚಿತ್ರರಂಗದಲ್ಲಿ ಬರೆಯುತ್ತಿರುವ ಹಿರಿಯ ಾಹಿತಿಗಳ ಹಾಡುಗಳನ್ನು ಕೇಳುತ್ತೇನೆ. ಅವುಗಳಿಂದ ಕಲಿಯುತ್ತೇನೆ. ಅಲ್ಲಿಯ ತ್ರಗಳನ್ನು ಹಾಡು ಬರೆಯಬೇಕಾದ ಸಂದರ್ಭದಲ್ಲಿ ಅನುಸರಿಸುತ್ತೇನೆ. ಪ್ರಮುಖ ಾಹಿತಿಗಳ ಜೊತೆಗಿನ ರೇಸ್ ಖುಷಿಕೊಡುತ್ತದೆ.

** ಹಾಡು ಬರೆಯುವಾಗ ಹೇಗೆಲ್ಲ ತಯಾರಿ ನಡೆಸಿಕೊಳ್ಳುತ್ತೀರಿ?*

- ನಾನು ನಿರ್ದೇಶಕರ ಸಾಹಿತಿ. ಅವರು ಕೊಡುವ ಹಾಡಿನ ಸನ್ನಿವೇಶಕ್ಕೆ ್ಯಾಯ ಒದಗಿಸಲು ಪ್ರಯತ್ನಿಸುತ್ತೇನೆ. ಡೈರೆಕ್ಟರ್ ಕನಸಿಗೆ ಪೂರಕವಾಗಿ ಹಾಡು ರೆದುಕೊಡಲು ಬಯಸುತ್ತೇನೆ.

** ಹಾಡು ಬರೆಯೋಕೆ ಇಂಥದ್ದೇ ಮೂಡ್, ಇಂಥದ್ದೇ ಜಾಗ ಬೇಕು ಂತ ಏನಾದ್ರೂ ಉಂಟಾ?*

- ಹಾಗೇನು ಇಲ್ಲ. ಎಲ್ಲ ಸಂದರ್ಭದಲ್ಲೂ ಬರೆಯಬೇಕಾಗುತ್ತೆ. ಕೆಲವು ು ಬೇಗ ಬರೆಯಬಹುದು. ಕೆಲವೊಮ್ಮೆ ಟೈಮ್ ಬೇಕಾಗುತ್ತೆ. ನೋಡಿ, ಲ್ಲೆ ಇಲ್ಲೆ ಎಲ್ಲೋ...' ಹಾಡು ಬರೆಯೋಕೆ ಒಂದು ತಿಂಗಳ ಕಾಲಾವಕಾಶ ಗೊಂಡೆ. ಆದರೆ 'ವಿಕ್ಟರಿ' ಚಿತ್ರಕ್ಕೆ ಬರೆದ ಹಾಡಿಗೆ ಅರ್ಧ ದಿನ ಸಾಕಾಯ್ತು.

** ಸಿನಿಮಾರಂಗದಲ್ಲೇ ಬದುಕು ಕಟ್ಟಿಕೊಳ್ತೀನಿ ಅನ್ನೋ ಭರವಸೆ ಇದೆಯಾ?*

- ಖಂಡಿತ ಇದೆ. ನನಗಂತೂ ಇಲ್ಲೀತನಕ ಒಳ್ಳೆ ಪ್ರೋತ್ಸಾಹ ಸಿಕ್ಕಿದೆ. ನನ್ನ ಹಾಡುಗಳನ್ನು ಕೇಳಿ ಮೆಚ್ಚಿಕೊಂಡ ಜನರೇ ನನಗೆ ಸ್ಫೂರ್ತಿ. ಚಿತ್ರರಂಗಕ್ಕೆ ಬಂದಿದ್ದಾಯಿತು. ಇಲ್ಲೇ ಬದುಕಬೇಕು, ಸಾಧಿಸಬೇಕು ಅಂತ ನಿರ್ಧರಿಸಿಯಾಗಿದೆ.

** ಒಬ್ಬ ಸಾಹಿತಿಗೆ ಅಧ್ಯಯನಶೀಲಗುಣ ಮುಖ್ಯವಾಗುತ್ತದೆ. ನೀವು ಯಾರ್ಯಾರನ್ನು ಓದಿಕೊಂಡಿದ್ದೀರಿ, ನಿಮ್ಮ ನೆಚ್ಚಿನ ಸಾಹಿತಿ ಯಾರು?*

- ನಾನು ಹೆಚ್ಚಾಗಿ ಓದಿಲ್ಲ. ಇವಾಗಷ್ಟೇ ಪೂರ್ಣಚಂದ್ರ ತೇಜಸ್ವಿಯವರ ಕೆಲವು ಕಥೆಗಳನ್ನು ಓದಲು ಆರಂಭಿಸಿದ್ದೇನೆ. ತೇಜಸ್ವಿಯವರ ಬರವಣಿಗೆಯ ಶೈಲಿ ನಂಗೆ ತುಂಬಾ ಇಷ್ಟ. ಇನ್ನು ಮುಂದೆ ಸ್ವಲ್ಪ ಓದುವ ಕಡೆ ಗಮನ ಹರಿಸುವ ಹಂಬಲವಿದೆ.

** ನಿಮ್ಮ ಮನೆ ಭಾಷೆ ಉರ್ದು. ಕನ್ನಡದ ಸಾಂಗತ್ಯ ಹೇಗೆ?*

ಸಂದರ್ಶನ

- ಒಳ್ಳೆ ಪ್ರಶ್ನೆ ಕೇಳಿದ್ರಿ. ನನ್ನ ಊರಿನ ಪರಿಸರ, ಅಲ್ಲಿಯ ಗೆಳೆಯರು, ಅವರ ಜೊತೆ ಒಡನಾಡಿದ ಬದುಕು ಕನ್ನಡತನ ಬೆಳೆಸಿಕೊಳ್ಳಲು ಸಹಕಾರಿಯಾಗಿವೆ. ನಾನು ಆಗಾಗ ಉರ್ದು ಗಜಲ್‌ಗಳನ್ನೂ ಕೇಳುತ್ತೇನೆ. ಯಾರದ್ದು ಅಂತಿಲ್ಲ. ಎಲ್ಲರ ಗಜಲ್‌ಗಳನ್ನೂ ಕೇಳುತ್ತೇನೆ.

** ಇತ್ತೀಚೆಗಷ್ಟೇ 'ರಾಂಬೋ' ಚಿತ್ರದ 'ಪದೇ ಪದೇ...' ಹಾಡಿಗೆ ಈ ಟಿವಿಯ 'ಅತ್ಯುತ್ತಮ ಗೀತರಚನಾಕಾರ' ಪ್ರಶಸ್ತಿ ಬಂತು. ಅಂತಿಮ ಸುತ್ತಿನ ಸ್ಪರ್ಧಿಗಳ ಪಟ್ಟಿಯಲ್ಲಿ ನಾನೂ ಸೇರಿದಂತೆ ಸುಮನಾ ಕಿತ್ತೂರ, ಜಯಂತ ಕಾಯ್ಕಿಣಿ, ಯೋಗರಾಜ ಭಟ್ ಇದ್ರು. ಪ್ರಶಸ್ತಿ ಪಡೆದ ಖುಷಿಯ ಬಗ್ಗೆ ಹೇಳ್ತೀರಾ?*

- ಖುಷಿ ಒಂದುಕಡೆಯಾದರೆ, ಇನ್ನೊಂದು ಕಡೆ ಆಶ್ಚರ್ಯ ಆಯ್ತು. ನೀವು ಮೊದಲು ಬರೆದಿದ್ದ ('ಕಣ್ಣಾಮುಚ್ಚೆ ಕಾಡೇಗೂಡೆ ಆಟ ನಮ್ಮ ಬಾಳು') ಹಾಡಿನ ಟ್ಯೂನ್ ಕೊಟ್ಟು ಫೀಮೇಲ್ ವರ್ಷನ್ ಬರೆಯಲು ನಿರ್ದೇಶಕರು ಹೇಳಿದ್ರು. ಅಲ್ಲಿನ ಸಾಲುಗಳನ್ನು ಮೀರಿಸುವಷ್ಟರ ಮಟ್ಟಿಗೆ ಬರೆಯಬೇಕಿತ್ತು. ಏಕೆಂದರೆ, ಅಷ್ಟು ಹೊತ್ತಿಗಾಗಲೇ 'ಕಣ್ಣಾಮುಚ್ಚೆ...' ಸಾಲುಗಳನ್ನು ಕೇಳಿ ಕೇಳಿ ಅದರ ಗುಂಗಿನಲ್ಲೇ ನಿರ್ದೇಶಕರಿದ್ರು. ಅವರನ್ನು ಒಪ್ಪಿಸುವುದೇ ದೊಡ್ಡ ಸವಾಲಾಗಿತ್ತು. ಪ್ಯಾಥೋ ಸಾಂಗ್ ಬರೆಯಲು ನನಗೆ ಆಗಲ್ಲ, ಬರೆಯಲ್ಲ ಅಂದ್ರೆ ಅನ್‌ಫಿಟ್ ಅಂದ್ಕೋತಾರೆ ನೋಡಿ, ಅದಕ್ಕೋಸ್ಕರ ಬರೆದೆ. ಈ ಪ್ರಶಸ್ತಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

** ನಿಮ್ಮ ಮುಂದಿನ ಚಿತ್ರಗಳು?*

- 'ಕೇಸ್ ನಂ.18/9', 'ಬರ್ಫಿ' ಮತ್ತು 'ವಿಕ್ಟರಿ'.


** ಆಲ್ ದ ಬೆಸ್ಟ್!*

- ಥಾಂಕ್ಯೂ...



● ಹೃದಯ ಶಿವ

ಭೈರೇಗೌಡನ ಬಯಕೆ



ನಿರ್ದೇಶಕ ಕಂ ನಟ ಪ್ರೇಮ್ ಯಾನೆ ರಕ್ಷಿತಾಳ ಪತಿ ಪ್ರೇಮ್ ಮುಂದಿನ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ರಾಜಕೀಯಕ್ಕೆ ಫುಲ್‌ಟೈಮ್ ಎಂಟ್ರಿ ಕೊಡುತ್ತಾರಾ?

ಪ್ರೇಮ್ ಈಗ ಸಿನಿಮಾ ನಿರ್ದೇಶಿಸುವ ಬದಲು ಸಾಲು ಸಾಲಾಗಿ ನಾಯಕನಟನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತೆರೆಯ ಹಿಂದಿನ ಕಲಸಕ್ಕೆ ಬೇಡಿಕೆ ಇದ್ದರೂ ಅದರ ಬಗ್ಗೆ ಪ್ರೇಮ್ ಮುತುವರ್ಜಿ ವಹಿಸುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ನಾಯಕ ನಟನಿಗೆ ಸಿಗುವ ಪಾಪ್ಯುಲರಿಟಿ!

ಸದ್ಯದಲ್ಲೇ ಪ್ರೇಮ್ 'ಮೈ ನೇಮ್ ಇಸ್ ಬೈರೇಗೌಡ' ಎಂಬ ಚಿತ್ರದಲ್ಲಿ ನಟಿಸಲಿದ್ದಾರಂತೆ. ಇದರ ಕತೆಯನ್ನು ರಕ್ಷಿತಾ ಬರೆದಿದ್ದು ಸಿನಿಮಾವನ್ನು ಮಹೇಶ್ ನಿರ್ದೇಶಿಸಲಿದ್ದಾರಂತೆ. ಈ ಚಿತ್ರವನ್ನೂ ಪ್ರೇಮ್ ನಿರ್ಮಿಸುತ್ತಾರೆ. ವಿಶೇಷವೆಂದರೆ ಚಿತ್ರದಲ್ಲಿ ರೆಬೆಲ್‌ಸ್ಟಾರ್ ಅಂಬರೀಶ್ ಅವರಿಗೆ ಬಹಳ ಮುಖ್ಯವಾದ ಪಾತ್ರ ಸೃಷ್ಟಿಸಲಾಗಿದೆ.

ಅಂದಹಾಗೆ ಪ್ರೇಮ್ ಅವರ ಮೂಲ ಹೆಸರು ಬೈರೇಗೌಡ. ಆತ ಚಿತ್ರರಂಗಕ್ಕೆ ಬಂದ ನಂತರ ಅದನ್ನು ಪ್ರೇಮ್ ಎಂದು ಬದಲಾಯಿಸಿ ಕೊಂಡಿದ್ದರು.

"ಅಂಬರೀಷ್ ಅಣ್ಣನ ಜೊತೆ ನಾನು ಕಾಣಿಸಿಕೊಳ್ಳಬೇಕು ಎಂಬುದು ನನ್ನ ಅಭಿಮಾನಿಗಳ ಬಹಳ ದಿನದ ಆಸೆ" ಎಂದು ಪ್ರೇಮ್ ಹೇಳುತ್ತಿದ್ದಾರಾದರೂ ವಾಸ್ತವವಾಗಿ ಅದು ಅವರ ವೈಯಕ್ತಿಕ ಆಸೆ. ಹೇಗಿದ್ದರೂ ಈಗ ಅಂಬರೀಶ್ ಮಂತ್ರಿಯಾಗಿದ್ದಾರಲ್ಲದೆ ಚಿತ್ರರಂಗದ ನಾಯಕರೂ ಆಗಿದ್ದಾರೆ. ಅವರೊಂದಿಗೆ ನಟಿಸಿದರೆ ರಾಜಕೀಯ ಮತ್ತು ಚಿತ್ರರಂಗ ಈ ಎರಡು ವಲಯದಲ್ಲೂ ತಾನು ಅಂಬಿಯ ಉತ್ತರಾಧಿಕಾರಿ ಎಂದು ಪೋಸ್ ಕೊಡಬಹುದು ಎಂಬುದು ಪ್ರೇಮ್ ಲೆಕ್ಕಾಚಾರ.

ಮುಂದಿನ ವರ್ಷ ಪ್ರೇಮ್ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಈಗಿನಿಂದಲೇ ತೆರೆಮರೆಯಲ್ಲಿ ಸಿದ್ಧತೆ ನಡೆಸುತ್ತಿದ್ದಾರಂತೆ. ಆದರೆ ನಟಿ ರಮ್ಯಾ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂಬ ಮಾತು ಕಾಂಗ್ರೆಸ್ ವಲಯದಲ್ಲಿಯೇ ಕೇಳಿಬರುತ್ತಿದೆ.

ಅದೇನೆ ಇರಲಿ, ಬೈರೇಗೌಡ ಅಲಿಯಾಸ್ ಪ್ರೇಮ್ ಇಷ್ಟೆಲ್ಲ ರಾಜಕೀಯ 'ನಾಟಕ'ವಾಡುತ್ತಿರುವುದು ಗಾಂಧಿನಗರಿಗಳಿಗೆ ಪುಕ್ಕಟೆ ರಂಜನೆಯನ್ನಂತೂ ನೀಡುತ್ತಿದೆ.

'ಲಂಕೇಶ್'ನಲ್ಲಿ ಹೇಳಿರುವಂತೆ ಬಿಗ್ ಬಾಸ್ ಟಿವಿ ೋ ಇದು ರಿಯಾಲಿಟಿ ಶೋ ವೇಷದ ಗೋಲ್ ಮಾಲ್ ಟಕ ಎಂದು ಒಂದನೆಯ ದಿನದಿಂದಲೇ ಅರ್ಥವಾಗುತ್ತಿತ್ತು. ಜಗಳ ಮಾಡುವವರನ್ನು ಕ್ಲಾಸಿನಿಂದ ಔಟ್ ಾಡಲಾಗುತ್ತದೆ" -ಎಂದು ಶಾಲೆಯಲ್ಲಿ ಮೇಷ್ಟ್ರು ಹೇಳಿದರೆ, ವಿಯ 'ಬಿಗ್ ಬಾಸ್'ನಲ್ಲಿ ಸ್ಪರ್ಧಿಗಳಿಗೆ ಆಯೋಜಕರು ೇಳುವುದು ಉಲ್ಟಾ, ಅಂದರೆ- "ಜಗಳ ಮಾಡದೇ ುವವರನ್ನು ಔಟ್ ಮಾಡಲಾಗುತ್ತದೆ" ಎಂದು!

ಅದಕ್ಕಾಗಿ ಎಲ್ಲ ಸ್ಪರ್ಧಿಗಳೂ ಕಾಲು ಕೆರೆದು ಜಗಳ ಾಡಿ ಪ್ರೇಕ್ಷಕರ ಗಮನ ಸೆಳೆಯಲು ಪ್ರಯತ್ನಿಸಿದ್ದು, ವರ ಜಗಳಗಳೆಲ್ಲಾ ಒಂದು ನಾಟಕ ಎಂದು ಸೂಕ್ಷ್ಮವಾಗಿ ೋಡುವ ವೀಕ್ಷಕರಿಗೆ ಅರ್ಥವಾಗುತ್ತಿತ್ತು. ಇದರಿಂದ ೋಡುಗರ ಭಾವನೆಗಳನ್ನು ಕೆರಳಿಸಿ ವೀಕ್ಷಕರಿಂದಲೇ ಬಾಯಿ ಾತಿನ ಪ್ರಚಾರ ಮಾಡಿಸುವುದು. ಹಿಂದಿಯ 'ಸೆಲೆಬ್ರಿಟಿ ಬಿಗ್ ಬಾಸ್' ಎಂಬ ರಿಯಾಲಿಟಿ ಶೋನಲ್ಲಿ ರಾಖಿ ಸಾವಂತಳು ಸಹ ನಟಿಗೆ ಕೆಟ್ಟದಾಗಿ ಬಯ್ಯುವ ದೃಶ್ಯವನ್ನು 6-7 ರಿಪೀಟ್ ಮಾಡಿದ್ದಾರೆಂದರೆ ಈ ರಿಯಾಲಿಟಿ ಶೋಗಳ ಿಳಿಯುತ್ತು ಮತ್ತು ಶೋಟಿಂಗಿನ ತಮಾಷೆ ಅರ್ಥವಾಗು ದೆಯಲ್ಲವೇ. ಕ್ರಿಕೆಟ್‌ನಲ್ಲಿ ಫಿಕ್ಸಿಂಗ್ ಮಾಡಿ ಪ್ರೇಕ್ಷಕರಿಗೆ ಆಟಗಾರರು ದ್ರೋಹ ಮಾಡಿದರೆ ಶಿಕ್ಷೆಯುಂಟು. ಆದರೆ ರಿಯಾಲಿಟಿ ಶೋಗಳಲ್ಲಿ ಫಿಕ್ಸಿಂಗ್ ಮಾಡಿ ಟಿವಿಯವರು ಪ್ರೇಕ್ಷಕರಿಗೆ ದ್ರೋಹ ಬಗೆದರೆ ಯಾವುದೇ ಶಿಕ್ಷೆಯಿಲ್ಲ, ಟಿಆರ್‌ಪಿ ರೇಟಿನಲ್ಲಿ ವೀಕ್ಷಕ ಮಾತ್ರ ಮೂರ್ಖ ಾಗುವುದು.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಎಲ್ಲದಕ್ಕೂ ಸಾಕ್ಷ್ಯ ಮುಖ್ಯವಲ್ಲ

ಸಾಕ್ಷ್ಯಗಳೇ ಪರಂಪರೆಯನ್ನು ಅಳೆಯುತ್ತವೆ ಎನ್ನುವ ... ಸಾಕ್ಷ್ಯ ನಂಬಲಾರೆ. ಅದಕ್ಕೋಸ್ಕರ ಬಾರಿ ನಾವು ... ಸ್ಪಷ್ಟ ಆಗಿ ನಂಬುತ್ತೇವೆ. ಅದರಲ್ಲಿ ಮೊದಲನೆಯದು ಅಪ್ಪ-ಅಮ್ಮ. ನಾವು ಅವರನ್ನು ಡಿ.ಎನ್.ಎ ಪರೀಕ್ಷೆಗೆ ಒಳಪಡಿಸದೆ ನಮ್ಮ ಅಪ್ಪ-ಅಮ್ಮ ಎಂದು ನಂಬುವುದು ಯಾವ ಸಾಕ್ಷ್ಯಗಳಿಂದ? ಹೇಗೆ ನಾವು ಅವರನ್ನು ನಮ್ಮ ಜನನವನ್ನು ಸಾಕ್ಷ್ಯವಿಲ್ಲದೆ ನಂಬುತ್ತೇವೋ ಹಾಗೆಯೇ ಅವರು ಹಾಕಿಕೊಟ್ಟ ಪರಂಪರೆಯನ್ನು ಕೂಡ. ಅಪ್ಪ ಮಗಳಿಗೆ ವೈಜ್ಞಾನಿಕ ಪತ್ರ ಬರೆದಿರಬಹುದು, ಅಮ್ಮ ಬರೆದಿದ್ದಾಳಾ? ಅಮ್ಮ ಯಾವಾಗಲೂ ಮಕ್ಕಳನ್ನು ಪರಂಪರಾಗತವಾಗಿ ನಡೆಸುವುದರಿಂದಲೇ ಆಕೆ ಕಣ್ಣಿಗೆ ಕಾಣುವ ದೇವರಾಗಿದ್ದಾಳೆ. ಇಂತಹ ಅಪ್ಪಂದಿರು ಬರೆದ ಪತ್ರ ಎಂತಹ ಮಕ್ಕಳಿಗೂ ಅವೈಜ್ಞಾನಿಕವಲ್ಲದೆ ಮತ್ತೇನೂ ಅಲ್ಲ. ನಾಸ್ತಿಕತೆಯನ್ನಷ್ಟೆ ಎತ್ತಿ ಹಿಡಿದು ಬೇರೆಲ್ಲ ಭಾವನೆ, ಸಂಬಂಧಗಳನ್ನು ಗಾಳಿಗೆ ತೂರುವ ಈ ಪತ್ರ ಯಾರೋ ಆಸ್ತಿಕತೆಯನ್ನು ಹಾಳು ಮಾಡಲು ಬರೆದಿರುವರು. ಆತ ಮಗಳಿಗೆ ಬರೆದ ಆ ಪತ್ರ ಯಾವ ರೀತಿಯಲ್ಲಿ ಆಕೆಯನ್ನು ಸಾಧನೆ ಪಥದಲ್ಲಿ ಕೊಂಡೊಯ್ಯುವುದು?

ಸಾಕ್ಷಿಗಳನ್ನು ನಾಶಮಾಡಬಹುದು, ಸಂಸ್ಕೃತಿಯನ್ನಲ್ಲ. ಸಾಕ್ಷಿಗಳನ್ನು ತಿರುಚಬಹುದು, ಪರಂಪರೆಯನ್ನಲ್ಲ. ಇವತ್ತಿಗೂ ಭಾರತ ನಿಂತಿರುವುದು, ಭಾರತದ ಸಂವಿಧಾನ ನಿಂತಿರುವುದು ನಂಬಿಕೆ ಎನ್ನುವ ಪದದ ಮೇಲೆ ಹೊರತು ಯಾವ ಸಾಕ್ಷಿಗಳ ಮೇಲೂ ಅಲ್ಲ. ಇನ್ನು ಭೂತ್ತೇರಿಯಲ್ಲಿ ಪಾಪ ನಮ್ಮ ಹೇಜಾವರರನ್ನು ಅಷ್ಟು ಪೀಕಲಾಟಕ್ಕೆ ಒಳಗಾಗಿಸ ಬಾರದಿತ್ತು. ಅವರ ಕೆಲವು ತತ್ವದಲ್ಲಿ ನನಗೂ ನಂಬಿಕೆಯಿಲ್ಲ. ಆದರೂ ಒಬ್ಬ ಹಿರಿಯ ಜೀವಿಗೆ ಆ ತರಹದ ಪ್ರಶ್ನೆ ಕೇಳುವುದು ನಮ್ಮ ಸಂಸ್ಕೃತಿಯನ್ನು ಕೆಡಿಸುತ್ತದೆ ಎನ್ನುವುದು ನನ್ನ ಭಾವನೆ. ಕುಣಿಗಲ್ ನಾಗಭೂಷಣ್ ಬಗ್ಗೆ ಹೃದಯಶಿವ ಚೆಂದವಾಗಿ ಬರೆದಿದ್ದಾರೆ. ಕುಣಿಗಲ್‌ರ ಅಭಿನಯ 'ಯಾರಿಗೂ ಹೇಳ್ಬೇಡಿ' ಚಿತ್ರದಲ್ಲಿ ನೋಡಿ ಖುಷಿಪಟ್ಟವನು ನಾನು...

ಈ ವಾರದ ಲಂಕೇಶ್ ಸದಭಿರುಚಿಯ ಅಡಿಗೆಯಾಗಿತ್ತು.


- ಅಭಿನಂದನ್ ಬಳ್ಳಾರಿ, ಬೆಂಗಳೂರು

ದರ್ಶನ ಸೂಪರ್

ಈ ವಾರದ ದರ್ಶನ ಕುರಿತ ಬರಹ ಸೂಪರ್ ಆಗಿತ್ತು. ಥ್ಯಾಂಕ್ಸ್.

- ಬಸವರಾಜು ಅಂಗಡಿ, ಗದಗ

ರುಕ್ಮಿಣಿಯಕ್ಕ ಸಂದರ್ಶನ



ಬಿ.ಎಂ. ರೋಹಿಣಿಯಕ್ಕನವರ ಸಂದರ್ಶನ ಬಹಳ ಚೆನ್ನಾಗಿತ್ತು. ಅವರ ಉತ್ತರಗಳು ನೇರ, ಸರಳ ಹಾಗೂ ಅಕೃತಿಮ. ಅವರ ಧೋರಣೆ ಮತ್ತು ವಿಶ್ಲೇಷಣೆ, ಜೀವಪ್ರೋತ್ಸಾಹ ಈ ದಿನಗಳಲ್ಲಿ ಅಪರೂಪದ ಸಂಗತಿ. ಸಂದರ್ಶನ ನಡೆಸಿದ ಅರವಿಂದ ಚೊಕ್ಕಾಡಿ ಹಾಗೂ ಪ್ರಕಟಿಸಿದ 'ಲಂಕೇಶ್'ಗೂ ವಂದನೆಗಳು.

ಪಾಪ! ಕುಂಬ್ಳೆ ಬಿಜೆಪಿಯಿಂದ ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬ ಪುಕಾರು ಇರುವಾಗ ಅವರ ಪ್ರಾಣಿ ಪ್ರೀತಿಯ ವಂಚನೆ ಕುರಿತು ವರದಿ ಮಾಡೋದಾ?

ಆರೆಸ್ಸೆಸ್ ಮತ್ತು ರಿಲಯನ್ಸ್ ಜೊತೆ ಸೇರಿದವರು ಪ್ರಾಮಾಣಿಕ ಕೆಲಸ ಮಾಡೋಕೆ ಎಂದಾದರೂ ಸಾಧ್ಯವಾ?

ಪ್ರಾಣಿಗಳು, ಕಾಡುಗಳು ನಾಶವಾಗಲಿ, ಅವುಗಳ ಮೂಲಕ ಅವುಗಳ ಸ್ವಯಂಘೋಷಿತ ರಕ್ಷಕರ ಕಿಸೆ ತುಂಬಿದರೆ ಸಾಕಲ್ಲ.

- ರವಿಕುಮಾರ್, ಹಾಸನ

ರಂಗ ಪರಿಚಯ ಚೆನ್ನಾಗಿದೆ

ಲಂಕೇಶನಲ್ಲಿ ಪ್ರಕಟವಾಗುತ್ತಿರುವ ರಂಗ-ಅಂತರಂಗ ಅಂಕಣದಲ್ಲಿ ಕರ್ನಾಟಕದ ರಂಗ ತಂಡಗಳ ಪರಿಚಯ ಸಿಗುತ್ತಿರುವುದರಿಂದ ಬಹಳ ಉಪಯುಕ್ತ ಹಾಗೂ ಉತ್ತೇಜನಕಾರಿಯಾಗಿದೆ.

- ಲವಕುಮಾರ್, ತಿಪ್ಟೂರು

ಪತ್ರಿಕೆ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಸಂತೋಷ.

- ವಿ.ಗಿರಿಧರ್, ಈ ಮೇಲ್ ಮೂಲಕ

ಬಿಡಿ ಚಿತ್ರ ಓದಿದ ಮೇಲೆ...

ಪಾರ್ವತೀಶರ ಬಿಡಿ ಚಿತ್ರಗಳು ಓದಿ ಬರೆಯಲೇ ಬೇಕೆನಿಸಿದ್ದರಿಂದ ಒಂದೆರಡು ಮಾತು... ಲೇಖನ ಸಕಾಲಿಕವಾಗಿದೆ. ಸಮಾಜದ ಮುಖ್ಯವಾಹಿನಿ ಯಿಂದ ದೂರವಿರುವ ಕಾಡಿನಲ್ಲಿರುವವರು ಹಾಗೂ ನಾಡಿನಲ್ಲಿರುವವರೆಲ್ಲ ಹೊರಬಂದು ಒಂದು ಪ್ರಬಲ ಜನಾಂದೋಲನ ಕಟ್ಟಲು ನಿಂತರೆ ಇಲ್ಲಿ ಹೊಸದೇನಾದರೂ ಆಗುವ ಸಾಧ್ಯತೆ ಖಂಡಿತಾ ಇದೆ. ಸರ್ಕಾರ ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಿ, ಹಾಗೂ ನಮ್ಮ ನಾಡಿನ ಬುದ್ಧಿಜೀವಿಗಳು ಮತ್ತು ಪ್ರಗತಿಪರರೂ ಈ ಪ್ರಯತ್ನಕ್ಕೆ ಒಂದಾಗಿ ಕೈ ಜೋಡಿಸಿದರೆ ಏನಾದರೂ ಒಳ್ಳೆಯದಾಗಬಹುದು ಎಂಬುದು ನಮ್ಮೆಲ್ಲರ ನಿರೀಕ್ಷೆ. ಅಂತಹ ಪ್ರಯತ್ನಗಳೇನಾದರೂ ಆಗುವುದಿದ್ದರೆ ದನಿಗೂಡಿಸಲು ಅನೇಕರು ಮುಂದೆ ಬರಬಹುದು.

- ಪಿ.ಟಿ. ಅನ್ವರ್, ಚಿತ್ರದುರ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳಿಸಬಹುದು. ನಿಮ್ಮ ಪತ್ರಿಕೆಗಳನ್ನು 9980331427 ಸಂಖ್ಯೆಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 31-07-2013

ಸಜ್ಜನಿಕೆಯ ಶೃಂಗಾರ್ ನಾಗರಾಜ್



ಮೊನ್ನೆ ನಿಧನರಾದ ನಿರ್ಮಾಪಕ ಶೃಂಗಾರ್ ನಾಗರಾಜ್ ಅವರ ಬಗ್ಗೆ ಎರಡು ಮಾತು. ಇವರು ಹಲವಾರು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತಾ ಬಂದಿದ್ದರೂ 'ಪುಷ್ಪಕ ವಿಮಾನ' ಎಂಬ ಯಶಸ್ವಿ ಚಿತ್ರವನ್ನು ನಿರ್ಮಿಸುವ ಮೂಲಕ ಒಮ್ಮಿಂದೊಮ್ಮೆಗೆ ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲ ಇಡೀ ಭಾರತೀಯ ಚಿತ್ರರಂಗದ ದೊಡ್ಡ ಸುದ್ದಿ ಮಾಡಿದ್ದರು.

ಮೂಲತಃ ನಾಗರಾಜ್ ಅವರು ಒಬ್ಬ ಒಳ್ಳೆಯ ವಿಡಿಯೋಗ್ರಾಫರ್ ಮತ್ತು ಫೋಟೋಗ್ರಾಫರ್. ಡಾ.ರಾಜ್‌ಕುಮಾರ್ ಅವರ ಕುಟುಂಬದ ಬಹುತೇಕ ಎಲ್ಲಾ ಸಮಾರಂಭಗಳಿಗೆ ಅವರೇ ಅಧಿಕೃತವಾಗಿ ಫೋಟೋಗ್ರಾಫರ್ ಆಗಿರುತ್ತಿದ್ದರು ಎಂಬುದು ಅವರಿಗೆ ಹೆಗ್ಗಳಿಕೆಯ ವಿಷಯವಾಗಿತ್ತು. ರಾಜ್ ಕುಟುಂಬದ ಅಧಿಕೃತ ವಿಡಿಯೋಗ್ರಾಫರ್ ಎಂಬ ಕಾರಣಕ್ಕಾಗಿಯೇ ಅವರಿಗೆ ಬೇರೆ ಬ್ಯಾನರ್‌ಗಳಲ್ಲೂ ಗೌರವ ಸಿಗುತ್ತಿತ್ತು. ಆ ಮೂಲಕ ಸಿನಿಮಾಗಳಲ್ಲಿ ಅವರಿಗೆ ಸಣ್ಣಪುಟ್ಟ ಪಾತ್ರಗಳೂ ದೊರಕುತ್ತಿದ್ದವು.


ಇವರಿಗೆ 'ಶೃಂಗಾರ್ ನಾಗರಾಜ್' ಎಂದು ಹೆಸರು ಬಂದಿದ್ದರ ಹಿಂದೆ ಒಂದು ಕಥೆಯಿದೆ. ಸಾಧಾರಣವಾಗಿ ಸಿನಿಮಾ ರಂಗಕ್ಕೆ ಸಂಬಂಧಪಟ್ಟ ಯಾವುದೇ ಸಭೆ, ಸಮಾರಂಭ, ಮುಹೂರ್ತ ಅಥವಾ ಪಾರ್ಟಿ ಇರಲಿ ನಾಗರಾಜ್ ಅವರು ಒಬ್ಬ ನಾಯಕ ನಟನಿಗಿಂತಲೂ ಚೆನ್ನಾಗಿ ಶೃಂಗಾರ ಮಾಡಿಕೊಂಡು, ಕೋಟ್ ಹಾಕಿಕೊಂಡು ಹಾಜರಾಗುತ್ತಿದ್ದರು. ನೋಡಲು ಸುರದ್ರೂಪಿಯಾಗಿದ್ದ ಅವರು ಯಾವುದೇ ಗುಂಪಿನಲ್ಲಿ ಎದ್ದು ಕಾಣಿಸುತ್ತಿದ್ದರು. ಸಿನಿಮಾ ಉದ್ಯಮದಲ್ಲಿ ಅನೇಕ ಜನ ನಾಗರಾಜ್‌ಗಳು ಇದ್ದುದರಿಂದ ಸಿನಿಮಾ ಜನ ಈ ಸೊಗಸುಗಾರನಿಗೆ 'ಶೃಂಗಾರ್ ನಾಗರಾಜ್' ಎಂದು ಮರುನಾಮಕರಣ ಮಾಡಿದರು. ಅದಾದ ನಂತರ ಅವರು ಶೃಂಗಾರ್ ನಾಗರಾಜ್ ಎಂದೇ ಉದ್ಯಮದಲ್ಲಿ ಪಾಪ್ಯುಲರ್ ಆಗಿದ್ದರು.


ನಾಗರಾಜರು ರಾಜ್‌ಕುಮಾರ್ ಅವರ ಮನೆಗೆ ಹೋಗುತ್ತಿದ್ದಾಗ ಅವರ ಪುತ್ರ ರಾಮ್‌ಕುಮಾರ್ ಕೂಡ ಅವರ ಜೊತೆ ಹೋಗುತ್ತಿದ್ದರು. ತನ್ನ ತಂದೆಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ರಾಮ್‌ಕುಮಾರ್ ಮತ್ತು ರಾಜ್‌ಕುಮಾರ್ ಅವರ ಪುತ್ರಿ ಪೂರ್ಣಿಮಾ ನಡುವೆ ಪ್ರೇಮಾಂಕುರವಾಯಿತು. ಆನಂತರ ಅವರಿಬ್ಬರೂ ಮದುವೆಯಾದರು.

ಸದಾ ಹಸನ್ಮುಖಿಯಾಗಿರುತ್ತಿದ್ದ ಶೃಂಗಾರ್ ನಾಗರಾಜ್ ಯಾವತ್ತೂ ಯಾವುದೇ ವಾದ-ವಿವಾದಗಳಲ್ಲಿ ಸಿಲುಕಿದವರೇ ಅಲ್ಲ, ಅವರು ಸಜ್ಜನಿಕೆ ಮತ್ತು ನಯ-ವಿನಯತೆಗೆ ಹೆಸರುವಾಸಿಯಾಗಿದ್ದರು. ಒಬ್ಬ ಸಾಮಾನ್ಯ ಫೋಟೋಗ್ರಾಫರ್ ಆಗಿದ್ದ ಅವರು ಸದ್ದು-ಗದ್ದಲವಿಲ್ಲದೇ ನಟನಾಗಿ, ನಿರ್ಮಾಪಕನಾಗಿ ಬೆಳೆದದ್ದು ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ. ಟಾಕಿ ಯುಗದಲ್ಲಿ ಧೈರ್ಯ ಮಾಡಿ 'ಪುಷ್ಪಕ ವಿಮಾನ' ಎಂಬ ಮೂಕಿ ಸಿನಿಮಾವನ್ನು ನಿರ್ಮಿಸಿ, ರಾಷ್ಟ್ರಮಟ್ಟದಲ್ಲಿ ದೊಡ್ಡ ಸುದ್ದಿ ಮಾಡಿದ್ದು ಅವರ ಸಾಹಸ ಪ್ರವೃತ್ತಿಯನ್ನು ತೋರಿಸುತ್ತದೆ.

ಎಲ್ಲರ ಮೆಚ್ಚುಗೆಯ ಮನುಷ್ಯರಾಗಿದ್ದ ಶೃಂಗಾರ್ ನಾಗರಾಜ್ ಈಗ ನೆನಪು ಮಾತ್ರ.

ಹಾಟ್ ಸೀಟಲ್ಲಿ ಶಿವಣ್ಣ





ಪುನೀತ್ ರಾಜ್‌ಕುಮಾರ್ ನಡೆಸಿಕೊಡುವ ಕನ್ನಡದ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಅನೇಕ ಸಿನಿಮಾ ತಾರೆಯರು ಮತ್ತು ಕ್ರೀಡಾಪಟುಗಳು ಈ ಹಿಂದೆ ಭಾಗವಹಿಸಿದ್ದಾರೆ. ಅದರಲ್ಲೂ ರಮ್ಯ ಮತ್ತು ಜಗ್ಗೇಶ್ ಭಾಗವಹಿಸಿದಾಗ ಈ ಕಾರ್ಯಕ್ರಮಕ್ಕೆ ಒಳ್ಳೆಯ ಟಿ.ಆರ್.ಪಿ ರೇಟಿಂಗ್ ಸಿಕ್ಕಿತ್ತು. ಆದರೆ ಈ ಕಾರ್ಯಕ್ರಮದ ಕೊನೆಯ ಕಂತಿನಲ್ಲಿ ಒಬ್ಬ ವಿಶೇಷ ಅತಿಥಿ 'ಹಾಟ್ ಸೀಟ್'ನಲ್ಲಿ ಕುಳಿತು ಪುನೀತ್ ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ.

ಅವರು ಶಿವರಾಜ್‌ಕುಮಾರ್.

ಶಿವರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್‌ರನ್ನು ಒಂದೇ ಬೆಳ್ಳಿ ಪರದೆಯ ಮೇಲೆ ನೋಡಬೇಕೆಂಬುದು ಅವರಿಬ್ಬರ ಅಭಿಮಾನಿಗಳ ಬಹಳ ದಿನಗಳ ಆಶೆಯಾಗಿದೆ. ಅವ[...] ಆಶೆ ಈಡೇರುವ ಮೊದಲ ಹಂತವೋ ಎಂಬಂತೆ ಇದೀಗ ಕಿರುತೆರೆಯಲ್ಲಿ ಸಹೋದರರಿಬ[...] ಒಟ್ಟಿಗೆ ಕಾಣಿಸಿಕೊಳ್ಳಲಿದ್ದಾರೆ.

ವಿಚಿತ್ರವೆಂದರೆ ಪುನೀತ್ ರಾಜ್‌ಕುಮಾರ್ ಮೂರನೆ ತರಗತಿಯಲ್ಲಿ ಓದುತ್ತಿದ್ದಾಗಲೇ ವಿದ್ಯಾಭ್ಯಾಸಕ್ಕೆ ಸ[...] ಹೊಡೆದವರು. ಆನಂತರ ಅವರು ಮನೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಿದರು. ಆದರೆ ಶಿವರಾಜ್‌ಕುಮ[...] ಮದ್ರಾಸ್‌ನಲ್ಲಿ ಪದವಿಯನ್ನು ಮುಗಿಸಿದ ನಂತರ ಒಂದಷ್ಟು ದಿನ ಫಾರ್ಮಸಿಯನ್ನೂ ಓದಿದ್ದರು. ಆದರೆ ಈಗ ತ[...] ಪುನೀತ್ ಕೇಳುವ ಪ್ರಶ್ನೆಗಳಿಗೆ ಅಣ್ಣ ಶಿವಣ್ಣ ಸರಿಯಾದ ಉತ್ತರಗಳನ್ನು ಹೇಳಬೇಕಿದೆ.

ಪುನೀತ್ ಮತ್ತು ಶಿವರಾಜ್‌ಕುಮಾರ್ ಅವರ ಸಮಾಗಮದ ಈ ಒಂದು ಎಪಿಸೋಡ್ ಎಲ್ಲರನ್ನು ರಂಜಿಸುವುದ[...] ಯಾವುದೇ ಸಂಶಯವಿಲ್ಲ, ಏಕೆಂದರೆ ಈ ಇಬ್ಬರಿಬ್ಬರ ನಡುವಿನ ಸಂಬಂಧ ಸಹೋದರತ್ವಕ್ಕಿಂತ ಸ್ನೇಹಮಯಿಯಾ[...] – ಒಂದೇ ಸಿನಿಮಾಕ್ಕೆ ಇವರಿಬ್ಬರ ಕಾಲ್‌ಶೀಟ್‌ಅನ್ನು ಪಡೆಯಲು ಹಲವಾರು ನಿರ್ಮಾಪಕರು ಯತ್ನಿಸು[...] ಇದ್ದಾರೆ. ಇತ್ತೀಚೆಗೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಇವರಿಬ್ಬರಿಗೂ ಇಷ್ಟವಾಗಿರುವ ಕತೆಯನ್ನು ಹೇಳಿಸಿ[...] ಎಂಬ ಸುದ್ದಿ ಇದೆ. ಆದರೆ ಸಹೋದರರು ಈಗಾಗಲೇ ಒಪ್ಪಿಕೊಂಡಿರುವ ಸಿನಿಮಾಗಳನ್ನು ಮುಗಿಸಿದ ನಂತ[...] ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬ ಮಾತು ಕೇಳಿಬರುತ್ತಿದೆ.

ಸದ್ಯದಲ್ಲೇ ಇವರಿಬ್ಬರು ಒಂದೇ ಸಿನಿಮಾದಲ್ಲಿ ನಟಿಸುತ್ತಾರೋ ಇಲ್ಲವೋ ಗೊತ್ತಿಲ್ಲ ಆದರೆ ಕಿರುತೆರೆಯಲ್ಲಿ[...] 'ಸಹೋದರರ ಸವಾಲ್' ನಡಯಲಿದೆ.

– ಶೇ[...]

ಒಂದು... ಎರಡು... ಮೂರು ಆಮೇಲ್ಯಾರು?



ಸಾಧಾರಣವಾಗಿ ಚಿತ್ರರಂಗಗಳಲ್ಲಿ ನಂಬರ್ ಒನ್ ಸ್ಥಾನಕ್ಕೆ ಪೈಪೋಟಿ ನಡೆಯುತ್ತದೆ. ಆದರೆ ಕನ್ನಡ ಚಿತ್ರರಂಗ ಇತರೆ ಭಾಷೆಗಳಿಗಿಂತ ಭಿನ್ನ. ಯಾಕೆಂದರೆ ಇಲ್ಲಿ ಕಳೆದ ಎರಡು ವಾರಗಳಿಂದ ನಾಲ್ಕನೇ ಸ್ಥಾನದ ಬಗ್ಗೆ ಬಿಸಿ ಬಿಸಿ ಚರ್ಚೆ ನಡೆಯುತ್ತಿದೆ!

ಇದಕ್ಕೆ ಕಾರಣ ನಿರ್ಮಾಪಕ ಮತ್ತು ಹಂಚಿಕೆದಾರ ಜಯಣ್ಣ ಅವರ ಮಾತು. ಇತ್ತೀಚೆಗೆ ಜಯಣ್ಣನವರು "ನನ್ನ ಪ್ರಕಾರ ಯುವ ನಾಯಕ ನಟ ಯಶ್ ಮೊದಲ ಮೂರು ಯಶಸ್ವಿ ನಾಯಕ ನಟರ ನಂತರದ ಸ್ಥಾನವನ್ನು ಹೊಂದಿದ್ದಾರೆ. ಆ ಕಾರಣಕ್ಕಾಗಿಯೇ ನಾನು ಯಶ್ ಅವರನ್ನೇ ಹಾಕಿಕೊಂಡು ಚಿತ್ರ ಮಾಡುತ್ತಿದ್ದೇನೆ" ಎಂದು ಹೇಳಿದರು. ಜಯಣ್ಣ ಅವರ ಈ ಒಂದು ಹೇಳಿಕೆಯಿಂದಾಗಿ ಅನೇಕ ಯುವ ನಾಯಕ ನಟರಿಗೆ ಇರುಸುಮುರುಸಾಗಿದೆ. ಅದರಲ್ಲೂ ಗಣೇಶ್, ವಿಜಯ್, ಶ್ರೀನಗರ ಕಿಟ್ಟಿ, ಚಿರಂಜೀವಿ ಸರ್ಜಾ, 'ನೆನಪಿರಲಿ' ಪ್ರೇಮ್ ಮೊದಲಾದವರೆಲ್ಲ ಜಯಣ್ಣನ ವಿರುದ್ಧ ಸಿಟ್ಟು ಮಾಡಿಕೊಂಡಿದ್ದಾರೆ. ಈ ನಟರನ್ನು ಉಪೇಂದ್ರ ಬೆಂಬಲಿಸುತ್ತಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಅದಕ್ಕೆ ಕಾರಣವಿಷ್ಟೇ: ಮೊದಲ ಮೂರು ಸ್ಥಾನದಲ್ಲಿ ಉಪ್ಪಿಯ ಹೆಸರಿಲ್ಲದಿರುವುದು!

ಅಂದಹಾಗೆ, ಈ ಜಯಣ್ಣ ಆರಂಭದಲ್ಲಿ ಯಶ್‌ನನ್ನು ಹಾಕಿಕೊಂಡು 'ಜಾನಿ' ಎಂಬ ಚಿತ್ರವನ್ನು ನಿರ್ಮಿಸಿದ್ದರು. ಆ ಚಿತ್ರ ಮುಗಿಯುವ ಮೊದಲೇ ಯೋಗರಾಜ್ ಭಟ್‌ರ ಜೊತೆಗೂಡಿ 'ಪರಮಾತ್ಮ' ಚಿತ್ರಕ್ಕೆ ಯಶ್‌ನನ್ನು ಆಯ್ಕೆ ಮಾಡಿದ್ದರು. ಇದೀಗ ಯಶ್-ಜಯಣ್ಣ ಕಾಂಬಿನೇಷನ್‌ನ 'ಗೂಗ್ಲಿ' ಚಿತ್ರದ ತೆರೆ ಕಾಣಲಿದೆ. ಈ ಚಿತ್ರ ಮುಗಿಯುವ ಮುನ್ನವೇ ಅದೇ ಯಶ್‌ನನ್ನು ಹಾಕಿಕೊಂಡು 'ಗಜಕೇಸರಿ' ಎಂಬ ಮತ್ತೊಂದು ಚಿತ್ರವನ್ನು ಜಯಣ್ಣ ಆರಂಭಿಸಿದ್ದಾರೆ. ಇದೀಗ ಬಂದ ಸುದ್ದಿಯಂತೆ ತೆಲುಗು ಚಿತ್ರದ ರಿಮೇಕ್ ಹಕ್ಕನ್ನು ಯಶ್‌ಗಾಗಿ ನಿರ್ಮಾಪಕ ಜಯಣ್ಣ ತಂದಿದ್ದು ಅದಕ್ಕೂ ಯಶ್ ತನ್ನ ಕಾಲ್‌ಶೀಟನ್ನು ನೀಡಿದ್ದಾರಂತೆ. ಅಂದರೆ, ಕೇವಲ ಎರಡು ವರ್ಷಗಳ ಅವಧಿಯಲ್ಲಿ ಒಬ್ಬ ನಾಯಕ ನಟನನ್ನು ಹಾಕಿಕೊಂಡು ಅದೇ ನಿರ್ಮಾಪಕ ಐದು ಚಿತ್ರಗಳನ್ನು ನಿರ್ಮಿಸಿರುವುದು ಇತ್ತೀಚಿನ ದಿನಗಳಲ್ಲಿ ಮಾತ್ರವಲ್ಲ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಬಹಳ ಅಪರೂಪದ ಘಟನೆಯೆನ್ನಬಹುದು.

"ಯಶ್‌ನನ್ನು ಹಾಕಿಕೊಂಡು ಚಿತ್ರ ಮಾಡಿದ ನನಗೆ ಯಾವುದೇ ನಷ್ಟವಾಗಿಲ್ಲ, ಖಂಡಿತವಾಗಿಯೂ ಆತ ನಂಬರ್ ನಾಲ್ಕರ ಸ್ಥಾನದಲ್ಲಿದ್ದಾರೆ" ಎಂಬ ಜಯಣ್ಣನವರ ಮಾತನ್ನು ಉಳಿದ ಕಲಾವಿದರು ಸಂಪೂರ್ಣವಾಗಿ ತಳ್ಳಿಹಾಕುತ್ತಿದ್ದಾರೆ.

ಅದೇನೇ ಇರಲಿ, ಇತ್ತೀಚೆಗೆ ಯಶ್ ಚಿತ್ರಗಳೆಲ್ಲವೂ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿವೆ. ಹಾಗೆಯೇ ಕಿಟ್ಟಿ, ಗಣೇಶ್, ಉಪ್ಪಿ ಮೊದಲಾದವರ ಚಿತ್ರಗಳು ಸಾಲುಸಾಲಾಗಿ ಸೋತಿವೆ. ಸಿನಿಮಾ ರಂಗದಲ್ಲಿ ಬಾಕ್ಸ್ ಆಫೀಸ್‌ನ ಅಂಕಿ ಅಂಶವೇ ತಾನೇ ಮುಖ್ಯ?



ವಿಶಲ್ ಪ್ರಣೀತ



ದರ್ಶನ್ ಈಗ ತಾನು ಬರೀ 'ಬಾಕ್ಸ್ ಆಫೀಸ್ ಬಾದ್‌ಶಾಹ್' ಮಾತ್ರವಲ್ಲ, ಅದರ ಜೊತೆಗೆ 'ಪ್ರಶಸ್ತಿ ವಿಜೇತ ನಟ' ಎಂದೆನಿಸಿಕೊಳ್ಳುವ ಸಂಭ್ರಮದಲ್ಲಿದ್ದಾರೆ. ದರ್ಶನ್ ಚಿತ್ರರಂಗಕ್ಕೆ ಬಂದು ಸುಮಾರು 10 ವರ್ಷಗಳಾದರೂ ಈತನಕ ಆತನಿಗೆ ಒಂದೇ ಒಂದು ಪ್ರಶಸ್ತಿ ಲಭಿಸಿರಲಿಲ್ಲ, ಇದೀಗ 'ಸಂಗೊಳ್ಳಿ ರಾಯಣ್ಣ' ಚಿತ್ರದ ಪಾತ್ರಕ್ಕಾಗಿ ದರ್ಶನ್‌ಗೆ 'ಫಿಲ್ಮ್ ಫೇರ್' ಪ್ರಶಸ್ತಿ ಲಭಿಸಿದೆ. ಬರುವ 20 ರಂದು ಮದ್ರಾಸ್‌ನಲ್ಲಿ ನಡೆಯಲಿರುವ ವರ್ಣರಂಜಿತ ಸಮಾರಂಭದಲ್ಲಿ ದರ್ಶನ್ ಈ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ದರ್ಶನ್ ತನ್ನ ವೃತ್ತಿಜೀವನದ ಆರಂಭದಲ್ಲಿ 'ನನ್ನ ಪ್ರೀತಿಯ ರಾಮು' ಎಂಬ ಕಲಾತ್ಮಕ ಚಿತ್ರದಲ್ಲಿ ಕುರುಡನ ಪಾತ್ರದಲ್ಲಿ ನಟಿಸಿದ್ದರು. ಆ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಬರುತ್ತದೆ ಎಂದು ದರ್ಶನ್ ಭಾರೀ ನಿರೀಕ್ಷೆಯಲ್ಲಿದ್ದರು. ಆದರೆ ಅದು ರೀಮೇಕ್ ಚಿತ್ರವಾಗಿದ್ದರಿಂದ ಪ್ರಶಸ್ತಿ ತಪ್ಪಿಹೋಯಿತು. ಆಗ ದರ್ಶನ್ "ನಾನು ಇನ್ನೆಂದೂ ಪ್ರಶಸ್ತಿಗಾಗಿ ಇಂತಹ ಚಿತ್ರಗಳಲ್ಲಿ ನಟಿಸುವುದಿಲ್ಲ" ಎಂದು ಘೋಷಿಸಿದ್ದರು. ಮಾತ್ರವಲ್ಲ, ಆ ಘೋಷಣೆಗೆ ತಕ್ಕಂತೆ ಅವರು ಬರೀ ಹೊಡಿ-ಬಡಿ-ಕಡಿ ಚಿತ್ರಗಳಲ್ಲಿ ನಟಿಸುತ್ತ ಬಾಕ್ಸ್ ಆಫೀಸಿನ ಡಾರ್ಲಿಂಗ್ ಎಂದೆನಿಸಿಕೊಂಡರು. ಇತ್ತೀಚೆಗಂತೂ ದರ್ಶನ್ ನಟಿಸಿರುವ ಚಿತ್ರಗಳೆಲ್ಲ ಬಾಕ್ಸ್ ಆಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆಯುತ್ತಿವೆ. ಇಂತಹ ಸಂದರ್ಭದಲ್ಲೇ ದರ್ಶನ್‌ಗೆ ಫಿಲ್ಮ್ ಫೇರ್ ಪ್ರಶಸ್ತಿ ಬಂದಿರುವುದು ಸಹಜವಾಗಿಯೇ ಆತನಿಗೆ ಹುಮ್ಮಸ್ಸು ನೀಡಿದೆ.



ಜಾಬ್ ನ್ಯೂಸ್ ಹೊಸ ಸಂಚಿಕೆ

ಲಂಕೇಶ್ ಮೀಡಿಯಾದ ಹೊಸ ಸಂಚಿಕೆಗಳು

ಈಗ ಎಲ್ಲೆಡೆ ಲಭ್ಯ

ಪ್ರತಿಗಳಿಗಾಗಿ
080-26676427
9880302817

ಗೈಡ್ ಆಗಸ್ಟ್ 2013ರ ಹೊಸ ಸಂಚಿಕೆ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone : [...]
Fax : 26604536, E-mail :[...]